


ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮಾರ್ಚ್ 23 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 333 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಬಂದ್‌ಗೆ ಓಗೊಡದ ಜನತೆ

ಜನಜೀವನ ಸಾಮಾನ್ಯ; ಸಂಚಾರವೂ ಸುಗಮ; ವ್ಯಾಪಾರ-ವಹಿವಾಟು ಮಾಮೂಲು

ಬೆಂಗಳೂರು, ಮಾ.22(ಕೆಎಂಶಿ)– ರಾಜ್ಯದ ಗಡಿಭಾಗದಲ್ಲಿ ಎಂಇಎಸ್ ಪುಂಡಾಟಿಕೆ ಖಂಡಿಸಿ, ಮೇಕೆದಾಟು ಯೋಜನೆ ಜಾರಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಆಗ್ರಹಿಸಿ ಇಂದು ನೀಡಿದ್ದ ಕರ್ನಾಟಕ ಬಂದ್ ಕರೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಬಂದ್ ಕರೆಯಿಂದಾಗಿ ಬಸ್ ನಿಲ್ದಾಣಗಳಲ್ಲಿ ಜನಸಂದಣಿ ಎಂದಿಗಿಂತ ಸ್ವಲ್ಪ ಕಡಿಮೆಯಿತ್ತು, ಸರ್ಕಾರಿ ಹಾಗೂ ಖಾಸಗಿ ಬಸ್ ಸೇರಿದಂತೆ ಇನ್ನಿತರ ವಾಹನಗಳ ಸಂಚಾರ ಮಾಮೂಲಿನಂತಿತ್ತು. ಬಂದ್‌ನಿಂದ ಎಲ್ಲಿಯೂ ತೊಂದರೆ, ಗಲಭೆ ಉಂಟಾದ ವರದಿ ಇಲ್ಲ. ರಾಜಧಾನಿ ಬೆಂಗಳೂರಿನಲ್ಲಿ ಜನಜೀವನ ಸಹಜ ಸ್ಥಿತಿಯಲ್ಲಿತ್ತು, ಅಂಗಡಿ–ಮುಂಗಟ್ಟುಗಳ ■6ನೇ ಪುಟಕ್ಕೆ

ಮೈಸೂರಲ್ಲಿ ಪ್ರತಿಭಟನೆಗಷ್ಟೇ ಬಂದ್ ಸೀಮಿತ



ಕನ್ನಡಪರ ಹೋರಾಟಗಾರರು ಪೊಲೀಸ್ ವಶಕ್ಕೆ

ಮೈಸೂರು, ಮಾ.22(ಆರ್‌ಕೆ)–ಬೆಳಗಾವಿ ವಿಭಾಗದ ಕೆಎಸ್‌ಆರ್‌ಟಿಸಿ ಬಸ್ ಕಂಡಕ್ಟರ್ ಮತ್ತು ಚಾಲಕರ ಮೇಲೆ ಹಲ್ಲೆ ನಡೆಸಿ, ಎಂಇಎಸ್ ಕಾರ್ಯಕರ್ತರು ಪುಂಡಾಟ ಮೆರೆದಿರುವುದನ್ನು ಖಂಡಿಸಿ, ಕನ್ನಡ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಹಾಗೂ ವಿವಿಧ ಕನ್ನಡಪರ ಸಂಘಟನೆಗಳು ಇಂದು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಮೈಸೂರಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.


ಬಂದ್ ಹಿನ್ನೆಲೆಯಲ್ಲಿ ಸಾರಿಗೆ ಬಸ್‌ಗಳನ್ನು ತಡೆದು ಪ್ರತಿಭಟನೆ ನಡೆಸಲೆತ್ನಿಸಿದ ಕನ್ನಡಪರ ಸಂಘಟನೆಗಳ ಪ್ರಮುಖರಾದ ಮೂಗೂರು ನಂಜುಂಡಸ್ವಾಮಿ, ಎಂ.ಶಿವಶಂಕರ್, ಮಾದೇಶ, ಮಹದೇವಸ್ವಾಮಿ, ತೇಜೇಶ್ ಲೋಕೇಶ್‌ಗೌಡ ಸೇರಿದಂತೆ ಸುಮಾರು 30 ಮಂದಿ ಕಾರ್ಯಕರ್ತರನ್ನು ಲಷ್ಕರ್ ಠಾಣೆ ಇನ್‌ಸ್ಪೆಕ್ಟರ್ ಪ್ರಸಾದ್ ನೇತೃತ್ವದಲ್ಲಿ ಪೊಲೀಸರು ಇಂದು ಬೆಳಗ್ಗೆ 8.15ರಲ್ಲಿ ಮೈಸೂರಿನ ಗ್ರಾಮಾಂತರ ಬಸ್ ■6ನೇ ಪುಟಕ್ಕೆ



ಸಂಪೂರ್ಣ ವರದಿ ಪುಟ–5ರಲ್ಲಿ

ಜಯಪುರ ಬಳಿಯ ದರೋಡೆ ಪ್ರಕರಣ

ಪೊಲೀಸರ ಮೇಲೆ ಹಲ್ಲೆ ಯತ್ನ; ಆರೋಪಿ ಕಾಲಿಗೆ ಗುಂಡು



ಘಟನಾ ಸ್ಥಳಕ್ಕೆ ಎಸ್ಪಿ ಎನ್.ವಿಷ್ಣುವರ್ಧನ ಅವರು ತಮ್ಮ ಅಧೀನ ಅಧಿಕಾರಿಗಳೊಂದಿಗೆ ಶನಿವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರು, ಮಾ.22(ಆರ್‌ಕೆ)– ಮೈಸೂರು ತಾಲೂಕು ಜಯಪುರ ಸಮೀಪದ ಗುಜ್ಜೇಗೌಡನಪುರ ಬಳಿ ಜನವರಿ 20ರಂದು ನಡೆದಿದ್ದ ದರೋಡೆ ಪ್ರಕರಣ ಸಂಬಂಧ ಬಂಧಿಸಲಾಗಿದ್ದ ಆರೋಪಿಯೋರ್ವ ಮಹಜರು ವೇಳೆ ಪೊಲೀಸರ ಮೇಲೆ ಬಿಯರ್ ಬಾಟಲಿಯಿಂದ ಹಲ್ಲೆ ನಡೆಸಿ, ಪರಾರಿಯಾಗಲು ಯತ್ನಿಸಿದಾಗ ಪೊಲೀಸರು ಆತನ ಕಾಲಿಗೆ ಗುಂಡು ಹಾರಿಸಿ, ಅವನ ಪರಾರಿ ಯತ್ನ ವಿಫಲಗೊಳಿಸಿದ್ದಾರೆ. ಈ ಘಟನೆ ತಾಲೂಕಿನ ಗೋಪಾಲಪುರ ಗ್ರಾಮದ ಬಳಿ ಶುಕ್ರವಾರ ರಾತ್ರಿ ನಡೆದಿದೆ.

ಎರಡು ತಿಂಗಳ ಹಿಂದೆ ಮುಸುಕುಧಾರಿಗಳ ಗುಂಪೊಂದು ಮೈಸೂರು– ಮಾನಂದವಾಡಿ ಹೆದ್ದಾರಿಯ ಗುಜ್ಜೇಗೌಡನಪುರ ಬಳಿ ಕೇರಳ ಉದ್ಯಮಿಯ ಕಾರು ಅಡ್ಡಗಟ್ಟಿ ದರೋಡೆ ನಡೆಸಿ, ಪರಾರಿಯಾಗಿತ್ತು. ನಂತರ ದರೋಡೆಕೋರರು ಇನ್ನೋವಾ ಕಾರನ್ನು ಗೋಪಾಲ ಪುರ ಬಳಿ ರಸ್ತೆಯಲ್ಲೇ ಬಿಟ್ಟು ಹೋಗಿದ್ದರು. ಈ ಸಂಬಂಧ ಆರೋಪಿಗಳ ಬಂಧನಕ್ಕಾಗಿ ರಚಿಸಲಾಗಿದ್ದ ತಂಡದ ಪೊಲೀಸರು ಮಾರ್ಚ್ 21ರಂದು ಕೇರಳ ■6ನೇ ಪುಟಕ್ಕೆ

ಶೀಘ್ರವೇ ಕುಡಿಯುವ ನೀರಿನ ಬಾಟಲ್‌ಗಳ ವೈಜ್ಞಾನಿಕ ವಿಲೇವಾರಿಗೆ ಕಟ್ಟುನಿಟ್ಟಿನ ನಿಯಮ

- ಆಯಾಯ ಕಂಪನಿಗಳಿಗೇ ಆ ಜವಾಬ್ದಾರಿ ನಿರ್ವಹಣೆ ಹೊಣೆ
- ಕನಿಷ್ಠ ಬೆಲೆಯಲ್ಲಿ ಇಂತಹ ಖಾಲಿ ಬಾಟಲ್ ಖರೀದಿ ವ್ಯವಸ್ಥೆ

ಬೆಂಗಳೂರು, ಮಾ.22(ಕೆಎಂಶಿ)– ಖನಿಜಯುಕ್ತ ಕುಡಿಯುವ ನೀರಿನ ಪ್ಲ್ಯಾಸ್ಟಿಕ್ ಬಾಟಲ್‌ಗಳ ವೈಜ್ಞಾನಿಕ ವಿಲೇವಾರಿಗೆ ನಿಯಮ



ರೂಪಿಸಲಾಗುತ್ತಿದೆ ಎಂದು ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.


ಈ ಸಂಬಂಧ ಇಲಾಖೆಯ ಮುಖ್ಯ ಕಾರ್ಯದರ್ಶಿಗೆ ಸೂಚಿಸಿರುವ ಅವರು, ಕುಡಿಯುವ ನೀರಿನ ಖಾಲಿ ಪ್ಲ್ಯಾಸ್ಟಿಕ್ ಬಾಟಲ್‌ಗಳನ್ನು ಕನಿಷ್ಠ ಬೆಲೆಗೆ ಮರು ■6ನೇ ಪುಟಕ್ಕೆ



ಮೈಸೂರು ಮಿತ್ರ

ಭಾನುವಾರ 23 ಮಾರ್ಚ್ 2025

ಛತ್ತೀಸಗಢದ ವಿನೋದ್‌ಕುಮಾರ್ ಶುಕ್ಲಾಗೆ ಜ್ಞಾನಪೀಠ ಪ್ರಶಸ್ತಿ



ನವದೆಹಲಿ, ಮಾ.22– ಛತ್ತೀಸಗಢದ ಸಣ್ಣ ಕಥೆಗಾರ ವಿನೋದ್ ಕುಮಾರ್ ಶುಕ್ಲಾ ಅವರು 59ನೇ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸಾಹಿತ್ಯಕ್ಕಾಗಿ ನೀಡುವ ಈ ಅತ್ಯುನ್ನತ ಪ್ರಶಸ್ತಿ ಛತ್ತೀಸಗಢ ರಾಜ್ಯದವರಿಗೆ ಇದೇ ಮೊದಲ ಬಾರಿಗೆ ಲಭಿಸಿದೆ.

ಹಿಂದಿ ಭಾಷೆಯ ಸಮಕಾಲೀನ ಬರಹಗಾರರಲ್ಲಿ 88 ವರ್ಷದ ವಿನೋದ್, ಪ್ರಮುಖರು. ಸಣ್ಣ ಕಥೆಗಳು, ಕವಿತೆ, ಪ್ರಬಂಧ.. ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿನೋದ್ ಅವರು ಸಾಹಿತ್ಯ ರಚಿಸಿದ್ದಾರೆ. ಹಿಂದಿ ಭಾಷೆಗೆ ದೊರೆಯುತ್ತಿರುವ 12ನೇ ಜ್ಞಾನಪೀಠ ಪ್ರಶಸ್ತಿ ಇದಾಗಿದೆ. ಪ್ರಶಸ್ತಿಯು 11 ಲಕ್ಷ ನಗದು ಬಹುಮಾನ ಮತ್ತು ಸರಸ್ವತಿಯ ಕಂಚಿನ ಪ್ರತಿಮೆಯನ್ನು ಒಳಗೊಂಡಿದೆ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕಥೆಗಾರ್ತಿ ಪ್ರತಿಭಾ ರಾಯ್ ಅಧ್ಯಕ್ಷತೆಯ ಆಯ್ಕೆ ಸಮಿತಿಯು ವಿನೋದ್ ಅವರನ್ನು ಆಯ್ಕೆ ಮಾಡಿದೆ. ಹಿಂದಿ ಸಾರಸ್ವತ ಲೋಕಕ್ಕೆ ವಿನೋದ್ ಅವರ ಕೊಡುಗೆಗಳನ್ನು ಗಮನಿಸಿ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸಾಹಿತ್ಯ, ಕ್ರಿಯಾತ್ಮಕತೆ ಮತ್ತು ವಿಶಿಷ್ಟವಾದ ಬರಹ ಶೈಲಿಗಾಗಿ ಅವರಿಗೆ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಸಮಿತಿ ಹೇಳಿದೆ.

ಪ್ರಮುಖ ಕೃತಿಗಳು: 'ದಿವಾರ್ ಮೇ ಏಕ್ ಖಿಡಕಿ ರಹತೀ ಥಿ' ಕೃತಿಗೆ ವಿನೋದ್ ಅವರಿಗೆ 1999ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು. 'ನೌಕರ್ ಕಿ ಕಮೀಜ್' (1979) ಅವರ ಪ್ರಮುಖ ಕೃತಿಯಾಗಿದೆ. ಈ ಕಾದಂಬರಿಯನ್ನೇ ಇಟ್ಟುಕೊಂಡು, ಇದೇ ಹೆಸರಿನ ಸಿನಿಮಾವನ್ನು ಮೌನಿ ಕೌಲ್ ಅವರು ನಿರ್ದೇಶಿಸಿದ್ದಾರೆ. 'ಸಬ್ ಕುಚ್ ಹೋನಾ ಬಚಾ ರಹೇಗಾ' (1992) ಅವರ ಪ್ರಮುಖ ಕವನ ಸಂಕಲನವಾಗಿದೆ.

ಇದು ನಿಜಕ್ಕೂ ದೊಡ್ಡ ಪ್ರಶಸ್ತಿಯೇ ಸರಿ. ನನಗೆ ಇಂಥದ್ದೊಂದು ಪ್ರಶಸ್ತಿ ಲಭಿಸುತ್ತದೆ ಎಂದು ಎಣಿಸಿರಲಿಲ್ಲ. ಪ್ರಶಸ್ತಿಗಳಿಗೆಲ್ಲ ತಲೆಕೆಡಿಸಿಕೊಂಡವನೂ ನಾನಲ್ಲ. ನಾನು ಜ್ಞಾನಪೀಠ ಪಡೆಯುವುದಕ್ಕೆ ಅರ್ಹನಾಗಿದ್ದೇನೆ ಎಂದು ಸ್ನೇಹಿತರೊಂದಿಗೆ ಮಾತಕತೆ ನಡೆಸುವಾಗಲೆಲ್ಲಾ ಅವರು ನನಗೆ ಹೇಳುತ್ತಿದ್ದರು. ಅವರಿಗೆ ನಾನೇನು ಉತ್ತರಿಸಲಿ. ಹಿಂಜರಿಕೆಯಿಂದ ನಾನೇನು ಹೇಳುತ್ತಲೇ ಇರಲಿಲ್ಲ.

ನಾಳೆ ಜೆಎಸ್‌ಎಸ್ ವಿಜ್ಞಾನ, ತಂತ್ರಜ್ಞಾನ ವಿವಿಯ 7ನೇ ಘಟಿಕೋತ್ಸವ

● 1678 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ, 9 ಮಂದಿಗೆ ಡಾಕ್ಟರೇಟ್ ಪದವಿ ● 30 ಮಂದಿಗೆ ಸುವರ್ಣ ಪದಕ, 34 ದತ್ತಿ ಪದಕಗಳ ಪ್ರದಾನ

ಮೈಸೂರು, ಮಾ.22(ಜಿಎ)–ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ 7ನೇ ಘಟಿಕೋತ್ಸವ ಮಾ.24ರಂದು ಸಂಜೆ 4 ಗಂಟೆ ವಿವಿ ಆವರಣದಲ್ಲಿ ನಡೆಯಲಿದ್ದು, ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ 30 ಸುವರ್ಣ ಪದಕ ಪ್ರದಾನ ಮಾಡಲಾಗುವುದು ಎಂದು ಕುಲಪತಿ ಡಾ.ಎ.ಎನ್.ಸಂತೋಷ್‌ಕುಮಾರ್ ತಿಳಿಸಿದರು.

ಎಸ್‌ಜೆಸಿಇ ಆವರಣದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಘಟಿಕೋತ್ಸವ ಸಮಾರಂಭಕ್ಕೆ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ ಕುಲಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದು, ವಿದ್ಯಾರ್ಥಿಗಳಿಗೆ ಪದವಿ ಮತ್ತು ಪದಕ ಪ್ರದಾನ ಮಾಡುವರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಘಟಿಕೋತ್ಸವ ಭಾಷಣ ಮಾಡುವರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಬಿ.ಸುರೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಘಟಿಕೋತ್ಸವದಲ್ಲಿ 1,678 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತಿದ್ದು, ಬಿಇ–992, ಬಿಸಿಎ–51, ಎಂಟೆಕ್–90, ಎಂಸಿಎ–114, ಎಂಎಸ್ಸಿ– 140, ಎಂಬಿಎ–282 ಹಾಗೂ ವಿವಿಧ ವಿಭಾಗಗಳಲ್ಲಿ ಡಾಕ್ಟರೇಟ್ ಪದವಿ ಪಡೆದಿರುವ 9 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು ಎಂದರು.

ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಶೀಲ ಸಾಧನೆ ಗುರುತಿಸಿ ಕಾರ್ಯಕ್ರಮದಲ್ಲಿ ಒಟ್ಟು 148 ರ‍್ಯಾಂಕ್ ಮತ್ತು 64 ಪದಕಗಳನ್ನು ವಿತರಿಸಲಾಗುತ್ತಿದೆ. ಪದಕಗಳಲ್ಲಿ 30 ಸುವರ್ಣ ಪದಕಗಳಿದ್ದು, ವಿವಿಧ ವಿಭಾಗಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ಜೊತೆಗೆ 34 ದತ್ತಿ ಪದಕಗಳನ್ನು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ ಎಂದರು.

ವಿವಿಯಲ್ಲಿ ಎಂಎಸ್ಸಿ ಇನ್ ಎಲೆಕ್ಟ್ರಾನಿಕ್ಸ್, ಎಂಎಸ್ಸಿ ಇನ್ ಎಲೆಕ್ಟ್ರಾನಿಕ್ಸ್(ಸೆಮಿ ಕಂಡಕ್ಟರ್ ಟೆಕ್ನಾಲಜಿ), ಎಂಎಸ್ಸಿ ಎಕನಾಮಿಕ್ಸ್–ಬ್ರಿಡ್ಜಿಂಗ್ ಟೆಕ್ನಾಲಜಿ ವಿತ್ ಬ್ಯುಸಿನೆಸ್ ಅಂಡ್ ಪಾಲಿಸಿ ಇನ್ಸೈಟ್ಸ್, ಬಿಇ ಇನ್ ಕಂಪ್ಯೂಟರ್ ಸೈನ್ಸ್ ಅಂಡ್ ಎಂಜಿನಿಯರಿಂಗ್, ಬಿಇ ಕಂಪ್ಯೂಟರ್ ಸೈನ್ಸ್ ಅಂಡ್ ಟೆಕ್ನಾಲಜಿ ಕೋರ್ಸ್‌ಗಳನ್ನು ಪರಿಚಯಿಸಲಾಗಿದ್ದು, ಹಾಗೇ ಸೆಂಟರ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ ಆಫ್ ದಿ ನಾನ್ ಅಲಿಗ್ನಡ್ ಅಂಡ್ ಅದರ್ ಡೆವಲಪಿಂಗ್ ಕಂಟ್ರೀಸ್, ಪಿಐ ಸ್ಕ್ವೇರ್ ಟೆಕ್ನಾಲಜಿ ಯುಎಸ್‌ಎ, ಯೂನಿವರ್ಸಿಟಿ ಆಫ್ವೆಲವೆರಹಮಟೋನ್ ಯುಕೆ, ಸಿರ್ಕ್ಯೂಟ್ರೋನಿಕ್, ಧಾರವಾಡ ಗ್ಲೋಬಲ್ ಇನ್ಫೋಟೆಕ್, ಎಕ್ಸೆಲ್‌ಆರ್ ಎಡ್‌ಟೆಕ್, ಶೆವರನ್ ಕ್ಲಿನ್ ಫಿಕ್ಸ್ ಅಕಾಡೆಮಿ, ಬೋರ್ಡ್ ಆಫ್ ಅಪ್ರೆಂಟಿಸ್‌ಶಿಪ್ ಟ್ರೈನಿಂಗ್, ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾದ ಜತೆ ಸಂಸ್ಥೆಯು ಒಡಂಬಡಿಕೆ ಮಾಡಿಕೊಂಡಿದೆ ಎಂದರು.



ಮೈಸೂರಿನ ಎಸ್‌ಜೆಸಿಇ ಆವರಣದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕುಲಪತಿ ಡಾ.ಎ.ಎನ್.ಸಂತೋಷ್‌ಕುಮಾರ್ ಮಾತನಾಡಿದರು.

ಯುವ ಪದವೀಧರರು ಪದವಿಯನ್ನು ಪಡೆದು ಉದ್ಯಮ ಕ್ಷೇತ್ರಗಳಲ್ಲಿ ಮುನ್ನಡೆಯುವುದರ ಜೊತೆಗೆ ನೂತನ ಆವಿಷ್ಕಾರಗಳು, ಸಮಾಜ ಸುಧಾರಣಾ ಗುಣಗಳು ಮತ್ತು ಜೀವನದ ಉದ್ದೇಶಗಳನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ. ಸಂಶೋಧನೆ, ಕೈಗಾರಿಕೋದ್ಯಮ, ಉದ್ಯಮ ಮತ್ತು ಉನ್ನತ ಶಿಕ್ಷಣದಲ್ಲಿ ಸಾಧನೆಗೈಯುತ್ತಿರುವ ಯುವ ಪೀಳಿಗೆಯು ಸಮಾಜ ಹಾಗೂ ಪ್ರಮುಖವಾಗಿ ಪ್ರಸ್ತುತ ಮುನ್ನಡೆಯಲ್ಲಿರುವ ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರದ ಅಭಿವೃದ್ಧಿ ಮತ್ತು ಬದಲಾವಣೆಯಲ್ಲಿ ಬಹಳ ಗಣನೀಯ ಪಾತ್ರವಹಿಸುತ್ತಾರೆ ಎಂದರು. ಗೋಷ್ಠಿಯಲ್ಲಿ ಕುಲಸಚಿವರಾದ ಡಾ.ಎಸ್.ಎ. ಧನರಾಜ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಪಿ. ನಂಜುಂಡಸ್ವಾಮಿ, ಡೀನ್ ಮನೋಜ್‌ಕುಮಾರ್, ಪ್ರಾಂಶುಪಾಲ ನಟರಾಜ್ ಉಪಸ್ಥಿತರಿದ್ದರು.

ಇಂದು, ನಾಳೆ ನೀರು ಸರಬರಾಜಲ್ಲಿ ವ್ಯತ್ಯಯ



ಮೈಸೂರು, ಮಾ.22(ಎಸ್‌ಪಿಎನ್)– ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಂತದ ಬೂಸ್ಟರ್ ಯಂತ್ರಾಗಾರ ಮತ್ತು ಬೆಳಗೊಳ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಸಬ್‌ಸ್ಟೇಷನ್‌ನಲ್ಲಿ ತ್ರೈಮಾಸಿಕ ಕಾಮಗಾರಿ ಹಿನ್ನೆಲೆಯಲ್ಲಿ ಮಾ.23 ಮತ್ತು 24ರಂದು ಹೆಚ್.ಎಲ್‌ಆರ್ ಮತ್ತು ಸುತ್ತಮುತ್ತ, ಮಂಡಿ ಮೊಹಲ್ಲಾ, ಲಷ್ಕರ್‌ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ, ಎಬಿಸಿ ಲೇಔಟ್, ಪುಲಕೇಶಿ ರಸ್ತೆ, ವೀರನಗೆರೆ, ಸಿದ್ಧಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಮತ್ತು ಸುತ್ತಮುತ್ತ, ನಜರ್‌ಬಾದ್, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಲೂರ್ದ್‌ನಗರ, ಮೀನಾಬಜಾರ್, ವಾರ್ಡ್ ನಂ: 8,17, 18,19, 23ರಿಂದ 27ರವರೆಗೆ 40,41, 55,60,61, 62 ಹಾಗೂ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶಗಳಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಸನ್ಮಾನ...




ಮೈಸೂರಿನ ವಿಜಯನಗರದ 3ನೇ ಹಂತದಲ್ಲಿ ಶನಿವಾರ ನಡೆದ ವಿಶ್ವ ಮಹಿಳಾ ದಿನಾಚರಣೆ ಹಾಗೂ ಸ್ವಚ್ಛತಾ ಭಾರತ ಅಭಿಯಾನದ ಅಂಗವಾಗಿ ಮಹಿಳಾ ಪೌರಕಾರ್ಮಿಕರ ಸನ್ಮಾನಿಸಲಾಯಿತು.

ಮಂಜುನಾಥ್‌ಗೆ ಪಿಎಚ್.ಡಿ ಪದವಿ



ಮೈಸೂರು: ಡಾ.ಎಚ್.ಟಿ.ವೆಂಕಟೇಶಮೂರ್ತಿ ಅವರ ಮಾರ್ಗದರ್ಶನದಲ್ಲಿ ಆರ್.ಕೆ. ಮಂಜುನಾಥ್ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ ಡಾ.ಬಿ.ಎಂ.ಪುಟ್ಟಯ್ಯ : ಬದುಕು–ಬರಹ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮಾ.26ರಂದು ಅಗಸ್ತ್ಯ ದರ್ಶನ ಪುಸ್ತಕ ಬಿಡುಗಡೆ ಸಮಾರಂಭ



ಮೈಸೂರು, ಮಾ. 22– ಮೈಸೂರಿನ ಶ್ರೀ ಬ್ರಹ್ಮರ್ಷಿ ಅಗಸ್ತ್ಯ ಲೋಪಾಮುದ್ರಾ ಜ್ಞಾನಪೀಠ ಮತ್ತು ಬೆಂಗಳೂರಿನ ಅಯೋಧ್ಯಾ ಪಬ್ಲಿಕೇಷನ್ಸ್ ಸಂಯುಕ್ತ ಆಶ್ರಯದಲ್ಲಿ ಡಾ.ಸುಧಾ ಎಂ.ಎನ್. ಮತ್ತು ಓ.ಶ್ಯಾಮಭಟ್ ರಚಿಸಿರುವ ಅಗಸ್ತ್ಯ ದರ್ಶನ ಪುಸ್ತಕ ಬಿಡುಗಡೆ ಸಮಾರಂಭವನ್ನು ಮಾ.26ರಂದು ಸಂಜೆ 6.15ಕ್ಕೆ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಆವರಣದಲ್ಲಿ ಏರ್ಪಡಿಸಲಾಗಿದೆ.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅವಧೂತ ದತ್ತ ಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಮತ್ತು ಮಾತಾ ಅಮೃತಮಯಿ ಮಠದ ಶ್ರೀ ಬ್ರಹ್ಮಚಾರಿ ಪ್ರಸಾದಾಮೃತ ಚೈತನ್ಯ ಅವರು ಸಾನ್ನಿಧ್ಯ ವಹಿಸುವರು.

ಮುಖ್ಯ ಅತಿಥಿಗಳಾಗಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿ ಭಾಗವಹಿಸಲಿದ್ದು, ಬೆಂಗಳೂರಿನ ಮಿಥಿಕ್ ಸೊಸೈಟಿ ಅಧ್ಯಕ್ಷ ವಿ. ನಾಗರಾಜ ಅಧ್ಯಕ್ಷತೆ ವಹಿಸಲಿದ್ದಾರೆ.

ಮೈಸೂರಿನ ಜನಮನ ಸೆಳೆದ ಗಾಂಧಿ ಶಿಲ್ಪ ಬಜಾರ್



ಮೈಸೂರು, ಮಾ.22–ಮೈಸೂರಿನ ಹೆಬ್ಬಾಳದ ರಿಂಗ್ ರಸ್ತೆಯಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಆಯೋಜನೆಗೊಂಡಿರುವ ಗಾಂಧಿ ಶಿಲ್ಪ ಬಜಾರ್ ಜನರ ಮನ ಸೆಳೆಯುತ್ತಿದೆ.

ತ್ರಿಪುರ ರಾಜ್ಯದ ಕೈಮಗ್ಗ ಕರಕುಶಲ ಮತ್ತು ರೇಷ್ಮೆ ನಿರ್ದೇಶನಾಲಯ ಹಮ್ಮಿಕೊಂಡಿರುವ ಈ ಕಾರ್ಯಕ್ರಮದಲ್ಲಿ ಸುಮಾರು 110ಕ್ಕೂ ಅಧಿಕ ಮಳಿಗೆಗಳಿದ್ದು, ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಭರದಿಂದ ಸಾಗುತ್ತಿದೆ. ಈ ಮೇಳದಲ್ಲಿ ಈಶಾನ್ಯ ರಾಜ್ಯದ ಕರಕುಶಲ ವಸ್ತುಗಳು ಪ್ರಮುಖ ಆಕರ್ಷಣೆಯಾಗಿದ್ದು, ಕೈಗೆಟಕುವ ಬೆಲೆಯಲ್ಲಿ ನೇರವಾಗಿ ಕರಕುಶಲಕರ್ಮಿಗಳಿಂದ ಗ್ರಾಹಕರಿಗೆ ಲಭ್ಯವಾಗುತ್ತಿವೆ.

ಮಣಿಪುರ ರಾಜ್ಯದ ಇಂಫಾಲ ಜಿಲ್ಲೆಯ ಕುಶಲಕರ್ಮಿ ಎಲ್.ವಿಮಿಚಾ ದೇವಿ ಅವರು ತಮ್ಮ ಕುಶಲಕಲೆಯ ಉತ್ಪನ್ನಗಳೊಂದಿಗೆ ಮೈಸೂರಿಗೆ ಬಂದಿದ್ದು, ಅವರ ಕಲಾ ಉತ್ಪನ್ನಗಳಿಗೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಮೇಳದಲ್ಲಿ ಪಾಲ್ಗೊಂಡಿರುವ ಬೆಂಗಳೂರಿನ ಕುಶಲಕರ್ಮಿ ಗಾಯತ್ರಿ ಅವರು ಮಣ್ಣಿನ ಮಡಕೆಗಳನ್ನು ಪ್ರದರ್ಶಿಸಿ ಮಾರಾಟ ಮಾಡುತ್ತಿದ್ದಾರೆ. ಅವರ ಉತ್ಪನ್ನಗಳೂ ಭರದಿಂದ ವ್ಯಾಪಾರವಾಗುತ್ತಿವೆ.

ಈ ಕುರಿತು ತ್ರಿಪುರ ರಾಜ್ಯದ ಇಲಾಖೆಯ ಅಧಿಕಾರಿಗಳು ಸಂತಸ ವ್ಯಕ್ತಪಡಿಸಿದರು. ಗಾಂಧಿ ಶಿಲ್ಪ ಬಜಾರ್‌ನಲ್ಲಿ ನಮ್ಮ ರಾಜ್ಯದ ಮರದ ಕೆತ್ತನೆಗಳು, ಚನ್ನಪಟ್ಟಣದ ಪ್ರಸಿದ್ಧ ಗೊಂಬೆಗಳು, ಚಿತ್ರಕಲೆಗಳು, ತಮಿಳುನಾಡಿನ ಕಾಂಜೀವರಂ ರೇಷ್ಮೆ ಸೀರೆಗಳು, ಕೇರಳದ ಬೆಡ್ ಶೀಟ್‌ಗಳು, ಟೇಬಲ್ ಕವರ್‌ಗಳು, ಆಂಧ್ರಪ್ರದೇಶದ ಇಕ್ಕತ್ ಸೀರೆಗಳು, ವೆಂಕಟಗಿರಿ ಸೀರೆ, ಕಲಂಕಾರಿ ಸೀರೆಗಳು, ಉತ್ತರ ಪ್ರದೇಶ ರಾಜ್ಯದ ಲಖನೋವಿ ಚಿಕನ್ಕಾರಿ ಕುರ್ತಾಗಳು, ಸೀರೆಗಳು, ಬನಾರಾಸಿ ರೇಷ್ಮೆ ಸೀರೆಗಳು, ಪಶ್ಚಿಮ ಬಂಗಾಳದ ಕಾಂತ ಸೀರೆಗಳು, ಬಲುಚೂರಿ ಸೀರೆ, ಜೂಟ್ ವಾಲ್ ಹ್ಯಾಂಗಿಂಗ್, ಡೆಲ್ಲಿ ಮತ್ತು ಗೋವಾ ರಾಜ್ಯದ ನೆಲಹಾಸುಗಳು, ಬಿಹಾರ ರಾಜ್ಯದ ಟಸ್ಸರ್ ಸೀರೆಗಳು ಇವೆ.

ಮೇಳದಲ್ಲಿ ಸುಮಾರು 22 ರಾಜ್ಯಗಳ ಕೈಮಗ್ಗ ಮತ್ತು ಕರಕುಶಲ ಉತ್ಪನ್ನಗಳು ಆಕರ್ಷಕವಾಗಿವೆ. ಈ ಮೇಳ ಮಾರ್ಚ್ 23ರವರೆಗೆ ನಡೆಯಲಿದ್ದು, ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಆಯೋಜನೆಗೊಂಡಿದೆ. ಈ ಮೇಳ ಉಚಿತವಾಗಿದ್ದು, ಕಲಾಸಕ್ತರಿಗೆ ಉತ್ತಮ ಅವಕಾಶ ಒದಗಿಸಿದೆ.

ನಿಧನ

ರೂಪಾ ಹಳ್ಳಿಕೇರಿ



ಮೈಸೂರು, ಮಾ.22– ಮೈಸೂರಿನ ಕೇರ್ಗಳ್ಳಿಯಲ್ಲಿರುವ ರಿಷಬ್ ಸಿದ್ಧಿ ಲೇಔಟ್ ನಿವಾಸಿ ಶ್ರೀಮತಿ ಅಖಿಲ ಚಂದನ್ ಅವರ ತಾಯಿ ರೂಪಾ ಹಳ್ಳಿಕೇರಿ (62) ಶುಕ್ರವಾರ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಿಧನರಾದರು.

ದಿವಂಗತರು ಪತಿ ರಾಜಗೋಪಾಲ್, ಪುತ್ರ ಅಜಯ್ ಕುಮಾರ್, ಪುತ್ರಿ ಅಖಿಲ, ಅಳಿಯ, ಸೊಸೆ ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ ಬೆಳಗ್ಗೆ 9 ಗಂಟೆಗೆ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೋದಂಡೇರ ಡಾ. ಮೇದಪ್ಪ (ರವಿ)

ಪೊನ್ನಂಪೇಟೆ ತಾಲೂಕಿನ ಕುಟ್ಟದಲ್ಲಿರುವ ಲಕ್ಕುಂಡಿ ಎಸ್ಟೇಟ್ ನಿವಾಸಿ ಕೋದಂಡೇರ ಡಾ.ಮೇದಪ್ಪ (ರವಿ) ಅವರು ಮಾ.18ರಂದು ನಿಧನರಾದರು. ಮೃತರಿಗೆ 89 ವರ್ಷ ವಯಸ್ಸಾಗಿತ್ತು. ಪತ್ನಿ, ಪುತ್ರ, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಕುಟ್ಟದ ಲಕ್ಕುಂಡಿ ಎಸ್ಟೇಟ್‌ನಲ್ಲಿ ಮಾ.19ರಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.03.2025 ಭಾನುವಾರ, ಮಳೆ ನಕ್ಷತ್ರ: ಉತ್ತರಭಾದ್ರಾ 17.03.2025 ರಿಂದ 30.03.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಪೂಷಾ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಆರಾಧ್ಯ ಮಹಾಸಭಾ :** ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಹಾಗೂ ಪಂಚಾಚಾರ್ಯರ ಯುಗಮಾನೋತ್ಸವ ಕಾರ್ಯಕ್ರಮ, ಬೆಳಗ್ಗೆ 7 ಗಂಟೆಗೆ ರುದ್ರಾಭಿಷೇಕ, ಪಂಚಾಚಾರ್ಯರ ಪೂಜೆ, ಅಷ್ಟೋತ್ತರ, ಪಂಚಬ್ರಹ್ಮ ಹೋಮ, ರುದ್ರಹೋಮ, 12ಕ್ಕೆ ಪೂರ್ಣಾಹುತಿ ಮಹಾಮಂಗಳಾರತಿ, ಸಂಜೆ 4ಕ್ಕೆ ಧಾರ್ಮಿಕ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ಮಲ್ಲಾರಾಧ್ಯ ಸ್ವಾಮೀಜಿ, ಅಧ್ಯಕ್ಷತೆ: ಮಹಾಸಭಾದ ಅಧ್ಯಕ್ಷ ಪಿ. ನಾಗಭೂಷಣಾರಾಧ್ಯ, ಮುಖ್ಯ ಅತಿಥಿಗಳು: ಅಂಕಣಕಾರ ವಿ.ಪಿ.ಆರಾಧ್ಯ, ಶಾಸಕ ಟಿ.ಎಸ್.ಶ್ರೀವತ್ಸ, ಸಂಜೆ 6ಕ್ಕೆ ಚಾಮುಂಡಿಪುರಂ ಮುಖ್ಯ ಬೀದಿಗಳಲ್ಲಿ ಪಂಚಾಚಾರ್ಯರ ದಿವ್ಯಮೂರ್ತಿಯ ಉತ್ಸವ, ರಾತ್ರಿ 8ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಆರಾಧ್ಯ ಮಹಾಸಭಾ, ಚಾಮುಂಡಿಪುರಂ.

■ **ಮೈಸೂರು ಸಿಟಿ ವೆಸ್ಟ್ ಯೂಸ್ಡ್ ಕಾರ್ ಡೀಲರ್ಸ್ ಅಸೋಸಿಯೇಷನ್ :** ಉಚಿತ ಆರೋಗ್ಯ ತಪಾಸಣೆ ಮತ್ತು ಕ್ರೀಡಾಕೂಟ, ಸ್ಥಳ: ಕಾಫಿ ಬೋರ್ಡ್ ಕ್ರಿಕೆಟ್ ಮೈದಾನ, ಮಾನಸಗಂಗೋತ್ರಿ, ಬೆಳಗ್ಗೆ 7 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** ಬೆಳಗ್ಗೆ 9ರಿಂದ ಮೂಲವ್ಯಾಧಿ/ಪೈಲ್ಸ್ ರೋಗ ಚಿಕಿತ್ಸಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್ –ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಅಂತರರಾಷ್ಟ್ರೀಯ ಲಯನ್ಸ್:** ಪ್ರಾಂತೀಯ ಸಮ್ಮೇಳನ, ಮುಖ್ಯ ಅತಿಥಿಗಳು: ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಪ್ರಾಂತೀಯ ಸಮ್ಮೇಳನದ ಸಲಹೆಗಾರ ಮಾಜಿ ಜಿಲ್ಲಾ ರಾಜ್ಯಪಾಲ ಲಯನ್ ಎಂ.ವಿ.ದೇವಿಪ್ರಸಾದ್, ಲಯನ್ ಡಾ.ಎನ್.ಕೃಷ್ಣೇಗೌಡ, ಲಯನ್ ಕೆ.ದೇವೇಗೌಡ, ಪ್ರಾಂತೀಯ ಸಮ್ಮೇಳನದ ಅಧ್ಯಕ್ಷ ಲಯನ್ ಜಯಕುಮಾರ್, ಅಧ್ಯಕ್ಷತೆ: ಪ್ರಾಂತ್ಯ–6ರ ಲಯನ್ ಶಿವರಾಮು, ಪ್ರಾಂತ್ಯ 7ರ ಅಧ್ಯಕ್ಷ ಎನ್.ಉಮೇಶ್, ಸ್ಥಳ: ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಆವರಣ, ಜೆ.ಪಿ.ನಗರ, ಬೆಳಗ್ಗೆ 10.30ಕ್ಕೆ.

■ **ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟ್ :** ರಾಮ ಮನೋಹರ ಲೋಹಿಯಾ ನೆನಪು, ಉಪಸ್ಥಿತರು : ಹಿರಿಯ ನ್ಯಾಯವಾದಿ ಶ್ರೀಮತಿ ಎಂ.ಎನ್. ಸುಮನಾ, ಬೆವರ ಹನಿ ಪ್ರಾದೇಶಿಕ ದಿನಪತ್ರಿಕೆ ಸಂಪಾದಕ ಕುಚ್ಚಂಗಿ ಪ್ರಸನ್ನ, ಲೇಖಕ ಬಿ. ಮಹೇಶ್ ಹರವೆ, ಸ್ಥಳ: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಹಾರ್ಡ್ವಿಕ್ ಶಾಲೆ ಆವರಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲಾ ಹಾಗೂ ನಗರ ಘಟಕ :** ಶರಣ ಸಾಹಿತ್ಯ ಸಮ್ಮೇಳನ, ಬೆಳಗ್ಗೆ 9ಕ್ಕೆ ಮೆಟ್ರೋಪೋಲ್ ವೃತ್ತದಿಂದ ವಚನ ಜಾಗೃತಿ ಜಾಥಾ, ಉದ್ಘಾಟನೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಬೆಳಗ್ಗೆ 9.30ಕ್ಕೆ ಧ್ವಜಾರೋಹಣ, ರಾಷ್ಟ್ರಧ್ವಜ – ಶ್ರೀ ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿಯವರಿಂದ, ಪರಿಷತ್ತಿನ ಧ್ವಜ – ಶ್ರೀ ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮೀಜಿಯವರಿಂದ, ಬೆಳಗ್ಗೆ 9.40ಕ್ಕೆ ಶ್ರೀಮತಿ ಉಮಾ ಮಹದೇವಸ್ವಾಮಿ ಮತ್ತು ತಂಡದಿಂದ ಸಾಮೂಹಿಕ ವಚನ ಗಾಯನ, ಬೆಳಗ್ಗೆ 10ಕ್ಕೆ ಶರಣ ಸಾಹಿತ್ಯ ಸಮ್ಮೇಳನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮೇಳನಾಧ್ಯಕ್ಷ : ಸಾಹಿತಿ ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸ್ಮರಣ ಸಂಚಿಕೆ ಬಿಡುಗಡೆ : ಶಾಸಕ ಕೆ. ಹರೀಶ್‌ಗೌಡ, ಕೃತಿಗಳ ಬಿಡುಗಡೆ : ಶಾಸಕ ಟಿ.ಎಸ್. ಶ್ರೀವತ್ಸ, ಚಿತ್ರಕಲಾ ಪ್ರದರ್ಶನ ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ್; ಸಂಜೆ 5ಕ್ಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ಬೇಲಿ ಮಠದ ಶ್ರೀ ಶಿವರುದ್ರ ಸ್ವಾಮೀಜಿ, ಸಮ್ಮೇಳನಾಧ್ಯಕ್ಷ : ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಸಮಾರೋಪ ನುಡಿ : ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿಗಳು: ಶಾಸಕರಾದ ಜಿ.ಟಿ. ದೇವೇಗೌಡ, ಎಚ್. ವಿಶ್ವನಾಥ್, ಎಚ್.ಎಂ. ಗಣೇಶ್ ಪ್ರಸಾದ್, ಕೆ. ವಿವೇಕಾನಂದ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸ್ಥಳ: ಕಲಾಮಂದಿರ.

■ **ಮೈಸೂರು ಲಿಟರರಿ ಅಸೋಸಿಯೇಷನ್ :** ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಮಾಯಾಲೋಕ ಪುಸ್ತಕ ಬಿಡುಗಡೆ ಸಮಾರಂಭ, ಇಂಗ್ಲೀಷ್‌ಗೆ ಅನುವಾದ : ಕೃಷ್ಣಮೂರ್ತಿ ಚಂದರ್, ಪುಸ್ತಕ ಬಿಡುಗಡೆ: ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ. ಚಿದಾನಂದಗೌಡ, ಪ್ರಥಮ ಪ್ರತಿ ಸ್ವೀಕಾರ : ಕುವೆಂಪು ಅವರ ಪುತ್ರಿ ಶ್ರೀಮತಿ ತಾರಿಣಿ ಚಿದಾನಂದ, ಸ್ಥಳ: ಕಲ್ಪಕ್ಷೇತ್ರ, ವಿಜಯನಗರ 4ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಶ್ರೀಮನ್ಮಹಾರಾಜ ಸಂಸ್ಕೃತ ಮಹಾವಿದ್ಯಾಲಯ, ಸುಧರ್ಮಾ ಸಂಸ್ಕೃತ ದಿನಪತ್ರಿಕೆ:** ಸಂಸ್ಕೃತ ಪತ್ರಿಕೋದ್ಯಮ ಕುರಿತು ಒಂದು ದಿನದ ಕಾರ್ಯಾಗಾರ, ಉದ್ಘಾಟನೆ: ಕನ್ನಡಪ್ರಭ ನಿವೃತ್ತ ಉಪ ಸಂಪಾದಕಿ ಹೆಚ್.ಎಲ್. ಸೀತಾದೇವಿ, ಅಧ್ಯಕ್ಷತೆ: ಸುಧರ್ಮಾ ಸಂಸ್ಕೃತ ಪತ್ರಿಕೆ ಪ್ರಧಾನ ಸಂಪಾದಕ ವಿದ್ವಾನ್ ಪ್ರೊ.ಹೆಚ್.ವಿ. ನಾಗರಾಜರಾವ್, ಮುಖ್ಯ ಅತಿಥಿಗಳು: ಪತ್ರಿಕೆಯ ಗೌರವ ಸಂಪಾದಕ ವಿದ್ವಾನ್ ಟಿ.ವಿ.ಸತ್ಯನಾರಾಯಣ, ಜನಮಿತ್ರ ಪತ್ರಿಕೆಯ ಡಾ.ಕೂಡ್ಲಿ ಗುರುರಾಜ್, ಪ್ರಾಚಾರ್ಯ ವಿದ್ವಾನ್ ಡಾ.ಪಿ.ಸತ್ಯನಾರಾಯಣ, ಸ್ಥಳ: ಶ್ರೀಮನ್ಮಹಾರಾಜ ಸಂಸ್ಕೃತ ಮಹಾವಿದ್ಯಾಲಯ, ನ್ಯೂ ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಪುನೀತ್ ರಾಜ್‌ಕುಮಾರ್ ಸಮಾಜ ಸೇವಾ ಸಮಿತಿ :** ಡಾ. ಪುನೀತ್ ರಾಜ್‌ಕುಮಾರ್ 50ನೇ ಹುಟ್ಟುಹಬ್ಬದ ಪ್ರಯುಕ್ತ ಸಪ್ತಪದಿ, ಉಚಿತ ಸಾಮೂಹಿಕ ವಿವಾಹ, ಸಾನ್ನಿಧ್ಯ : ಶ್ರೀ ನಾರಾಯಣ ಗುರು ಮಹಾಸಂಸ್ಥಾನ ಮಠದ ಶ್ರೀ ರೇಣುಕಾನಂದ ಸ್ವಾಮೀಜಿ, ಉದ್ಘಾಟನೆ : ರೋರಿಂಗ್ ಸ್ಟಾರ್ ಶ್ರೀಮುರಳಿ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ಅಧ್ಯಕ್ಷ ಎಸ್. ಚಂದ್ರಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ವಕೀಲ ಸೂರ್ಯಕುಮಾರ್, ಹಿರಿಯ ಸಾಹಿತಿ ಡಾ. ಡಿ. ಗುರುಮೂರ್ತಿ ಹಾರೋಹಳ್ಳಿ, ಸ್ಥಳ: ದಸರಾ ವಸ್ತುಪ್ರದರ್ಶನ ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಕೀಲರ ಸಂಘ:** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ: ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಉಷಾರಾಣಿ, ವಿಶೇಷ ಆಹ್ವಾನಿತರು: ಉಪಪೊಲೀಸ್ ಆಯುಕ್ತರಾದ ಶ್ರೀಮತಿ ಎಸ್. ಜಾಹ್ನವಿ, ಅಧ್ಯಕ್ಷತೆ: ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಉಪಸ್ಥಿತರು : ಕಾರ್ಯದರ್ಶಿ ಎ.ಜಿ.ಸುಧೀರ್, ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ.ಆರ್.ಚಂದ್ರಮೌಳಿ, ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಸ್ಥಳ: ವಕೀಲರ ಸಂಘದ ಆವರಣ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಮಾನಸ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಬಿ. ಶ್ರೀರಾಂಭಟ್, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು –ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕರುನಾಡ ಕಲ್ಪವೃಕ್ಷ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು, 9.00 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ಕ್ಷಯರೋಗ ದಿನಾಚರಣೆ ಸಂದರ್ಭದಲ್ಲಿ ಕ್ಷಯಮುಕ್ತ ಭಾರತ ಅಭಿಯಾನ 100 ದಿನಗಳ ಜಾಗೃತಿ ಆಂದೋಲನ ಕುರಿತು, ಮೈಸೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಭಾಗೀಯ ಸಹನಿರ್ದೇಶಕರ ಕಚೇರಿಯಲ್ಲಿ ಉಪನಿರ್ದೇಶಕರಾಗಿರುವ ಡಾ. ಮಲ್ಲಿಕಾ. ಬಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ವಿವಿಧ ಶಾಲೆಯ ಮಕ್ಕಳು ನಡೆಸಿಕೊಡುವ ಕಾರ್ಯಕ್ರಮ, 10.30 KRISH -TRISH and Balty boy ನಾವು ಭಾರತೀಯರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, ರಾಗಿಣಿ ಸುರೇಶ ಅವರಿಂದ ಗಾಯಕಿ ಸಂಗೀತ ಕಟ್ಟಿ ಕುರಿತು ಮಾಹಿತಿ, ಕುಂದಾಪುರದ ಕನ್ನಡದ ಸೊಬಗು–ಸೀತಾ ಶ್ರೀಧರ್ ಮತ್ತು ನಿರ್ಮಲಾ ಆಚಾರ್ ಅವರಿಂದ, ಕೊಪ್ಪಳದ ಭಾಗ್ಯನಗರದ ಸೀರೆ ಸೊಬಗು–ಚಂದು ಅವರಿಂದ, 12.35 ದೇವರನಾಮ – ಸಿ.ಎಸ್. ಲಕ್ಷ್ಮೀ, 12.45 ಜನಪದ ಸಂಗೀತ–ಟಿ. ನರಸೀಪುರ ತಾಲೂಕು ಬನ್ನೂರು ಹೋಬಳಿ ಮಾದಿಗಳ್ಳಿ ಗ್ರಾಮದ ಪಾರ್ವತಮ್ಮ ಮತ್ತು ಸಂಗಡಿಗರಿಂದ ಬಳೆಗಾರನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನಮಂತ್ರಿ ಅಟಲ್ ಭೂಜಲ್ ಯೋಜನೆ ಈ ಕುರಿತು ಮಾತನಾಡುತ್ತಾರೆ ರಾಜಶ್ರೀ ಶುಶಿಲ್ ಕುಮಾರ್, 1.20 ಭಾವಗೀತೆಗಳು – ಶೈಲಜ ಚಂದ್ರಶೇಖರ್, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ–ರಂಗನಾಯಕಿ, 3.00 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.45 ನಕ್ಷತ್ರಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ ಭಾಗವಹಿಸುವವರು–ಹೆಸರಾಂತ ಚಲನಚಿತ್ರ ನಿರ್ದೇಶಕ ಎಸ್. ಮಹೇಂದರ್ ಇವರೊಂದಿಗೆ ಭಾಗವಹಿಸುತ್ತಾರೆ–ಪ್ರಭುಸ್ವಾಮಿ ಮಳಿಮಠ್ ಹಾಗೂ ಶ್ರೀಮಾನ್. ಎಸ್.,5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಭಾರತದ ಸಮಾನತೆಯ ಹರಿಕಾರ ಡಾ. ರಾಮ್ ಮನೋಹರ ಲೋಹಿಯಾ, ಈ ಕುರಿತು ಮಾತನಾಡುತ್ತಾರೆ ಉತ್ತರ ಕನ್ನಡ ಜಿಲ್ಲೆ, ಕುಮಟಾ ತಾಲೂಕಿನ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ವಿಜಯ ಡಿ.ನಾಯ್ಕ್, 8.00 ಹಾದಿಯಲ್ಲಿ ಕಂಡ ಮುಖ –ಬಾನುಲಿ ಸರಣಿ ಗುಂಡ್ಲುಪೇಟೆಯ ಆಟೋ ಚಾಲಕ ಹಾಗೂ ಹಾವುಗಳ ಸ್ನೇಹಿತ ಮಹದೇವಸ್ವಾಮಿ ಅವರೊಂದಿಗೆ ಮಾತುಕತೆ, ಪ್ರಸ್ತುತಿ : ಅಬ್ದುಲ್ ರಶೀದ್, 9.15 ರಂಗಗೀತೆಗಳು–ಜಿ. ಆರ್. ರಾಮಚಂದ್ರ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಅನೀಶ್ ರಾಮ್–ಹಾಡುಗಾರಿಕೆ

■ **ಜೀರುಂಡೆ ಪ್ರಕಾಶನ, ಕಲಾಸುರುಚಿ, ಚಾರು ಪ್ರತಿಷ್ಠಾನ :** ಥೇರೀಗಾಥಾ ಕಾಣಿಸಿದ ಹೆಣ್ಣು ಪುಸ್ತಕ ಕುರಿತು ಮಾತನಾಡುತ್ತಾರೆ ಹಿರಿಯ ಚಿಂತಕ ಡಾ. ಜಿ. ರಾಮಕೃಷ್ಣ, ಡಾ. ದು ಸರಸ್ವತಿ, ಶೈಲಜಾ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಬೆಳಗ್ಗೆ 11ಕ್ಕೆ.

■ **ವ್ಯವಸ್ಥಾಪಕರು :** ಅರ್ಥಶಾಸ್ತ್ರ ಉಪನ್ಯಾಸಕಿ, ಲೇಖಕಿ ಮತ್ತು ನಿರೂಪಕಿ ಶ್ರೀಮತಿ ಎನ್.ಆರ್. ರೂಪಶ್ರೀ ಅವರ 'ಕಾದ ಕಂಗಳ ಕಂಪನ' ಮತ್ತು 'ಪ್ರೀತಿಯೆಂದರೆ' ಕವನ ಸಂಕಲನಗಳ ಲೋಕಾರ್ಪಣೆ ಸಮಾರಂಭ, ಕೃತಿಗಳ ಲೋಕಾರ್ಪಣೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಲೇಖಕ ರಾಜು ಅಡಕಳ್ಳಿ, ಕೃತಿ ಪರಿಚಯ : ಡಾ. ಜಯಪ್ಪ ಹೊನ್ನಾಳಿ, ರಂಗನಾಥ ಮೈಸೂರು, ಉಪಸ್ಥಿತರು : ಗಣೇಶ ಕೋಡೂರು, ಗಾಯಕ ಶ್ರೀ ಹರ್ಷ ಪ್ರಭಾಕರ್, ವಿದುಷಿ ಪನ್ನಗ ಎಸ್.ವಿ., ವಿದ್ವಾನ್ ರಾಮಚಂದ್ರ ಭಟ್, ಶ್ರೀಮತಿ ಚಂದ್ರಕಲಾ ಕುಮಾರ್, ಕು. ನಾದಶ್ರೀ ಆರ್. ಭಟ್, ಸ್ಥಳ: ಐಡಿಯಲ್ ಜಾವಾ ರೋಟರಿ ಸಭಾಂಗಣ, ಮುಡಾ ಎದುರು, ಜೆಎಲ್‌ಬಿ ರಸ್ತೆ, ಸಂಜೆ 4ಕ್ಕೆ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಚಾರುಮಂಜೂಷಾ–4 ವಿಜ್ಞಾನ ಎಂದರೇನು? ಅರಿವು ನೀಡುವವರು : ವಿಜ್ಞಾನ ಲೇಖಕ ಕೊಳ್ಳೇಗಾಲ ಶರ್ಮ, ಸ್ಥಳ: 208, ಎಸ್‌ಬಿಎಂ ಮತ್ತು ಬ್ಯಾಂಕ್ ನೌಕರರ ಕ್ಷೇಮಾಭಿವೃದ್ಧಿ ಬಡಾವಣೆ, ವರ್ತುಲ ರಸ್ತೆ, ಸಂಜೆ 5ಕ್ಕೆ.

■ **ಶಿವಾನಂದ ಜ್ಞಾನಾಲಯ :** ಸಂಗೀತ ಕಲಾನಿಧಿ ಡಾ. ರಲ್ಲಪಲ್ಲಿ ಅನಂತಕೃಷ್ಣ ಶರ್ಮ ಸಂಯೋಜಿತ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 5 ರಿಂದ ವಿದ್ವಾನ್ ಪ್ರದ್ಯುಮ್ನ ರಲ್ಲಪಲ್ಲಿ ಅವರಿಂದ ಗಾಯನ, ಸಂಜೆ 6 ರಿಂದ ವಿದ್ವಾನ್ ನಂದ ನಂದನ್ ರಲ್ಲಪಲ್ಲಿ ಅವರಿಂದ ಕೊಳಲು ವಾದನ, ಶ್ರೀಮತಿ ಸುರಭಿ ಕದಂಬೆ ಮತ್ತು ಶ್ರೀಮತಿ ಯಶಸ್ವಿನಿ ಹೆಗ್ಡೆ ಅವರಿಂದ ಗಾಯನ, ವಿದ್ವಾನ್ ರೂಪನಗುಡಿ ರತ್ನತೇಜ–ವಯೋಲಿನ್, ವಿದ್ವಾನ್ ಬಿ.ಎಸ್. ಶುಭಾಂಗ್–ಮೃದಂಗ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ

■ **ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಕೊಂಕಣಿ ಕ್ರಿಶ್ಚಿಯನ್ ಅಸೋಸಿಯೇಷನ್ :** ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಆಲ್ವಾರಿಸ್, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಡಾ.ಡಿ. ತಿಮ್ಮಯ್ಯ, ಕೊಂಕಣಿ ಸಾಹಿತಿ ವಲೇರಿಯನ್ ಡಿಸೋಜಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸ್ಥಳ: ಕೊಂಕಣಿ ಭವನ, ವಿಜಯನಗರ 2ನೇ ಹಂತ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ನಟನಾ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ಜಗತ್ತಿನ ಶ್ರೇಷ್ಠ ನಾಟಕಕಾರರಲ್ಲಿ ಪ್ರಮುಖನಾದ ಹೆನ್ರಿಕ್ ಇಬ್ಸೆನ್ ಅವರ ಆ್ಯನ್ ಎನಿಮಿ ಆಫ್ ದ ಪೀಪಲ್ ಆಧರಿಸಿ ಹಿರಿಯ ರಂಗಕರ್ಮಿ, ಬರಹಗಾರ ಎಸ್. ಸುರೇಂದ್ರನಾಥ್ ರಚಿಸಿ ನಿರ್ದೇಶಿಸಿರುವ 'ಜನಶತ್ರು' ನಾಟಕವು ಪ್ರದರ್ಶನ, ಸ್ಥಳ: ನಟನಾ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಟೀಂ ಮೈಸೂರು ಪ್ರತಿಷ್ಠಾನ :** ಭಗತ್ ಸಿಂಗ್, ರಾಜಗುರು ಹಾಗೂ ಸುಖದೇವ್ ಅವರ ಬಲಿದಾನದ ಪ್ರಯುಕ್ತ ಪಂಜಿನ ಮೆರವಣಿಗೆ, ಸ್ಥಳ: ನಂಜರಾಜ ಬಹದ್ದೂರ್ ಛತ್ರದಿಂದ, ಸಂಜೆ 6.30ಕ್ಕೆ.

■ **ಪರಿವರ್ತನ ರಂಗ ಸಮಾಜ :** ಪರಿವರ್ತನ ರಂಗ ಸಮಾಜದ 25ನೇ ವರ್ಷದ ಅಂಗವಾಗಿ ವಿಕಾಸವಾದ ವಿಚಾರಣೆಯ ಸುಳಿಯಲ್ಲಿ ಸಾಮಾಜಿಕ ವಿಡಂಬನೆ ನಾಟಕ ಪ್ರದರ್ಶನ, ನಿರ್ದೇಶನ : ಎಸ್.ಆರ್. ರಮೇಶ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.

ದಕ್ಷಿಣ ರಾಜ್ಯಗಳ ಸಂಸತ್ ಸ್ಥಾನ ಕಡಿತವಾಗಲು ಬಿಡಲ್ಲ

• ಚೆನ್ನೈ ವಿಮಾನ ನಿಲ್ದಾಣದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಸ್ಪಷ್ಟನೆ • ತಮಿಳ್ನಾಡು ಸಿಎಂ ಸ್ಟಾಲಿನ್ ನೇತೃತ್ವದಲ್ಲಿ ಕೇಂದ್ರದ ವಿರುದ್ಧ ನಡೆಯುತ್ತಿರುವ ಸಭೆಯಲ್ಲಿ ಭಾಗಿ



ಬೆಂಗಳೂರು, ಮಾ.22 (ಕೆಂಶಿ)– ದಕ್ಷಿಣ ಭಾರತ ರಾಜ್ಯಗಳ ಸಂಸತ್ ಸ್ಥಾನಗಳು ಕಡಿಮೆ ಯಾಗಲು ಬಿಡುವುದಿಲ್ಲ, ನಮ್ಮ ಹಕ್ಕು ಮತ್ತು ಅಸ್ತಿತ್ವಕ್ಕೆ ಹೋರಾಡಲು ಒಗ್ಗಟ್ಟಾಗಿದ್ದೇವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ತಮಿಳುನಾಡಿನ ಚೆನ್ನೈ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷೇತ್ರ ಮರುವಿಂಗಡಣೆ ವಿಷಯದಲ್ಲಿ ಸೋಲುವುದಿಲ್ಲ. ನಮ್ಮ ಹೋರಾಟ ನಿರಂತರ, ವೈಯಕ್ತಿಕ ಹಕ್ಕುಗಳಿಗೆ ಹೋರಾಡುತ್ತಿಲ್ಲ, ದೇಶಕ್ಕಾಗಿ ಹೋರಾಟ ಮಾಡುತ್ತಿದ್ದೇವೆ ಎಂದರು. ತಮಿಳುನಾಡು ಮುಖ್ಯಮಂತ್ರಿ ಎಂ.ಕೆಸ್ಟಾಲಿನ್ ನಾಯಕತ್ವದಲ್ಲಿ ದಕ್ಷಿಣ ಭಾರತ ರಾಜ್ಯಗಳು ಹಾಗೂ ಪಂಜಾಬ್ ಈ ಸಭೆಯಲ್ಲಿ ಭಾಗ ವಹಿಸಿವೆ, ಯಾವುದೇ ಕಾರಣಕ್ಕೂ ನಮ್ಮ ಹಕ್ಕುಗಳನ್ನು ಬಿಟ್ಟುಕೊಡಲು ಸಾಧ್ಯವಿಲ್ಲ. ದಕ್ಷಿಣ ರಾಜ್ಯಗಳು ದೇಶದ ಬೆಳವಣಿಗೆಗೆ ಸಾಕಷ್ಟು ಕೊಡುಗೆ ನೀಡುತ್ತಿವೆ, ಶೈಕ್ಷಣಿಕ ಗುಣಮಟ್ಟ, ಆರ್ಥಿಕ ಬೆಳವಣಿಗೆ ಸೇರಿದಂತೆ ಅನೇಕ ವಿಷಯಗಳಲ್ಲಿ ಸಾಕಷ್ಟು ಮುಂದಿದ್ದೇವೆ. ತೆರಿಗೆ ಪಾವತಿ ಯಲ್ಲಿ ಮುಂಚೂಣಿಯಲ್ಲಿದ್ದೇವೆ.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸಹಾ 2002ರಲ್ಲಿ ಸಂವಿಧಾನಕ್ಕೆ 84ನೇ ತಿದ್ದುಪಡಿ ಮೂಲಕ ಬದಲಾವಣೆ ತರಲು ಮುಂದಾಗಿದ್ದರು. ಬಿಜೆಪಿಯ ಕಪ್ಪು ಬಾವುಟ ಪ್ರದರ್ಶನಕ್ಕೆ ಹೆದರುವುದಿಲ್ಲ. ಅವರ ನಡೆಯನ್ನು ಸ್ವಾಗತಿಸುತ್ತೇವೆ. ನನ್ನನ್ನು ತಿಹಾರ್ ಜೈಲಿಗೆ ಕಳುಹಿಸಿದಾಗಲೇ ಹೆದರಲಿಲ್ಲ. ತಮಿಳುನಾಡಿನ ಬಿಜೆಪಿ ಅಧ್ಯಕ್ಷ ಅಣ್ಣಾಮಲೈ ಕೇಂದ್ರದ ಅಧಿಕಾರಿಯಾಗಿ ಕರ್ನಾಟಕದಲ್ಲಿ ಕೆಲಸ ಮಾಡಿದ್ದಾರೆ. ನಮ್ಮ ಶಕ್ತಿ ಏನೆಂಬುದು ಅವರಿಗೆ ಗೊತ್ತಿದೆ. ಜೊತೆಗೂಡುವುದು ಆರಂಭ, ಜೊತೆಗೂಡಿ ಆಲೋಚಿಸುವುದು ಪ್ರಗತಿ, ಜೊತೆಗೂಡಿ ಕೆಲಸ ಮಾಡುವುದು ಉನ್ನತಿ ಎಂಬುದರಲ್ಲಿ ನಂಬಿಕೆ ಇಟ್ಟಿರುವವರು ನಾವು. ಸಂವಿಧಾನ ಉಳಿವಿಗೆ ಹೋರಾಟ ಮಾಡುತ್ತೇವೆ ಎಂದರು.

ವ್ಯಕ್ತಿ ನಾಪತ್ತೆ



ಮೈಸೂರು, ಮಾ.22– ಮೈಸೂರಿನ ಮಂಡಿ ಮೊಹಲ್ಲಾ ನಿವಾಸಿ ಪಿ.ನಾಗೇಂದ್ರ(45) ಅವರು ನಾಪತ್ತೆಯಾಗಿದ್ದಾರೆ. ಗಾರೆ ಕೆಲಸ ಮಾಡಿಕೊಂಡಿದ್ದ ಇವರು ಮಾ.5ರಂದು ಸಂಜೆ ಮನೆಯಿಂದ ಹೊರಗಡೆ ಹೋದವರು ವಾಪಸ್ ಬಂದಿಲ್ಲ. ಸಂಬಂಧಿಕರು, ಪರಿಚಯಸ್ಥರ ಬಳಿ ವಿಚಾರಿಸಿ, ಎಲ್ಲಾ ಕಡೆ ಹುಡುಕಾಡಿದರೂ ಪತ್ತೆಯಾಗಿಲ್ಲ ಎಂದು ನಾಗೇಂದ್ರ ಅವರ ಪತ್ನಿ ಪೊಲೀಸರಿಗೆ ದೂರು ನೀಡಿದ್ದಾರೆ. ಈ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ಸಿಕ್ಕರೆ ಮಂಡಿ ಠಾಣೆ(0821–2418313) ಅಥವಾ ನಾಗೇಂದ್ರ ಕುಟುಂಬ (ಮೊ.ಸಂ.6364009451)ದವರನ್ನು ಸಂಪರ್ಕಿಸಲು ಮನವಿ ಮಾಡಲಾಗಿದೆ.





ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷೀದಾರರು ಅದರ ಮಾಲೀಕರಾದ, ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕೋಣೇಗೌಡನಹುಂಡಿ ಗ್ರಾಮದಲ್ಲಿ, ರ ವಾಸವಾಗಿರುವ ಶ್ರೀ. ಆರ್. ಗುರುಸ್ವಾಮಿ ಬಿನ್. ರಾಮಣ್ಣರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದ್ದವರಿಗೆ ಸಲ್ಲಿಸತಕ್ಕದ್ದು, ಒಂದು ವೇಳೆ ಈ ಅವದಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂದಿತರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಕಸಬಾ ಹೋಬಳಿ, ಬೊಮ್ಮಲಪುರ ಗ್ರಾಮದ ಸರ್ವೆ ನಂಬರ್. 12/1ರಲ್ಲಿನ ಮೂರು ಎಕರೆ (3.00.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ:

ಪೂರ್ವಕ್ಕೆ:– ಬಂಡಿದಾರಿ ಮತ್ತು ಅಶೋಕ ರವರ ಜಮೀನು, ಪಶ್ಚಿಮಕ್ಕೆ:– ಅರಣ್ಯ, ಉತ್ತರಕ್ಕೆ: – ಅರಣ್ಯ ದಕ್ಷಿಣಕ್ಕೆ:– ಕಲಾವತಿ ಕೋಂ, ರವಿ ರವರ ಜಮೀನು

Sd/- M N Prakash Kalappa
KAR-1996-2000
Advocate & Legal Consultant
#67/7A, PRI Complex, No.2&3
1st Floor, New Sayyaji Rao Raod
Fort Mohalla, Mysore-570004
Mob: 9343112535

ಸ್ಥಳ: ಮೈಸೂರು
ದಿನಾಂಕ: 22/03/2025





ನಕ್ಕರೆ ಅದೇ ಸ್ವರ್ಗ

ಗುಂಡ : ನಿನಗೆ ಪ್ರೀತಿ ಮುಖ್ಯನಾ, ಸ್ನೇಹ ಮುಖ್ಯನಾ? ಸರಿಯಾಗಿ ಆಲೋಚನೆ ಮಾಡಿ ಹೇಳು.

ತಿಮ್ಮ : ನನಗೆ ಪ್ರೀತಿ ಮುಖ್ಯ ನಿನಗೆ?

ಗುಂಡ : ನನಗೆ ಸ್ನೇಹ ಮುಖ್ಯ. ಯಾಕೆಂದ್ರೆ, ಪ್ರೀತಿಗೆ ಮದುವೆಯಾಗಿದೆ. ಸ್ನೇಹ ಇನ್ನು ಡಿಗ್ರಿ ಓದುತ್ತಿದ್ದಾಳೆ.

ಮೈಸೂರು ಮಿತ್ರ

ಭಾನುವಾರ, 23 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಹೃದಯವಂತಿಕೆ ಇಲ್ಲದಿರುವಾಗ
ಬುದ್ಧಿವಂತಿಕೆ ಎಷ್ಟಿದ್ದರೇನು...? – ನುಡಿಮುತ್ತು

ವೇದ ಸುಳ್ಳಾದರೂ { ಲೋಕ ತಿಳೀಬೇಕು
ಗಾದೆ ಸುಳ್ಳಾಗದು { ಲೆಕ್ಕ ಕಲೀಬೇಕು.

ನಿಮ್ಮ ಪತ್ರಗಳು

■ ಕ್ರಿಕೆಟ್ ಆಟದಲ್ಲಿ ಎಂಜಲು ಬಳಕೆಗೆ ಅನುಮತಿ ಬೇಡ

ಮಾನ್ಯರೆ,

ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೌಲರ್‌ಗಳು ಚೆಂಡಿಗೆ ಎಂಜಲು ಬಳಕೆ ಮೇಲೆ ಕೋವಿಡ್ ಸಮಯದಲ್ಲಿ ಹೇರಿದ್ದ ನಿಷೇಧವನ್ನು ಬಿಸಿಸಿಐ ತೆರವುಗೊಳಿಸಿರುವ ಪತ್ರಿಕಾ ಸುದ್ದಿ (21.3.25)ಯನ್ನು ಓದಿ ಆಶ್ಚರ್ಯವಾಯಿತು.

ಕ್ರಿಕೆಟ್ ಚೆಂಡಿಗೆ ಬೌಲರ್‌ಗಳು ಪದೇ ಪದೆ ಎಂಜಲು ಬಳಸಿ ಉಜ್ಜುತ್ತಿದ್ದ ಕ್ರಿಯೆ ಬಹಳ ಅಸಹ್ಯಕರವಾಗಿತ್ತು. ಹಿಂದೆಲ್ಲಾ ಬಸ್ ಕಂಡಕ್ಟರ್‌ಗಳು ಟಿಕೆಟ್ ಹರಿಯಲು ಪದೇ ಪದೆ ಎಂಜಲು ಬಳಸುತ್ತಿದ್ದುದು ಟೀಕೆಗೆ ಗುರಿಯಾಗಿತ್ತು. ಈಗ ಯಂತ್ರ ಬಳಕೆಯಿಂದ ಅದು ನಿವಾರಣೆಯಾಗಿದೆ.

21.3.25. ರಂದು ಟಿವಿಯಲ್ಲಿ ಪ್ರಸಾರವಾಗುತ್ತಿದ್ದ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡುತ್ತಿದ್ದ ಸದಸ್ಯರೊಬ್ಬರು ಐದಾರು ಹಾಳೆಗಳನ್ನು ಹಿಡಿದು ಓದುತ್ತಿದ್ದರು. ಆದರೆ ಪ್ರತಿ ಹಾಳೆ ತೆಗೆಯಲು ಎಂಜಲು ಬಳಸುತ್ತಿದ್ದರು. ಇದನ್ನು ನೋಡಿ ಪ್ರತಿ ಸದಸ್ಯರ ಮೇಜಿನ ಮೇಲೆ ಒಂದೊಂದು ಸ್ಪಾಂಜ್ ಬಟ್ಟಲುಗಳನ್ನು ಇಟ್ಟರೆ ಒಳ್ಳೆಯದು ಎನಿಸಿತು.(ಸರ್ಕಾರಿ ಕಚೇರಿಗಳಲ್ಲಿ ಕೂಡ) ಕೋವಿಡ್ ಕಾರಣದಿಂದ ಜನರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿದೆ.

ಎಚ್‌ಐವಿ, ಹೆಪಟೈಟಿಸ್ ಬಿ ಮುಂತಾದ ಸೋಂಕುಗಳನ್ನು ತಡೆಯಲು ಕೂಡ ಇಂತಹ ನಿಷೇಧ ಸಹಕಾರಿಯಾಗಿದೆ. ಎಂಜಲು ಬಳಸುವುದು ಕ್ರೀಡಾಂಗಣದಲ್ಲಿ ಪದೇ ಪದೆ ಉಗುಳುವುದು ನೇರ ಪ್ರಸಾರದಲ್ಲಿ ವೀಕ್ಷಕರಿಗೆ ಅಸಹ್ಯವೆನಿಸುತ್ತದೆ. ಆದ್ದರಿಂದ ನಿಷೇಧ ತೆಗೆಯದಂತೆ ಸರ್ಕಾರ, ಅರೋಗ್ಯ ಇಲಾಖೆ ಬಿಸಿಸಿಐಗೆ ನಿರ್ದೇಶನ ನೀಡಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು

■ ನಾಚಿಗೇಡಿನ ಸಂಗತಿ

ಮಾನ್ಯರೆ,

ಮುಖ್ಯಮಂತ್ರಿ, ಮಂತ್ರಿಗಳು ಹಾಗೂ ಶಾಸಕರ ವೇತನವನ್ನು ಶೇಕಡಾ 100 ರಷ್ಟು ಹೆಚ್ಚಿಸುವ ಎರಡು ತಿದ್ದುಪಡಿ ವಿದೇಯಕಗಳಿಗೆ ರಾಜ್ಯ ವಿಧಾನ ಸಭೆಯಲ್ಲಿ ದಿನಾಂಕ 21.03.2025 ರಂದು ಯಾವುದೇ ಚರ್ಚೆ ಇಲ್ಲದೇ ಅಂಗೀಕಾರ ಪಡೆದುಕೊಂಡಿರುವುದು ನಾಚಿಗೇಡಿನ ಸಂಗತಿಯಾಗಿದೆ. ರಾಜ್ಯದ ಲಕ್ಷಾಂತರ ಮಂದಿ ನೌಕರರು ಅಲ್ಪ ವೇತನದಲ್ಲೇ ಸೇವೆ ಸಲ್ಲಿಸುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಗ್ರಾಮ ಸೇವಕರು, ಅತಿಥಿ ಉಪನ್ಯಾಸಕರು ಸೇರಿದಂತೆ ರಾಜ್ಯದಲ್ಲಿ ಕಡಿಮೆ ವೇತನಕ್ಕಾಗಿ ದುಡಿಯುತ್ತಿರುವ ನೌಕರರ ಬಹುದೊಡ್ಡ ಸೇನೆಯೇ ಇದೆ. ಇತ್ತೀಚಿನ ವರ್ಷಗಳಲ್ಲಂತೂ ರಾಜ್ಯದ ಪ್ರತಿಯೊಂದು ಇಲಾಖೆಯಲ್ಲೂ ಹೊರ ಗುತ್ತಿಗೆಯ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುತ್ತಿರುವುದರಿಂದ, ಅಂತಹ ಹೊರ ಗುತ್ತಿಗೆಯ ನೌಕರರು ಗುತ್ತಿಗೆದಾರರಿಂದ ಸಾಕಷ್ಟು ಶೋಷಣೆಗೂ ಒಳಗಾಗುತ್ತಿರುವುದು ಗುಟ್ಟಿನ ವಿಚಾರವೇನಲ್ಲ.

ರಾಜ್ಯದ ಹಲವಾರು ಇಲಾಖೆಗಳಲ್ಲಿ ಖಾಲಿ ಬಿದ್ದಿರುವ ಹುದ್ದೆಗಳನ್ನು ತುಂಬದೇ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ನಡೆಯುತ್ತಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದೆ. ರಾಜ್ಯ ಸರ್ಕಾರ ಮಾಡುತ್ತಿರುವ ಸಾಲ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ರಾಜ್ಯದ ಅರ್ಥ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಶಾಸಕರು ಮತ್ತು ಮಂತ್ರಿ ಮಹೋದಯರ ವೇತನ ಹೆಚ್ಚಳಕ್ಕೆ ಅದೂ ಶೇಕಡಾ 100 ರಷ್ಟು, ಇದರ ಅಗತ್ಯ ಅಥವಾ ಅನಿವಾರ್ಯತೆ ಏನಿದೆ?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ಶಾಸಕ ದರ್ಶನ್ ಧ್ರುವನಾರಾಯಣ್ ಗಮನಕ್ಕೆ

ಮಾನ್ಯರೆ,

ನಂಜನಗೂಡು ಕೇಂದ್ರ ಬಸ್ ನಿಲ್ದಾಣ, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ಕಡೆಯಿಂದ ಮೈಸೂರಿಗೆ ಹೋಗುವ ಕೆಎಸ್‌ಆರ್‌ಟಿಸಿ ಬಸ್‌ಗಳು ಹಾಗೂ ಕೆಲವು ಖಾಸಗಿ ವಾಹನಗಳು ನಂಜನಗೂಡು ಕೈಗಾರಿಕಾ ಪ್ರದೇಶದ ಬಳಿ ಸೇತುವೆ ಸಮೀಪ ನಿಲ್ಲುತ್ತವೆ. ಇಲ್ಲಿನ ಅಕ್ಕಪಕ್ಕದ ಪ್ರದೇಶಗಳಾದ ಕನಕನಗರ, ಕತ್ವಾಡಿಪುರ ಇಂಡಸ್ಟ್ರಿಯಲ್ ಏರಿಯಾ ಸಮೀಪ ಇರುವ ಸಾಕಷ್ಟು ನಾಗರೀಕರು, ಖಾಸಗಿ ನೌಕರರು, ಮಹಿಳೆಯರು, ವಿದ್ಯಾರ್ಥಿಗಳು, ವಯೋವೃದ್ಧರು, ದಿನಂಪ್ರತಿ ತಮ್ಮ ಕೆಲಸ ಕಾರ್ಯಗಳಿಗೆ ಮೈಸೂರಿಗೆ ತೆರಳಲು ಇದೇ ಸ್ಥಳದಲ್ಲಿ ನಿಲ್ಲುತ್ತಾರೆ.

ಆದರೆ, ಇಲ್ಲಿ ಸೂಕ್ತವಾದ ಬಸ್ ತಂಗುದಾಣ ಇರದೆ ಬಿಸಿಲು, ಮಳೆ ಗಾಳಿಯಲ್ಲಿ ಪ್ರಯಾಣಿಕರು ನಿಲ್ಲಬೇಕಾದ ಶೋಚನೀಯ ಪರಿಸ್ಥಿತಿ ಇದೆ. ಈ ಸಂಬಂಧ ಯುವ ಶಾಸಕ ದರ್ಶನ್ ಧ್ರುವನಾರಾಯಣ್ ಸಾರ್ವಜನಿಕರ ಅನುಕೂಲ ದೃಷ್ಟಿಯಿಂದ ರಾಷ್ಟ್ರೀಯ ಹೆದ್ದಾರಿ 766ರ ಪಕ್ಕದಲ್ಲೇ ಸ್ಥಳ ಪರಿಶೀಲನೆ ನಡೆಸಿ ಬಸ್ ತಂಗುದಾಣ ನಿರ್ಮಾಣಕ್ಕೆ ತುರ್ತಾಗಿ ಶೀಘ್ರ ಕ್ರಮ ಕೈಗೊಳ್ಳಬೇಕಿದೆ.

–ಅನಿಲ್‌ಕುಮಾರ್, ನಂಜನಗೂಡು.


■ ವಿದ್ಯಾರ್ಥಿಗಳೇ ಆತಂಕ ಬಿಟ್ಟು ಪರೀಕ್ಷೆ ಬರೆಯಿರಿ

ಮಾನ್ಯರೆ,

ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಮಾರ್ಚ್ 21 ರಿಂದ ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಪರೀಕ್ಷೆಗಳನ್ನು ಎದುರಿಸಬೇಕು. ಪಬ್ಲಿಕ್ ಪರೀಕ್ಷೆ ಎಂದಾಗ ವಿದ್ಯಾರ್ಥಿಗಳಿಗೆ ಸಹಜವಾಗಿ ಪರೀಕ್ಷೆಯ ಆತಂಕವಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವಾಗಿದ್ದು, ಈ ಪರೀಕ್ಷೆಯನ್ನು ಎದುರಿಸಲು ವಿದ್ಯಾರ್ಥಿಗಳಿಗೆ ಧೈರ್ಯ ಮತ್ತು ಆತ್ಮ ವಿಶ್ವಾಸ ತುಂಬುವುದು ಶಿಕ್ಷಕರು ಹಾಗೂ ಪೋಷಕರ ಜವಾಬ್ದಾರಿಯಾಗಿದೆ.

ವಿದ್ಯಾರ್ಥಿಗಳು ಪರೀಕ್ಷೆಯ ಬಗ್ಗೆ ಯಾವುದೇ ಆತಂಕ ಪಡದೆ ಧೈರ್ಯವಾಗಿ ಎದುರಿಸುತ್ತೇವೆ ಎಂಬ ಮನೋಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು. ಯಾವುದೇ ಗೊಂದಲ ಮತ್ತು ಆತಂಕಕ್ಕೆ ಒಳಗಾಗದೆ ಶಾಂತವಾಗಿ ಕುಳಿತು ಓದಿದ ವಿಷಯಗಳನ್ನು ನೆನಪಿಸಿಕೊಂಡು ಬರೆಯಬೇಕು. ಗಾಬರಿಯಾದಷ್ಟು ಓದಿದ ವಿಚಾರಗಳು ಮರೆತು ಹೋಗುತ್ತವೆ. ಆದ್ದರಿಂದ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಸೂಕ್ಷ್ಮವಾಗಿ ಗಮನಿಸಿ, ಚನ್ನಾಗಿ ಉತ್ತರ ಗೊತ್ತಿರುವ ಪ್ರಶ್ನೆಗಳಿಗೆ ಮೊದಲು ಉತ್ತರಿಸಿ ಕಷ್ಟದ ಪ್ರಶ್ನೆಗಳಿಗೆ ಕೊನೆಯಲ್ಲಿ ಉತ್ತರಿಸಬೇಕು. ಸಮಯವನ್ನು ವ್ಯರ್ಥ ಮಾಡದಂತೆ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು.

–ಕೆ.ಎಸ್.ಸುರೇಶ್, ಮುಖ್ಯ ಶಿಕ್ಷಕರು, ಸರಗೂರು.



ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ–ರಾಜಕಾರಣಿ
ಮೊ: 9663996390

ಹಳ್ಳಿ ಹಕ್ಕಿ ಹಾಡು



ಮುಗಿತು, ವಿಧಾನಮಂಡಲ ಅಧಿವೇಶನ



> “ನಾಡಿನ ಜನರ ಬೆವರಿನ ಶ್ರಮದ ದುಡಿಮೆಯಿಂದ ತುಂಬಿದ ಖಜಾನೆ ಹಣ ಸಮರ್ಪಕವಾಗಿ ವ್ಯಯವಾಗದೆ, ಪೋಲಾಗುತ್ತಿದೆ ಎನ್ನುವ ಸತ್ಯವನ್ನು ಸರಕಾರವೇ ಮುಚ್ಚಿಡುತ್ತಿದೆ. ಇದನ್ನು ತೆರಿಗೆದಾರರಿಗೆ ತಿಳಿಸುವವರು ಯಾರು? ಹೋಗಲಿ, ಕೇಳುವವರು ಯಾರು? ಇದೆಲ್ಲವನ್ನು ಕೇಳಬೇಕಾದವರು ಶಾಸಕರು ಮತ್ತು ಜನರು. ಬಹುತೇಕ ಶಾಸಕರಿಗೆ ಆಯ–ವ್ಯಯದ ಬಗೆಗೆ, ಹಣಕಾಸು ಇಲಾಖೆ ವಹಿವಾಟಿನ ಬಗೆಗೆ ಅರಿವೇ ಇಲ್ಲ. ಇನ್ನು ಜನರ ಕೈಗೆ ಮುಖ್ಯಮಂತ್ರಿಗಳು, ಮಂತ್ರಿ, ಶಾಸಕರು ಸಿಗುವುದಿಲ್ಲ. ಸಿಕ್ಕರೂ ಜನರಿಗೆ ಅವರ ಕೇಳುವ ಧೈರ್ಯವಿಲ್ಲ; ಇನ್ನು ಶಾಸಕರು, ಸಚಿವರು, ಸಿಎಂಗೆ ಕೇಳಿಸಿಕೊಳ್ಳುವ ಸಹನೆ ಇರುವುದಿಲ್ಲ.

ಮೂರು ವಾರಗಳ ವಿಧಾನಸಭೆ ಮತ್ತು ವಿಧಾನ ಪರಿಷತ್–ಅರ್ಥಾತ್ ವಿಧಾನಮಂಡಲ ಅಧಿವೇಶನ ಮೊನ್ನೆ ಶುಕ್ರವಾರ ಮುಗಿಯಿತು. ಹಲವು ಕೋಟಿ ಹಣ ಅಧಿವೇಶನಕ್ಕೆ ವ್ಯಯವಾಯಿತೇ ವಿನಃ, ಆರ್ಥಿಕವಾಗಿ ಹಿಂದುಳಿದವರ, ಶೋಷಿತರ, ಸಾಮಾನ್ಯರ ಬದುಕಿನ ಬವಣೆಗಳಿಗೆ ಈ ಅಧಿವೇಶನ ಧ್ವನಿಯಾಗಲಿಲ್ಲ.

ಆಯ–ವ್ಯಯ ಅಧಿವೇಶನದಲ್ಲಿ ನಾಡಿನ ಜನರ ಬೆವರಿನ ಶ್ರಮದ ದುಡಿಮೆಯಿಂದ ತುಂಬಿದ ಖಜಾನೆಯ ಹಣ, ಅವರ ಕಲ್ಯಾಣಕ್ಕೆ ಮತ್ತು ಆರ್ಥಿಕ ಬೆಳವಣಿಗೆಗೆ ಎಷ್ಟೆಷ್ಟು, ಹೇಗೆ ಹೇಗೆ ಖರ್ಚಾಗಬೇಕು ಎಂಬುದರ ಚರ್ಚೆಗಿಂತ ಹೆಚ್ಚಾಗಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಪರಸ್ಪರ ಆರೋಪ–ಪ್ರತ್ಯಾರೋಪಗಳು, ನಮ್ಮ ಕಾಲದಲ್ಲಿ–ನಿಮ್ಮ ಕಾಲದಲ್ಲಿ... ಕಿರುಚಾಟ–ಕೂಗಾಟಗಳು, ಗದ್ದಲ–ಕೋಲಾಹಲದ ನಡುವೆಯೇ ಅಧಿವೇಶನ ಮುಕ್ತಾಯವಾಯಿತೇ ವಿನಃ ಜನರ ಒಳಿತೇನೂ ಸಾಧನೆ ಆಗಲಿಲ್ಲ.

173 ಪುಟಗಳ Budget ಪುಸ್ತಕವನ್ನು ಹಣಕಾಸಿನ ಸಚಿವರೂ ಆದ ಶ್ರೀ ಸಿದ್ದರಾಮಯ್ಯನವರು ಸುಮಾರು 3 ಗಂಟೆ 30 ನಿಮಿಷಗಳ ಕಾಲ ಓದುವುದರ ಮೂಲಕ, ಬರಿಯ ಓದುವುದರಲ್ಲಿ ದಾಖಲೆ ಸ್ಥಾಪಿಸಿದರು. ಆಯ–ವ್ಯಯ ತಯಾರಿಯಲ್ಲಿ ಮುಖ್ಯಮಂತ್ರಿಗಳು ತಮ್ಮ ಅನುಭವವನ್ನು, ಗಾಂಭೀರ್ಯತೆಯನ್ನು ಪ್ರದರ್ಶಿಸಲಿಲ್ಲ. ಎಲ್ಲದರಲ್ಲೂ ಕೊರತೆ ಎದ್ದು ಕಾಣುತ್ತದೆ.

2025–26ನೇ ಸಾಲಿನ ಆಯ–ವ್ಯಯದಲ್ಲಿ ರೂ. 4,09,549/– ಕೋಟಿ ವೆಚ್ಚವನ್ನು ಅಂದಾಜಿಸಲಾಗಿದೆ. ಇದರಲ್ಲಿ ರೂ.1,16,000/– ಕೋಟಿ ಸಾಲವೂ ಸೇರಿದಂತೆ, ಹಿಂದಿನ ವರ್ಷಗಳ ಸಾಲ ಮರು ಪಾವತಿ ಮೊತ್ತ ರೂ.26,474/– ಕೋಟಿಯೂ ಸೇರಿದೆ.

ಈಗಿರುವ ರಾಜ್ಯದ ಒಟ್ಟು ಸಾಲ ರೂ.7,50,000/– ಕೋಟಿಗಳಿಗೂ ಮೀರಿದೆ. ಹಿಂದಿನ ಯಾವುದೇ ಸರ್ಕಾರಕ್ಕಿಂತ ಶ್ರೀ ಸಿದ್ದರಾಮಯ್ಯನವರು ಮಾಡಿದ ಸಾಲವೇ ಬಲು ಹೆಚ್ಚು. ಆದರೂ ಅವರ ಸ್ನೇಹಿತರ ಪ್ರಕಾರ ಉತ್ತಮ ಹಣಕಾಸು ಮಂತ್ರಿ ಶ್ರೀ ಸಿದ್ದರಾಮಯ್ಯನವರು.

16 ಬಾರಿ ರಾಜ್ಯ ಬಜೆಟ್ ಮಂಡನೆ ಮಾಡಿ, ರಾಜ್ಯದಲ್ಲಿ ದಾಖಲೆ ಸ್ಥಾಪಿಸಿದ್ದಾರೆ ಎಂದು ಆಡಳಿತ ಪಕ್ಷದವರ ಹೆಮ್ಮೆ–ಪ್ರಶಂಸೆ. 16 ಬಾರಿ ಬಜೆಟ್ ಮಂಡಿಸಿಯಾದರೂ, ಹಣಕಾಸು ಇಲಾಖೆಗೆ ಒಂದು ಹೊಸತನವನ್ನು, ಸುಧಾರಣೆಯನ್ನು, ಬದಲಾವಣೆಯನ್ನು ತರುವುದಾಗಲೀ ಮತ್ತು ರಾಜ್ಯದ ಜನತೆ ಸದಾ ಸ್ಮರಣೆ ಮಾಡುವಂತಹ ಗಟ್ಟಿಯಾದ ಕಾರ್ಯಕ್ರಮಗಳನ್ನು ಕೊಡಲಾಗಲಿಲ್ಲ. ಸಾಮಾನ್ಯ ಜನರು ಸಮಾಧಾನದಿಂದ ಜೀವನ ಸಾಗಿಸುವ ಬದಲು ಇವರು ಹೇರುತ್ತಿರುವ ತೆರಿಗೆಗಳ ಭಾರದಿಂದ ಅವರ ಬೆನ್ನು ಬಾಗುತ್ತಲೇ ಇದೆ; ಜೀವನ ಸೊರಗುತ್ತಲೇ ಇದೆ.

ಮುಖ್ಯಮಂತ್ರಿಗಳ ಕನಸಿನ 'ಗ್ಯಾರಂಟಿ' ಯೋಜನೆಗಾಗಿ ಈ ತನಕ 75 ಸಾವಿರ ಕೋಟಿಗೂ ಮೀರಿ ಖರ್ಚು ಮಾಡಿದ್ದು, ಈ ಬಜೆಟ್‌ನಲ್ಲೂ 56 ಸಾವಿರ ಕೋಟಿಗಳನ್ನು ಮೀಸಲಿಟ್ಟಿರುವುದನ್ನು ಯಾವುದೇ ಆರ್ಥಿಕ ತಜ್ಞರು ಒಪ್ಪಲಾರರು.

ಸರ್ಕಾರದ ಬೊಕ್ಕಸಕ್ಕೆ ಈ ಬಾರಿ 40 ಸಾವಿರ ಕೋಟಿ ರೂಪಾಯಿಗಳ ಆದಾಯವನ್ನು ಎಕ್ಸೈಸ್ (ಅಬಕಾರಿ) ಇಲಾಖೆಯಿಂದ ಅಂದಾಜಿಸಲಾಗಿದೆ. ಇದರಿಂದ ಮದ್ಯದ ಬೆಲೆಗಳು ಇನ್ನೂ ಹೆಚ್ಚಾಗಲಿದ್ದು, ಇಡೀ ಸಮಾಜದ ಸ್ವಾಸ್ಥ್ಯವನ್ನೇ ಹಾಳು ಮಾಡುವಂತಿದೆ. ಯುವಕರು, ವಿದ್ಯಾರ್ಥಿಗಳು, ಬಿಯರ್ ಪ್ರಿಯರು, ಬಿಯರ್‌ಗೆ ಮನಸೋತವರು ಈಗ ಅದನ್ನು ಕೊಳ್ಳಲು ಆಗುತ್ತಿಲ್ಲ. ಇಂದು ಬಿಯರ್ ಬೆಲೆ ಇನ್ನೂರು ರೂಪಾಯಿಗಳನ್ನು ದಾಟಿದೆ. ಹಾಗಾಗಿ ಯುವಕರು ಬಿಯರ್ ಬದಲು ಗಾಂಜಾ, ಅಫೀಮು ಮುಂತಾದ ನಶೆ ಬರುವ ಮಾಲುಗಳಿಗೆ ಬದಲಾಗುವುದು ಖಂಡಿತ. ಗೂಡಂಗಡಿಗಳಲ್ಲಿ ಗಾಂಜಾ ಪೊಟ್ಟಣ ಕಟ್ಟಿ ಕೊಡುತ್ತಿದ್ದಾರೆ. ಒಂದು ಪೊಟ್ಟಣ ಗಾಂಜಾವನ್ನು 4–5 ಹುಡುಗರು ಸಿಗರೇಟಿನಲ್ಲಿ ತುಂಬಿ ಧಂ ಹೊಡೆದು ನಶೆ ಏರಿಸಿಕೊಳ್ಳುತ್ತಿದ್ದಾರೆ. ಹಳ್ಳಿಗಳ ಚಿಲ್ಲರೆ ಅಂಗಡಿಗಳಲ್ಲಿ ಕಳಪೆ ಮದ್ಯ ಮಾರಾಟ ಮಾಮೂಲಾಗಿದೆ. **ಇನ್ನು ಮುಂದೆ ಬೀದಿ ಬೀದಿಗಳಲ್ಲಿ ಮದ್ಯ ಮಾರಿ ಸರಕಾರದ ಖಜಾನೆಗೆ ಹಣ ತುಂಬಿಸುವುದರೊಂದಿಗೆ ಯುವಕರ ಹೆಣ ಸ್ಮಶಾನ ತುಂಬುವುದು ಗ್ಯಾರಂಟಿಯಾಗುತ್ತಿದೆ.**

ಭವಿಷ್ಯದ ಭಾರತವನ್ನು ಕಟ್ಟಬಲ್ಲ ಯುವಕರು ನಶೆಯ ದಾಸರಾಗಿ ಇಡೀ ಸಮಾಜ, ಸಂಸ್ಕೃತಿ, ಸಂಬಂಧಗಳನ್ನು ಮುರಿಯುವ ರಾಕ್ಷಸರಾಗುವ ಪರಿಸ್ಥಿತಿಯನ್ನು ಶ್ರೀ ಸಿದ್ದರಾಮಯ್ಯನವರ ಘನ ಸರ್ಕಾರ ನಿರ್ಮಾಣ ಮಾಡುತ್ತಿದೆ.

ಬಜೆಟ್‌ನಲ್ಲಿ ಪ್ರಮುಖವಾಗಿ ನಾಡಿನ ಅಕ್ಷರ, ಆರೋಗ್ಯ, ಅನ್ನ, ದುಡಿಯುವ ಕೈಗಳಿಗೆ ಉದ್ಯೋಗ ಸೃಷ್ಟಿ, ಸರಕಾರದ ದುಂದುವೆಚ್ಚಗಳ ಬಗೆಗೆ ಮತ್ತು ಶಾಸಕರು, ಮಂತ್ರಿಗಳ, ಸಂಬಳ, ಸಾರಿಗೆ, ಭತ್ಯೆ ಹೆಚ್ಚಳದ ಬಗ್ಗೆಯೂ ಚರ್ಚೆ ಆಗಲಿಲ್ಲ. **ವಿರೋಧ ಪಕ್ಷಗಳ ನಾಯಕರು, ಆಡಳಿತ ಪಕ್ಷದ ಜೊತೆ ಹೊಂದಿಕೊಂಡವರಂತೆ ಭಾಸವಾಗುತ್ತಿತ್ತು ಅವರ ನಡವಳಿಕೆಗಳು.**

ಗುರುವಾರದಂದು ಸದನದಲ್ಲಿ ನಡೆದ ಹನಿಟ್ರ್ಯಾಪ್ ಚರ್ಚೆ ನಾಡಿನ ಜನರಲ್ಲಿ ರಾಜ್ಯದ ಶಾಸಕರು, ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳ ನಡವಳಿಕೆಗಳ ಬಗೆಗೆ ಹೇಸಿಗೆ ತರುವಂತಿತ್ತು. ಇವರೇನಾ ನಮ್ಮ ಜನಪ್ರತಿನಿಧಿಗಳು ಮತ್ತು ಸರಕಾರ ಎಂದು ಯುವಕರು ಕೇಕೆ ಹಾಕಿ ಗಹಗಹಿಸಿ ನಗುವಂತಿತ್ತು.

ಗ್ಯಾರಂಟಿ ಯೋಜನೆಗಳಲ್ಲಿ ಗೃಹಲಕ್ಷ್ಮಿ ಯೋಜನೆಯಲ್ಲಿ ನಿನ್ನ ಹೆಂಡತಿಗೂ 'ಫ್ರೀ' ನನ್ನ ಹೆಂಡ್ತಿಗೂ 'ಫ್ರೀ' ಎಂದು ಹೇಳುತ್ತಾ ಅದಕ್ಕೆ ಯಾವುದೇ ಮಾನದಂಡ ವಿಧಿಸದೇ ಇರುವುದು ಸರಕಾರದ ಬೇಜವಾಬ್ದಾರಿತನವನ್ನು ತೋರಿಸುತ್ತದೆ.

ಯಶಸ್ವಿ ಹಣಕಾಸು ಮಂತ್ರಿ ಅಂತ ಹೇಳಿದರೆ ಎಲ್ಲಾ ಇಲಾಖೆಗಳಲ್ಲಿ ಆಗುತ್ತಿರುವ ದುಂದುವೆಚ್ಚಕ್ಕೆ ಕಡಿವಾಣ ಹಾಕಿ, ವೆಚ್ಚವಾಗುತ್ತಿರುವ ಹಣದಿಂದ ಸರಕಾರಕ್ಕೆ ಅಂದರೆ ಜನಕ್ಕೆ ಆದ ಉಪಯೋಗವೇನು ಎಂಬುದನ್ನು ವಿಮರ್ಶಿಸುತ್ತಾ, ಎಲ್ಲಾ ಇಲಾಖೆಗಳನ್ನು ರಿವ್ಯೂವ್ ಮಾಡುತ್ತಿರಬೇಕು. ಇಲಾಖೆಗಳ ಮಂತ್ರಿಗಳು, ಪ್ರಧಾನ ಕಾರ್ಯದರ್ಶಿಗಳಿಗೆ ಚಾಟಿ ಬೀಸಿ ಎಚ್ಚರಿಸುತ್ತಾ ಇರಬೇಕು. ಅದರಿಂದ ಸರ್ಕಾರದ ಯಶಸ್ಸು ಮತ್ತು ಹಣಕಾಸಿನ ವಹಿವಾಟು ಇಮ್ಮಡಿಯಾಗುತ್ತದೆ. ಅದು ಮುಖ್ಯಮಂತ್ರಿಗಳಿಂದ ಸಾಧ್ಯವಿಲ್ಲ, ಸಮಯದ ಪ್ರಶ್ನೆ.

ಹಿಂದೆ ಬಹಳಷ್ಟು ಜನ ಮುಖ್ಯಮಂತ್ರಿಗಳು ಹಣಕಾಸು ಇಲಾಖೆಯನ್ನು ತಮ್ಮ ಬಳಿ ಇರಿಸಿಕೊಂಡಿರಲಿಲ್ಲ. ಕಾರಣ, ಒಬ್ಬ ಮುಖ್ಯಮಂತ್ರಿಗೆ ತನ್ನ ರಾಜ್ಯದ ಶಾಸಕರ (ಈಗ MLA + MLC 300 ಜನರ ಮೇಲಿದ್ದಾರೆ) ಕ್ಷೇತ್ರದ ಸಮಸ್ಯೆಗಳು, ಸರಕಾರದ ಇಲಾಖಾ ಸಭೆಗಳು, ಜನರ ಸಂದರ್ಶನ ಇನ್ನೂ ಹಲವಾರು ವಿಷಯಗಳ ಕಡೆ ಗಮನಹರಿಸಲೇ ಸಮಯ ಇಲ್ಲದಿರುವುದರಿಂದ ಹಣಕಾಸು ಇಲಾಖೆ ಸಮರ್ಥ ನಿರ್ವಹಣೆಗೆ ಸಮಯವೆಲ್ಲಿಂದ ಬಂತು? ಹಾಗಾಗಿ ನಾನು ಮೊನ್ನೆಯೂ ಇದನ್ನೇ ಹೇಳಿದೆ; ಮುಖ್ಯಮಂತ್ರಿಗಳ ಬಳಿ ಇರುವ ಇಲಾಖೆಗಳು ಸಾಯುತ್ತವೆ. ಜೀವಂತಿಕೆ ಇರುವುದಿಲ್ಲ. ಹಾಗಾಗಿ ಮುಖ್ಯಮಂತ್ರಿಯಾದವರು ಎಲ್ಲಾ ಇಲಾಖಾ ಜವಾಬ್ದಾರಿಯನ್ನು ತಮ್ಮ ಸಹೋದ್ಯೋಗಿಗಳಾದ ಮಂತ್ರಿಗಳಿಗೆ ವಹಿಸಿ ತಾನು ಮೇಲುಸ್ತುವಾರಿ ಮಾಡುವುದು ಉಚಿತ.

ಹಾಗಾಗಿ ಹಿಂದೆ ನಿಜಲಿಂಗಪ್ಪನವರ ಸರಕಾರದಲ್ಲಿ ಟಿ.ಮರಿಯಪ್ಪನವರು, ದೇವರಾಜ ಅರಸುರವರ ಸರ್ಕಾರದಲ್ಲಿ ಎಂ.ವೈ.ಘೋರ್ಪಡೆಯವರು, ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ಮೈಸೂರಿನ ರಾಜಶೇಖರ ಮೂರ್ತಿಯವರು, ಗುಂಡೂರಾಯರ ಸರ್ಕಾರದಲ್ಲಿ ಎಂ.ವೀರಪ್ಪ ಮೊಯ್ಲಿಯವರು, ಹೆಚ್.ಡಿ.ದೇವೇಗೌಡರ ಸರ್ಕಾರದಲ್ಲಿ ಶ್ರೀ ಸಿದ್ದರಾಮಯ್ಯನವರು ಹೀಗೆ ಯಶಸ್ವಿಯಾಗಿ ಹಣಕಾಸು ಇಲಾಖೆಯನ್ನು ನಡೆಸಿದ್ದಾರೆ.

ಆದರೆ, ಈಗ ಶ್ರೀ ಸಿದ್ದರಾಮಯ್ಯನವರು ಹಣಕಾಸು ಇಲಾಖೆಯನ್ನು ತಮ್ಮ ಬಳಿಯೇ ಇಟ್ಟುಕೊಂಡು ಪರಮಾಧಿಕಾರ ಚಲಾಯಿಸುತ್ತಿದ್ದಾರೆ. ಇದರಿಂದ ಸರ್ಕಾರಕ್ಕಾಗಲೀ, ಜನರಿಗಾಗಲೀ ಏನು ಲಾಭವಿಲ್ಲ. ಆಡಳಿತದಲ್ಲಿ ಚಲನಶೀಲತೆ ಇಲ್ಲದಿದ್ದರೆ ಅಭಿವೃದ್ಧಿಯನ್ನು ನಿರೀಕ್ಷೆ ಮಾಡುವುದು ಸಾಧ್ಯವಿಲ್ಲ. ಈಗ ಎಲ್ಲಾ ಇಲಾಖೆಗಳಲ್ಲೂ ಶೇ.50ಕ್ಕೂ ಮೀರಿ ಅನುಕಂಪದ ಆಧಾರದ ಮೇಲೆ ನೇಮಕವಾಗಿರುವ ನೌಕರರಿದ್ದಾರೆ. ಅವರಿಗೆ ಯಾವುದೇ ತರಬೇತಿ ಇಲ್ಲ. ಇನ್ನು, ಸುಮಾರು ಎರಡು ಲಕ್ಷಕ್ಕೂ ಮೀರಿ ಅಧಿಕಾರಿ, ನೌಕರರ ಹುದ್ದೆಗಳು ಖಾಲಿ ಇದ್ದು ಅವರ ಜಾಗದಲ್ಲಿ Out Source ಹುಡುಗರು, ಹುಡುಗಿಯರು ಕೆಲಸ ಮಾಡುತ್ತಿದ್ದಾರೆ. Out Source ಮೂಲಕ ಹುಡುಗರ ಆಯ್ಕೆ ಮಾಡಿಕೊಳ್ಳಲು ಕೆಲವು ಕಂಪನಿಗಳು ಹುಟ್ಟಿಕೊಂಡಿವೆ. ಅಂತಹ ಕಂಪನಿಗಳ ಮಾಲೀಕರು ಯಾರೆಂದರೆ ನಿವೃತ್ತ ಹಿರಿಯ IAS ಅಧಿಕಾರಿಗಳು ಮತ್ತು ಅವರ ಮನೆಯವರು. Out Source ಹುಡುಗರು/ಹುಡುಗಿಯರಿಗೆ ತಿಂಗಳಿಗೆ ರೂ. 18,000/– ರೂಪಾಯಿಗಳನ್ನು ಕಂಪನಿಗಳು ಸರ್ಕಾರದಿಂದ ಪಡೆದು ಅವರಿಗೆ ರೂ.12,000/– ನೀಡುತ್ತಿದ್ದಾರೆ. ಇದೆಲ್ಲಾ ಅಕ್ರಮ, ಭ್ರಷ್ಟಾಚಾರ ಅಲ್ಲವೇ? ಸರಕಾರದ ಹಣ ಪೋಲಾಗುತ್ತಿಲ್ಲವೇ? ಇಂತಹ ವಿಚಾರಗಳನ್ನೆಲ್ಲಾ ಹಣಕಾಸು ಮಂತ್ರಿಗಳೇ, ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕು. ಆದರೆ ಹಣಕಾಸು ಮಂತ್ರಿಗಳಿಗೆ ಸಮಯವಿಲ್ಲ; ಮೇಲಾಗಿ ಆಸಕ್ತಿಯೂ ಇಲ್ಲ.

ಈ ಎಲ್ಲಾ ಕಾರಣಗಳಿಂದ ನಾಡಿನ ಜನರ ಬೆವರಿನ ಶ್ರಮದ ದುಡಿಮೆಯಿಂದ ತುಂಬಿದ ಖಜಾನೆ ಹಣ ಸಮರ್ಪಕವಾಗಿ ವ್ಯಯವಾಗದೆ, ಪೋಲಾಗುತ್ತಿದೆ ಎನ್ನುವ ಸತ್ಯವನ್ನು ಸರಕಾರವೇ ಮುಚ್ಚಿಡುತ್ತಿದೆ. ಇದನ್ನು ತೆರಿಗೆದಾರರಿಗೆ ತಿಳಿಸುವವರು ಯಾರು? ಹೋಗಲಿ, ಕೇಳುವವರು ಯಾರು? ಇದೆಲ್ಲವನ್ನು ಕೇಳಬೇಕಾದವರು ಶಾಸಕರು ಮತ್ತು ಜನರು. ಬಹುತೇಕ ಶಾಸಕರಿಗೆ ಆಯ–ವ್ಯಯದ ಬಗೆಗೆ, ಹಣಕಾಸು ಇಲಾಖೆ ವಹಿವಾಟಿನ ಬಗೆಗೆ ಅರಿವೇ ಇಲ್ಲ. ಇನ್ನು ಜನರ ಕೈಗೆ ಮುಖ್ಯಮಂತ್ರಿ, ಮಂತ್ರಿಗಳು, ಶಾಸಕರು ಸಿಗುವುದಿಲ್ಲ. ಸಿಕ್ಕರೂ ಜನರಿಗೆ ಅವರ ಕೇಳುವ ಧೈರ್ಯವಿಲ್ಲ ಇನ್ನು ಶಾಸಕರು, ಸಚಿವರು, ಸಿಎಂಗೆ ಕೇಳಿಸಿಕೊಳ್ಳುವ ಸಹನೆ ಇರುವುದಿಲ್ಲ.

ಹಾಗಾಗಿ ಜನರಿಗೆ ಮತ್ತು ತೆರಿಗೆದಾರರಿಗೆ ಈ ನಮ್ಮ **'ಮೈಸೂರು ಮಿತ್ರ'** ಪತ್ರಿಕೆಯ ಮೂಲಕ ವಾಸ್ತವತೆಯ ಚಿತ್ರಣವನ್ನು ಕೊಡುವ ಪ್ರಯತ್ನವನ್ನು ಮಾಡಿದ್ದೇನೆ. ನಿಮ್ಮ ಪ್ರತಿಕ್ರಿಯೆ ಬರಲಿ.

ರಮಣೀಯ ಕಾರ್ಕಳ



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346



ಕರ್ನಾಟಕದ ಇತಿಹಾಸದಲ್ಲಿ ಆಗಿಹೋದ ಹಲವಾರು ಧರ್ಮಗಳಲ್ಲಿ ಜೈನ ಧರ್ಮವೂ ಒಂದು. ಒಂದೊಂದು ಯುಗದಲ್ಲಿ ಒಂದೊಂದು ಧರ್ಮದ ಪ್ರಾಬಲ್ಯ ಇರುವುದನ್ನು ಗಮನಿಸಬಹುದು. ಹಾಗೆಯೇ ಕನ್ನಡ ನಾಡು–ನುಡಿ, ಸಾಹಿತ್ಯ ಶಿಲ್ಪ ಮತ್ತು ಸಂಸ್ಕೃತಿಗೆ ಜೈನರ ಕೊಡುಗೆಯೂ ಗಣನೀಯವಾದುದೇ. ನಮಗೆ ಸಿಕ್ಕಿರುವ ಕನ್ನಡ ಕಾವ್ಯಗಳ, ಗದ್ಯದ ರಚನಕಾರರ ಹೆಸರು ಆರಂಭವಾಗುವುದೇ ಜೈನರಿಂದ ಎಂಬುದು ಸಾಹಿತ್ಯವನ್ನು ಅಭ್ಯಸಿಸುವ ಯಾರಿಗೇ ಆದರೂ ಎದ್ದು ತೋರುವ ಅಂಶ. ಕನ್ನಡದ ಮೊದಲ ಗದ್ಯವಾದ ವಡ್ಡಾರಾಧನೆ, ಮೊದಲ ಕಾವ್ಯವಾದ ಆದಿ ಪುರಾಣ ಮತ್ತು ವಿಕ್ರಮಾರ್ಜುನ ವಿಜಯಂ, ಮೊದಲ ಅಲಂಕಾರ ಗ್ರಂಥವಾದ ಕವಿರಾಜಮಾರ್ಗ ಇತ್ಯಾದಿಗಳೆಲ್ಲವೂ ಜೈನ ಕವಿಗಳದ್ದೇ. ಶಿವಕೋಟ್ಯಾಚಾರ್ಯ, ಶ್ರೀವಿಜಯ, ಪಂಪ, ಪೊನ್ನ, ರನ್ನ, ಜನ್ನ, ಚಾವುಂಡರಾಯ, ನಾಗವರ್ಮ, ರತ್ನಾಕರವರ್ಣಿ ಹೀಗೇ ಜೈನ ಕವಿಗಳ ಪಟ್ಟಿ ಉದ್ದವಿದೆ. ಹೊಯ್ಸಳ ರಾಜರುಗಳು ವಾಸ್ತುಶಿಲ್ಪಕ್ಕೆ ನೀಡಿರುವ ಅನುಪಮ ಕೊಡುಗೆಯಂತೂ ಎಲ್ಲರಿಗೂ ಚಿರಪರಿಚಿತ.

ವಿಶ್ವ ವಿಖ್ಯಾತವಾದ ಏಕಶಿಲಾ ಗೊಮ್ಮಟನ ಮೂರ್ತಿಗಳೆಲ್ಲವೂ ಇರುವುದೂ ಕನ್ನಡ ನಾಡಿನಲ್ಲೇ. ಅವುಗಳಲ್ಲಿ ಒಂದಾದ ಕಾರ್ಕಳಕ್ಕೆ ಹೋಗಬೇಕೆನ್ನುವ ನನ್ನ ಬಯಕೆ ಇತ್ತೀಚೆಗೆ ಕೈಗೂಡಿತು. ಕರಾವಳಿ, ತುಳು ನಾಡು ಎಂಬಿತ್ಯಾದಿಯಾಗಿ ಕರೆಸಿಕೊಳ್ಳುವ ಪ್ರದೇಶಕ್ಕೆ ಸೇರಿದ ಕಾರ್ಕಳದ ಮೂಲ ಹೆಸರು ಪಾಂಡ್ಯ ನಗರಿ ಎಂದು. ಕರಿ ಕಲ್ಲುಗಳು ಹೆಚ್ಚಾಗಿ ಸಿಗುತ್ತಿದ್ದುದರಿಂದ ಕರಿಕಲ್ಲು–ಕಾರಕಲ್ಲು–ಕಾರ್ಕಳ ಎಂಬುದಾಗಿ ಆಗಿದೆ ಎಂಬ ಒಂದು ವ್ಯಾಖ್ಯಾನಕ್ಕೆ ಪ್ರತಿಯಾಗಿ ಕರಿ–ಕೊಳ–ಆನೆಗಳಿಗಾಗಿ ಇದ್ದ ಕೊಳದಿಂದಾಗಿ ಕರಿಕೊಳವು ಕಾರ್ಕಳ ಎಂದಾಯಿತು ಎಂಬುದು ಮತ್ತೊಂದು ವಿವರಣೆ. ಅದು ಏನೇ ಇರಲಿ, ಕಾರ್ಕಳವು 14–15ನೆಯ ಶತಮಾನದಿಂದೀಚೆಗೆ ಪ್ರಮುಖ ಕೇಂದ್ರವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಉಡುಪಿ ಜಿಲ್ಲೆಗೆ ಸೇರಿದ ಈ ಊರಿನಲ್ಲಿ ಇರುವ ಬೇಕಾದಷ್ಟು ಬಸದಿಗಳು ಇಲ್ಲಿದ್ದಂತಹ ಜೈನ ಧರ್ಮದ ಪ್ರಾಬಲ್ಯವನ್ನು ಎತ್ತಿ ತೋರಿಸುತ್ತವೆ. ಜೊತೆಗೆ ಇತರ ಧರ್ಮಗಳ ಬಗ್ಗೆ ಅವರಿಗಿದ್ದ ಸಹಿಷ್ಣುತೆಯ ದ್ಯೋತಕವಾಗಿ ಅನೇಕ ಶೈವ ದೇವಾಲಯಗಳು ಮತ್ತು ವಿಷ್ಣುವಿನ ಗುಡಿಗಳೂ ಇವೆ. ಇಲ್ಲಿಯ ಜನ ಶಾಂತಪ್ರಿಯರು, ಸ್ನೇಹ ಜೀವಿಗಳು. ತುಳು ಪ್ರಮುಖ ಭಾಷೆಯಾದರೂ ಕನ್ನಡ, ಕೊಂಕಣಿ ಮಾತನಾಡುವವರೂ ಇದ್ದಾರೆ.

ಇದನ್ನು ಆಳಿದ ಪ್ರಮುಖ ರಾಜಮನೆತನವೆಂದರೆ ಭೈರವ ಅರಸರದು. ವಿಜಯನಗರದ ಸಾಮಂತ ಅರಸರಾದ ಇವರು ಕಾರ್ಕಳದಲ್ಲಿ ನಿರ್ಮಿಸಿರುವ ಅನೇಕ ಜಿನ ದೇವಾಲಯಗಳು ಅಂದಿನ ಶಿಲ್ಪಕಲೆಗೆ ಹಿಡಿದ ಕೈಗನ್ನಡಿಯಂತಿವೆ. ಸೋದೆಯ ಮಠಾಧೀಶರಾದ ವಾದಿರಾಜರು ರೆಂಜಾಳದಲ್ಲಿದ್ದ ತಮ್ಮ ಅಜ್ಜಿಯವರ ಊರಿಗೆ ಭೇಟಿ ಕೊಟ್ಟಾಗ, ವಿಶಾಲ ಮನಸಿನ ದೊರೆಯು ಅವರನ್ನು ಭಿಕ್ಷೆಗೆ ಆಹ್ವಾನಿಸಿದನಂತೆ. ವಿಷ್ಣು ದೇವಾಲಯವಿಲ್ಲದ ಸ್ಥಳಕ್ಕೆ ಭೇಟಿ ನೀಡಲು ಯತಿಗಳು ನಿರಾಕರಿಸಿದಾಗ, ಉದಾರ ಮನಸಿನ ಭೈರವ ಅರಸನು ವಿಷ್ಣು ದೇವಾಲಯವನ್ನು ನಿರ್ಮಿಸಲು ಕೂಡಲೇ ಮುಂದಾಗುತ್ತಾನೆ. ಅವನ ಕನಸಿನ ಆದೇಶದಂತೆ ಸುತ್ತಮುತ್ತಲಿನ ಕೆರೆಗಳನ್ನು ಅರಸಿದಾಗ ನೆಲ್ಲಿಕಾರ್ ಕೆರೆಯಲ್ಲಿ ಸಿಕ್ಕ ಅನಂತಶಯನನ ಮತ್ತು ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣರ ವಿಗ್ರಹಗಳನ್ನೂ ತಂದು ವಿಶಾಲವಾದ ಗುಡಿ ಕಟ್ಟಿಸಿಕೊಡುತ್ತಾನೆ. (ನಾಲ್ಕು ಕೈಗಳಲ್ಲಿರುವ ಶಂಖ, ಚಕ್ರ, ಗದಾ, ಪದ್ಮಗಳ ಸ್ಥಾನವು ಈ ದೇವತೆಗಳನ್ನು ಗುರುತಿಸಲು ಸಹಾಯಕವಾಗುತ್ತವೆ.) ಮುಸ್ಲಿಮರ ದಾಳಿಯಿಂದ ರಕ್ಷಿಸಲು ಈ ವಿಗ್ರಹಗಳನ್ನು ನೀರಿನಲ್ಲಿರಿಸಿದ್ದು, ಭೈರವ ಅರಸನಿಂದ ಮುಕ್ತಿ ಪಡೆದು, ಪೂಜೆಗೊಳ್ಳಲಾರಂಭಿಸಿದುದು ಇತಿಹಾಸ. ಇವು ಸುಮಾರು ಸಾವಿರ ವರ್ಷಗಳಷ್ಟು ಹಳೆಯದು ಎಂಬುದು ವಿದ್ವಾಂಸರ ಅಭಿಪ್ರಾಯ.

ಕಾರ್ಕಳದ ಬಹುತೇಕ ದೇವಾಲಯ, ಜಿನಾಲಯಗಳೆಲ್ಲ 14–15ನೆಯ ಶತಮಾನದವು. ಇಲ್ಲಿರುವ ಮತ್ತೊಂದು ವೈಷ್ಣವ ಗುಡಿಯಾದ ವೆಂಕಟರಮಣನ ಗುಡಿಯ ವಿಶೇಷತೆಯೆಂದರೆ, ಇದರ ಸಂಪೂರ್ಣ ಆಡಳಿತವು ಗೌಡ ಸಾರಸ್ವತ ಬ್ರಾಹ್ಮಣರಿಗೆ ಸೇರಿದ್ದು. ಇಟಲ ಗುಡಿ ಎಂದು ಕರೆಸಿಕೊಳ್ಳುವ ಸೋಮನಾಥೇಶ್ವರನ ಗುಡಿಯು ಧರೆಗುಡ್ಡ ಎಂಬಲ್ಲಿದೆ. ಅನತಿ ದೂರದಲ್ಲಿರುವ ಜಂಗರಬೆಟ್ಟುವಿನ ಶಿವನು ಗಂಗಾಧರೇಶ್ವರ ಎಂದು ಕರೆಸಿಕೊಂಡರೂ ಅದು ಮೂರ್ತಿಯ ರೂಪದಲ್ಲಿರುವುದು ಕೌತುಕವೇ ಸರಿ. ಕಾರ್ಕಳದ ಸಮೀಪದಲ್ಲಿರುವ ಕಾಂತಾವರದಲ್ಲಿ ಕಾಂತೇಶ್ವರನ ಗುಡಿ ಇದೆ. ವಿಶಾಲವಾದ ಗುಡಿಯಲ್ಲಿ ಮರದ ಮೂರ್ತಿಗಳು, ಕಲ್ಲಿನ ಕಂಬಗಳು ಇರುವ ಈ ಗುಡಿಯ ವಿಶೇಷತೆ ಎಂದರೆ ನಿತ್ಯ, ಲಿಂಗದ ಬಣ್ಣವು ಮೂರು ಬಾರಿ ಬದಲಾಗುತ್ತದೆ. ಮತ್ತೊಂದು ವಿಶೇಷತೆಯೆಂದರೆ ಇಲ್ಲಿಯ ಅಮ್ಮನವರು ಅರ್ಧನಾರೀಶ್ವರನ ರೂಪದಲ್ಲಿರುವುದು. ಇಲ್ಲಿನ ಯಾವ ದೇವಾಲಯ, ಬಸದಿಗಳನ್ನು ನೋಡಿದರೂ ಅವುಗಳ ವಿಶಾಲತೆ ಥಟ್ಟನೆ ಕಣ್ಸೆಳೆಯುತ್ತವೆ. ಅವುಗಳ ಹೊರ ಗೋಡೆಗಳನ್ನು ಮುರಗಲ್ಲಿನಿಂದ ಮಾಡಿದ್ದರೆ, ತಳಪಾಯಕ್ಕೆ ಪಾದೆಕಲ್ಲನ್ನು ಬಳಸಿದ್ದಾರೆ. ಮಿಯ್ಯಾರುವಿನ ಮಹಾಲಿಂಗೇಶ್ವರ ಗುಡಿಯೂ ಸಹ ಗಮನ ಸೆಳೆಯುತ್ತದೆ.


1508ರಲ್ಲಿ ಭೈರವ ಅರಸ ಕಟ್ಟಿಸಿರುವ ಚತುರ್ಮುಖ ಬಸದಿಯು ನೋಡಲೇಬೇಕಾದ ಜಿನ ದೇವಾಲಯಗಳಲ್ಲಿ ಒಂದು. ವಿಶಾಲವಾದ ಕಲ್ಲುಬಂಡೆಯ ಮೇಲೆ ಕಟ್ಟಿಸಿರುವ ಇದರಲ್ಲಿ ಅರನಾಥ, ಮಲ್ಲಿನಾಥ ಮತ್ತು ಮುನಿಸೂವ್ರತನಾಥರ ವಿಗ್ರಹಗಳಿವೆ. ನಾಲ್ಕು ಭವ್ಯ ಬಾಗಿಲುಗಳಿದ್ದು, ಯಾವ ಬಾಗಿಲಿನಿಂದ ಬಂದರೂ ಗರ್ಭಗುಡಿಯಲ್ಲಿ ಈ ಮೂರು ತೀರ್ಥಂಕರರ ದರ್ಶನ ಆಗುವಂತೆ ಕಟ್ಟಿದ್ದಾರೆ. ಅಂದರೆ ಒಂದೇ ರೀತಿಯ 12 ಮೂರ್ತಿಗಳು ಇವೆ. ಇದರ ಸಮೀಪದಲ್ಲಿಯೇ ಇರು ವುದು ಗೊಮ್ಮಟಗಿರಿ. ಚಿಕ್ಕ ಗುಡ್ಡದ ಮೇಲೆ ನಿರ್ಮಿತವಾಗಿರುವ ಇದನ್ನು ಹತ್ತಲು ಮೆಟ್ಟಿಲುಗಳೂ ಇವೆ. ವಾಹನದಲ್ಲಿ ಸಾಗಲು ರಸ್ತೆಯೂ ಇದೆ. ವಿಶಾಲವಾದ ಬಯಲಿನಲ್ಲಿ ಎತ್ತರದ ಮಾನಸ್ತಂಭದ ಮೇಲೆ ಬ್ರಹ್ಮ ಯಕ್ಷರ ಮೂರ್ತಿಯನ್ನು ಕೆತ್ತಲಾಗಿದೆ. ಸುತ್ತಲೂ ಕಟ್ಟಿರುವ ಎತ್ತರವಲ್ಲದ ಗೋಡೆಯ ಬಳಿ ನಿಂತರೆ, ಕಾರ್ಕಳದ ವಿಹಂಗಮ ನೋಟ ಲಭ್ಯ. ಒಳಗೆ ಗಾಂಭೀರ್ಯವೇ ಮೂರ್ತಿವೆತ್ತಂತಿರುವ ಶಾಂತ ಗೊಮ್ಮಟ ನಿಂತಿದ್ದಾನೆ. ದೇಹದ ಮೇಲಿನ ಅಭಿಮಾನವನ್ನೂ ತೊರೆದು ದಿಗಂಬರನಾಗಿ ನಿಂತ ಗೊಮ್ಮಟನಿಗೆ ಪೊಡಮಡದ ಶಿರವು ವ್ಯರ್ಥ. ಚಚ್ಚೌಕಾಕಾರದ ಗೋಡೆಯ ನಡುವೆ 5 ಅಡಿಯ ಪೀಠದ ಮೇಲೆ ನಿಂತಿರುವ ಈ ಏಕಶಿಲೆಯ ಮೂರ್ತಿಯ ಎತ್ತರ 42 ಅಡಿಗಳು.

ದೊರೆಯು ಆನೆಗಳು ನೀರು ಕುಡಿಯಲೆಂದು ಕಟ್ಟಿಸಿದ ಕೆರೆಯೇ ಆನೆಕೆರೆ. ಇಲ್ಲೂ ಚತುರ್ಮುಖ ಬಸದಿ ಅಥವಾ ಕೆರೆ ಬಸದಿಯು ನಿರ್ಮಿತವಾಗಿದೆ. 1008 ಚಂದ್ರನಾಥ, ಶಾಂತಿನಾಥ, ವರ್ಧಮಾನ ಮತ್ತು ಆದಿನಾಥರ ಮೂರ್ತಿಯು ಅತ್ಯಂತ ರಮಣೀಯವಾದ ಪ್ರಕೃತಿಯ ಪರಿಸರದಲ್ಲಿದೆ. ಕಾರ್ಕಳದಲ್ಲಿ ನೋಡಲೇಬೇಕಾದ ಮತ್ತೊಂದು ಇತಿಹಾಸ ಪ್ರಸಿದ್ಧ ಸ್ಮಾರಕವೆಂದರೆ ಮಾನಸ್ತಂಭ. ಜೈನಧರ್ಮದ ಸಮವಸರಣದ ಪ್ರತೀಕವಾದ ಈ ಮಾನಸ್ತಂಭವು ಅಷ್ಟು ಎತ್ತರವಾಗಿರಲು(ಒಳಗಿನ ಜಿನಮೂರ್ತಿಯ ಹನ್ನೆರಡರಷ್ಟು ಎತ್ತರ) ಕಾರಣವೆಂದರೆ, ಜಿನಾಲಯವನ್ನು ಒಳಹೊಗುವ ಮೊದಲು, ಅದರ ಔನ್ನತ್ಯದ ಎದುರು ತಲೆಬಾಗಿ, ಅಹಂಕಾರವನ್ನು ತ್ಯಜಿಸಿ ಹೋಗಬೇಕೆನ್ನುವುದನ್ನು ನೆನಪಿಸಲು ಎಂಬುದು. ಎಂತಹ ಉದಾತ್ತ ಭಾವನೆ! ಮಾನ ಸ್ತಂಭದ ಸುತ್ತಲೂ ಮಾಡಿರುವ ಕೆತ್ತನೆಯು ಕಣ್ಣು ಸೆಳೆಯುವಂತಿದೆ. ಇದರ ಸುತ್ತಲೂ ಕಲ್ಲುಬಸದಿ ಶ್ರೀ ಅನಂತನಾಥಸ್ವಾಮಿ, ಶ್ರೀ ನೇಮಿ ನಾಥ ಮಂದಿರ, 1008 ಭಗವಾನ್ ಶ್ರೀ ಆದಿನಾಥ, ಚಂದ್ರನಾಥ, ಪಾರ್ಶ್ವನಾಥ, ಪದ್ಮಾದೇವಿ ಮುಂತಾದವರ ಬಸದಿಗಳಿವೆ. ಕಾರ್ಕಳದ ಸಮೀಪದಲ್ಲಿಯೇ ಇರುವ ಮೂಡಬಿದಿರೆಯಲ್ಲೂ ಸುಮಾರು 18 ಬಸದಿಗಳಿವೆ. ಅವುಗಳಲ್ಲಿ ಅತ್ಯಂತ ಪ್ರಸಿದ್ಧವಾದುದೆಂದರೆ ಸಾವಿರ ಕಂಬದ ಬಸದಿ, ತ್ರಿಭುವನತಿಲಕ ಚೂಡಾಮಣಿ ಬಸದಿ ಅಥವಾ ಹೊಸ ಬಸದಿ. ಹೆಸರೇ ಸೂಚಿಸುವಂತೆ ಅಸಂಖ್ಯಾತ ಕಂಬಗಳು, ಅವುಗಳ ಮೇಲಿನ ವಾದ್ಯ, ನೃತ್ಯ, ಸಮರ ಮುಂತಾದ ಶಿಲ್ಪಗಳು ಕಣ್ಸೆಳೆಯುತ್ತವೆ. ವಿಶಾಲವಾದ ಆವರಣದಲ್ಲಿ ಎತ್ತರ ಗೋಡೆಯ ನಡುವೆ ಇರುವ ಪ್ರಶಾಂತವಾದ ಈ ಬಸದಿಯು ಏಳು ಮಂಟಪಗಳನ್ನು ಒಳಗೊಂಡಿದೆ. 60 ಅಡಿ ಎತ್ತರದ ಮಾನಸ್ತಂಭವೂ ಇದೆ. ಮೇಲ್ಛಾವಣಿಯ ಮೇಲೆ ಅಷ್ಟಪಟ್ಟಿ ಸಹಿತ ತೀರ್ಥಂಕರರ ಬಿಂಬಗಳನ್ನು ಕೆತ್ತಲಾಗಿದೆ. ಒಟ್ಟಾರೆ, ಕನ್ನಡಿಗರೆಲ್ಲರೂ ಒಮ್ಮೆ ಭೇಟಿ ನೀಡಲೇಬೇಕಾದ ಸ್ಥಳ ಕಾರ್ಕಳ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ಪ್ರತ್ಯೇಕ ಪ್ರಕರಣ: ಹಾಸನ ಜಿಲ್ಲೆಯಲ್ಲಿ ನಾಲ್ವರು ಜಲಸಮಾಧಿ



ಅರಕಲಗೂಡು ತಾಲೂಕಿನ ಮಣಜೂರು ಕೆರೆಯಲ್ಲಿ ನೀರು ಪಾಲಾದ ಇಬ್ಬರಿಗೆ ಅಗ್ನಿಶಾಮಕ ದಳದವರು ಶೋಧ ನಡೆಸುತ್ತಿರುವುದು.

ಅರಕಲಗೂಡು, ಮಾ.22– ಹಾಸನ ಜಿಲ್ಲೆಯಲ್ಲಿ ಪ್ರತ್ಯೇಕ ಎರಡು ಪ್ರಕರಣಗಳಲ್ಲಿ ನಾಲ್ವರು ಜಲಸಮಾಧಿಯಾಗಿದ್ದಾರೆ. ತಾಲೂಕಿನ ಮಣಜೂರು ಕೆರೆಯಲ್ಲಿ ಶನಿವಾರ ಹಸುಗಳಿಗೆ ನೀರು ಕುಡಿಸಲು ಹೋದ ಸಂದರ್ಭ ಇಬ್ಬರು ಜಲಸಮಾಧಿಯಾಗಿದ್ದಾರೆ.

ಗ್ರಾಮದ ರವಿ (45), ಲಕ್ಷ್ಮಣ (55) ಮೃತರು. ಇಬ್ಬರೂ ಶನಿವಾರ ಕೆರೆಯಲ್ಲಿ ಹಸುಗಳಿಗೆ ನೀರು ಕುಡಿಸಲು ಮುಂದಾದಾಗ ರವಿ ನೀರಿನಲ್ಲಿ ಮುಳುಗಿದರು. ಅವರನ್ನು ರಕ್ಷಿಸಲು ಕೆರೆಗಿಳಿದ ಲಕ್ಷ್ಮಣ ಕೂಡಾ ನೀರು ಪಾಲಾಗಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಅರಕಲಗೂಡು ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ಕೆರೆಯಲ್ಲಿ ಕಾರ್ಯಾಚರಣೆ ನಡೆಸಿ ರವಿ ಅವರ ಮೃತದೇಹ ಹೊರತೆಗೆದಿದ್ದಾರೆ. ಲಕ್ಷ್ಮಣ ಶವಕ್ಕಾಗಿ ಹುಡುಕಾಟ ಮುಂದುವರಿದಿದೆ. ರವಿಗೆ ಪತ್ನಿ, ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಲಕ್ಷ್ಮಣ ಅವರಿಗೆ ಪತ್ನಿ, ಒಬ್ಬ ಪುತ್ರ, ಒಬ್ಬ ಪುತ್ರಿ ಇದ್ದಾರೆ. ಮೃತರ ಕುಟುಂಬದವರ ಆಕ್ರಂದನ ಮನಕಲಕುವಂತಿತ್ತು.

ಸಕಲೇಶಪುರ ವರದಿ: ಪಟ್ಟಣದ ಹೆನ್ನಲಿ ಗ್ರಾಮ ಸಮೀಪದ ಹೇಮಾವತಿ ನದಿಯಲ್ಲಿ ಈಜಲು ತೆರಳಿದ್ದ ಇಬ್ಬರು ನೀರು ಪಾಲಾಗಿದ್ದಾರೆ. ಚಿಕ್ಕಮಗಳೂರು ಜಿಲ್ಲೆ ಆಲ್ದೂರು ಹೋಬಳಿ ಬಾಳೆಹಳ್ಳ ಗ್ರಾಮದ ಭರತ್(34) ಹಾಗು ತಾಲೂಕಿನ ಕಾಟಿಹಳ್ಳಿ ಗ್ರಾಮದ ಪ್ರಕಾಶ್(29) ಮೃತಪಟ್ಟವರು.

ಪ್ರಕಾಶ್ ಮನೆಗೆ ಬಂದಿದ್ದ ಸಂಬಂಧಿಕರು ಶನಿವಾರ ಮಧ್ಯಾಹ್ನ ಆಟೋ ರಿಕ್ಷಾದಲ್ಲಿ ಹೇಮಾವತಿ ತೀರದಲ್ಲಿ ವಿಹಾರಕ್ಕಾಗಿ ತೆರಳಿದ್ದರು. ಹೆನ್ನಲಿ ಗ್ರಾಮದ ಎತ್ತಿನಹೊಳೆ ಸೇತುವೆ ಸಮೀಪ ಪ್ರಕಾಶ್ ನದಿಗೆ ಇಳಿದು ಈಜಾಡುತ್ತಿದ್ದ ವೇಳೆ ನೀರಿನ ಸೆಳೆತಕ್ಕೆ ಸಿಲುಕಿದರು. ಮುಳುಗುತ್ತಿದ್ದ ಅವರನ್ನು ರಕ್ಷಿಸಲು ತೆರಳಿದ ಭರತ್ ಅವರೂ ನೀರಿನ ಸುಳಿಗೆ ಸಿಲುಕಿ ಮುಳುಗಿದರು. ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹಗಳನ್ನು ಹೊರತೆಗೆದು ಕ್ರಾಫರ್ಡ್ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಿದರು. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹನಿಟ್ರ್ಯಾಪ್ ನಿರ್ದೇಶಕ ಡಿಸಿಎಂ ಡಿಕೆಶಿ

ಬಿಜೆಪಿ ಮುಖಂಡ ದೇವರಾಜೇಗೌಡ ಆರೋಪ

ಹಾಸನ, ಮಾ.22– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಹನಿಟ್ರ್ಯಾಪ್ ಮಾಡಿಸಿದ್ದಾರೆ. ಅವರೇ ಇದರ ನಿರ್ದೇಶಕ. ಅಧಿಕಾರದ ಆಸೆಗಾಗಿ ಹಾಗೂ ಅವರ ವಿರುದ್ಧ ಧ್ವನಿ ಎತ್ತಿದವರ ಸದ್ದಡಗಿಸಲು ಹೀಗೆ ಮಾಡಿದ್ದಾರೆ ಎಂದು ಬಿಜೆಪಿ ಮುಖಂಡ ದೇವರಾಜೇಗೌಡ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಬಳಿ ಹನಿಟ್ರ್ಯಾಪ್ ಮಾಡುವ ತಂಡವಿದೆ. ಹನಿಟ್ರ್ಯಾಪ್ ಮಾಡಿ ಅದನ್ನು ಒಂದೆಡೆ ಗುಪ್ತವಾಗಿ ಇಡಲಾಗುತ್ತಿದೆ. ಅದನ್ನು ಪರಿಶೀಲಿಸುವವರೂ ಇದ್ದಾರೆ ಎಂದರು. ಹನಿಟ್ರ್ಯಾಪ್‌ಗೆ ಸಂಬಂಧಿಸಿ ಕೆಲವು ಮಹತ್ವದ ದಾಖಲೆಗಳು ನಮ್ಮಲ್ಲಿವೆ. ಅವನ್ನು ತಲುಪಿಸಬೇಕಾದವರಿಗೆ ತಲುಪಿಸಿಯಾಗಿದೆ. ಕೂಡಲೇ ಡಿ.ಕೆ.ಶಿವಕುಮಾರ್ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಒಂದು ವರ್ಷದ ಹಿಂದೆಯೇ ನಾನು ಈ ಬಗ್ಗೆ ಹೇಳಿದ್ದೆ. ಹನಿಟ್ರ್ಯಾಪ್ ಗ್ಯಾಂಗ್‌ಗೆ ಡಿ.ಕೆ.ಶಿವಕುಮಾರ್ ಅವರೇ ನಾಯಕರು. ಇದೀಗ ಅವರ ಪಕ್ಷದ ಸಚಿವರಿಗೆ ಸತ್ಯ ಗೊತ್ತಾಗಿದೆ. ಮುಖ್ಯಮಂತ್ರಿಯಾಗುವುದನ್ನು ತಪ್ಪಿಸಲು ಯತ್ನಿಸಿದವರ ಹನಿಟ್ರ್ಯಾಪ್ ಮಾಡಿದ್ದಾರೆ. ಅಧಿಕಾರಕ್ಕಾಗಿ ಮುಖ್ಯಮಂತ್ರಿಯನ್ನೇ ಹನಿಟ್ರ್ಯಾಪ್ ಮಾಡುತ್ತಾರೆ ಎಂದು ಆಪಾದಿಸಿದರು.


ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಕ್ಕೆ ಪ್ರವೇಶಾವಕಾಶ

ಮೈಸೂರು, ಮಾ.22(ಎಂಟಿವೈ)– ನಂಜನಗೂಡು ಪಟ್ಟಣದಲ್ಲಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಕ್ಕೆ 2025–26ನೇ ಸಾಲಿನ ದಾಖಲಾತಿ ಪ್ರಕ್ರಿಯೆ ಆರಂಭವಾಗಿದ್ದು, ಬಡತನರೇಖೆಗಿಂತ ಕೆಳಗಿನ ಕುಟುಂಬದ ಹಾಗೂ ಪೋಷಕರಿಲ್ಲದ 6ರಿಂದ 8ನೇ ತರಗತಿ ವಿದ್ಯಾರ್ಥಿನಿಯರನ್ನು ವಸತಿಯುಕ್ತ ಶಾಲೆಗೆ ದಾಖಲಿಸುವಂತೆ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯದ ಮುಖ್ಯ ಶಿಕ್ಷಕಿ ಸಿ.ಎಸ್.ಕುಸುಮ ಮನವಿ ಮಾಡಿದ್ದಾರೆ.

ನಂಜನಗೂಡು ತಾಲೂಕಿನ ವಿವಿಧ ಗ್ರಾಮಗಳ ಬಡತನರೇಖೆಗಿಂತ ಕೆಳಗಿರುವ ಎಲ್ಲಾ ಸಮುದಾಯಗಳ ಮಕ್ಕಳು ಹಾಗೂ ತಂದೆ–ತಾಯಿ ಇಲ್ಲದ ಹಾಗೂ ಶಾಲೆ ಬಿಟ್ಟ ವಿದ್ಯಾರ್ಥಿನಿಯರಿಗೆ ಶಿಕ್ಷಣ ಕೊಡಿಸುವ ನಿಟ್ಟಿನಲ್ಲಿ ಸರ್ಕಾರ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ತೆರೆದಿದೆ. ಈ ಶಾಲೆಯಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತದೆ. ಶಾಲೆಗೆ ದಾಖಲಾಗುವ ಪ್ರತಿ ವಿದ್ಯಾರ್ಥಿನಿಯರಿಗೆ ಪ್ರತಿತಿಂಗಳು 100 ರೂ. ವಿದ್ಯಾರ್ಥಿ ವೇತನ, ಉಚಿತ ವೈದ್ಯಕೀಯ ಸೇವೆ, ಕಂಪ್ಯೂಟರ್ ಶಿಕ್ಷಣ, ಸ್ಪೋಕನ್ ಇಂಗ್ಲೀಷ್, ಕರಕುಶಲ ತರಬೇತಿ, ಹೊಲಿಗೆ ತರಬೇತಿ, ಯೋಗ, ಕರಾಟೆ, ನೃತ್ಯ, ಸಂಗೀತ, ಚಿತ್ರಕಲೆ, ಮೆಹಂದಿ ತರಬೇತಿ ಹಾಗೂ ಗೊಂಬೆ ಮತ್ತು, ಆಭರಣ ತಯಾರಿಕಾ ತರಬೇತಿ ನೀಡಲಾಗುತ್ತದೆ. ಊಟ, ವಸತಿ ಹಾಗೂ ಶಿಕ್ಷಣ ಉಚಿತವಾಗಿರುವುದರಿಂದ ಶಾಲೆಗೆ ವಿದ್ಯಾರ್ಥಿನಿಯರನ್ನು ದಾಖಲು ಮಾಡಬಹುದು. ಯಾವುದೇ ಪ್ರವೇಶ ಪರೀಕ್ಷೆ ಇಲ್ಲದೆಯೂ ಶಾಲೆಗೆ ದಾಖಲಾಗಬಹುದು ಎಂದು ಅವರು ತಿಳಿಸಿದ್ದಾರೆ.

ರಾಮಕೃಷ್ಣನಗರದಲ್ಲಿ ತೆರೆದ ಚರಂಡಿಗೆ ಒಳಚರಂಡಿ ನೀರು

ದುರ್ವಾಸನೆಯಿಂದ ತತ್ತರಿಸಿದ ನಿವಾಸಿಗಳು



ಮೈಸೂರಿನ ರಾಮಕೃಷ್ಣನಗರ ಐ ಮತ್ತು ಜೆ ಬ್ಲಾಕ್‌ನಲ್ಲಿ ಹಾದು ಹೋಗಿರುವ ಮಳೆ ನೀರು ಚರಂಡಿಯಲ್ಲಿ ಒಳಚರಂಡಿ ನೀರು ಹರಿಯುತ್ತಿರುವುದು.

ಮೈಸೂರು, ಮಾ.22(ಆರ್‌ಕೆ)–ಒಳಚರಂಡಿ ಮಲಿನ ನೀರು ಕೆರೆಗಳಿಗೆ ಸೇರಿ ಅಲ್ಲಿನ ವಾತಾವರಣ ಹಾಳಾಗಿ ಜಲಚರ, ಪಕ್ಷಿ ಸಂಕುಲ ನಾಶವಾಗುತ್ತಿರುವುದು ಒಂದೆಡೆಯಾದರೆ, ಜನವಸತಿ ಬಡಾವಣೆಗಳಲ್ಲೂ ಇದೇ ಪರಿಸ್ಥಿತಿ ಎದುರಾಗಿದೆ.

ಮೈಸೂರಿನ ಪ್ರತಿಷ್ಠಿತ ರಾಮಕೃಷ್ಣನಗರ 'ಐ' ಮತ್ತು 'ಜೆ' ಬ್ಲಾಕ್‌ನಲ್ಲಿ ಕಳೆದ ನಾಲ್ಕು ತಿಂಗಳಿಂದ ಮಳೆ ನೀರಿನ ತೆರೆದ ಚರಂಡಿಯಲ್ಲಿ ಒಳಚರಂಡಿ ಮಲಿನ ನೀರು ಹರಿಯುತ್ತಿರುವುದರಿಂದ ಸುತ್ತಮುತ್ತಲ ವಾತಾವರಣ ದುರ್ವಾಸನೆ ಬೀರುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯರ ನಿವಾಸದ ಸಮೀಪವೇ ಮನೆಗಳ ಒಳಚರಂಡಿ ನೀರು ಮಳೆ ನೀರು ಚರಂಡಿಯಲ್ಲಿ ಹರಿಯುತ್ತಿದ್ದು, ಸುತ್ತಲಿನ ನಿವಾಸಿಗಳು ತತ್ತರಿಸಿದ್ದಾರೆ.

ಮಳೆ ನೀರು ಹಾದು ಹೋಗಲು ನಿರ್ಮಿಸಿರುವ ಚರಂಡಿಗೆ ಮಲಿನ ನೀರು ಬಿಡುತ್ತಿದ್ದರೂ, ಮೈಸೂರು ಮಹಾನಗರ ಪಾಲಿಕೆ ಆರೋಗ್ಯ ಶಾಖೆ ಅಧಿಕಾರಿಗಳಾಗಲೀ, ಪರಿಸರ ಇಂಜಿನಿಯರ್‌ಗಳಾಗಲೀ ಗಮನಹರಿಸಿ ಎಲ್ಲಿಂದ ಒಳಚರಂಡಿ ನೀರು ಬರುತ್ತಿದೆ ಎಂಬುದನ್ನು ಪತ್ತೆ ಮಾಡಿ ಸೂಕ್ತ ಕ್ರಮ ವಹಿಸದಿರುವ ಬಗ್ಗೆ ಯಾತನೆ ಅನುಭವಿಸುತ್ತಿರುವ ಬಡಾವಣೆ ನಿವಾಸಿಗಳು ಪಾಲಿಕೆಗೆ ಹಿಡಿಶಾಪ ಹಾಕುತ್ತಿದ್ದಾರೆ.


ಪ್ರತೀ ದಿನ ಸ್ವಚ್ಛತಾ ವಿಭಾಗದ ಅಧಿಕಾರಿಗಳು ಅಲ್ಲಿ ಓಡಾಡುತ್ತಿದ್ದರೂ ಚರಂಡಿಯಲ್ಲಿ ಮಲಿನ ನೀರು ಹರಿಯುತ್ತಿರುವುದು, ಗಿಡ–ಗಂಟಿ ಬೆಳೆದು ಕೆಲವೆಡೆ ಚರಂಡಿಯೇ ಮುಚ್ಚಿ ಹೋಗಿದ್ದರೂ ಕ್ರಮ ವಹಿಸಿಲ್ಲ ಎಂದು ನಿವಾಸಿಗಳು ದೂರಿದ್ದಾರೆ.

ಐಪಿಎಲ್ ಟಿ20 ಕ್ರಿಕೆಟ್ 18ನೇ ಆವೃತ್ತಿ ಆರಂಭ

ರಾಯಲ್ ಚಾಲೆಂಜರ್ಸ್ ಬೆಂಗಳೂರು ಶುಭಾರಂಭ

ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಉದ್ಘಾಟನಾ ಪಂದ್ಯದಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 7 ವಿಕೆಟ್ ಜಯ





ಐಪಿಎಲ್ ಉದ್ಘಾಟನಾ ಸಮಾರಂಭದಲ್ಲಿ ಭರಪೂರ ಮನರಂಜನಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು



ಕೊಲ್ಕತ್ತಾ, ಮಾ.22– ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್)ಟಿ20 ಕ್ರಿಕೆಟ್ ಪಂದ್ಯಾವಳಿ 18ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಭರ್ಜರಿ ಜಯದೊಂದಿಗೆರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಶುಭಾರಂಭ ಮಾಡಿದೆ.

ಇಲ್ಲಿನ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೊಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಅಮೋಘ ಬ್ಯಾಟಿಂಗ್ ಪ್ರದರ್ಶನ ನೀಡಿದ ಆರ್‌ಸಿಬಿ, ಇನ್ನೂ 22 ಎಸೆತಗಳು ಬಾಕಿ ಇರುವಂತೆಯೇ 7 ವಿಕೆಟ್‌ಗಳ ಜಯಭೇರಿ ಬಾರಿಸಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 174 ರನ್ ಕಲೆಹಾಕಿತು. ಕ್ವಿಂಟನ್ ಡಿ ಕಾಕ್ ಕೇವಲ 4 ರನ್ ಗಳಿಸಿ ಜೋಶ್ ಹ್ಯಾಜಲ್‌ವುಡ್‌ಗೆ ವಿಕೆಟ್ ಒಪ್ಪಿಸಿ ನಿರಾಶೆ ಮೂಡಿಸಿದರೆ, ನಂತರ ನಾಯಕ ಅಜಿಂಕ್ಯ ರಹಾನೆ ಜೊತೆಯಾದ ಸುನಿಲ್ ನರೈನ್ 103 ರನ್‌ಗಳ ಜೊತೆಯಾಟವಾಡಿದರು.

ನಾಯಕ ಅಜಿಂಕ್ಯ ರಹಾನೆ 31 ಎಸೆತಗಳಲ್ಲಿ 4 ಸಿಕ್ಸ್, 6 ಬೌಂಡರಿ ಸಹಿತ 56 ರನ್ ಗಳಿಸಿದರು. ಸುನಿಲ್ ನರೈನ್ 26 ಎಸೆತಗಳಲ್ಲಿ 3 ಸಿಕ್ಸ್, 5 ಬೌಂಡರಿ ಸಹಿತ 44 ರನ್ ಬಾರಿಸಿದರು. ಈ ವೇಳೆ ಸ್ಪಿನ್ ದಾಳಿ ನಡೆಸಿದ ಆಲ್‌ರೌಂಡರ್ ಕೃನಾಲ್ ಪಾಂಡ್ಯ, ರಹಾನೆ ವಿಕೆಟ್ ಪಡೆಯುವ ಮೂಲಕ ಜೊತೆಯಾಟಕ್ಕೆ ಬ್ರೇಕ್ ಹಾಕಿದರು. ನಂತರ ಬಂದ ಕೆಕೆಆರ್ ಬ್ಯಾಟ್ಸ್‌ಮನ್‌ಗಳು ಬಂದಷ್ಟೇ ವೇಗವಾಗಿ ವಿಕೆಟ್ ಒಪ್ಪಿಸಿ ಪೆವಿಲಿಯನ್ ಸೇರಿಕೊಂಡರೆ, ಯುವ ಬ್ಯಾಟ್ಸ್‌ಮನ್ ಅಂಗ್‌ಕ್ರಿಶ್ ರಘುವಂಶಿ 30 ರನ್‌ಗಳಿಸಿ, ತಂಡದ ಮೊತ್ತ 150ರ ಗಡಿ ದಾಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಆರ್‌ಸಿಬಿ ಪರ ಆಲ್‌ರೌಂಡರ್ ಕೃನಾಲ್ ಪಾಂಡ್ಯ 3 ವಿಕೆಟ್ ಪಡೆದು ಮಿಂಚಿದರೆ, ಜೋಶ್ ಹ್ಯಾಜಲ್ವುಡ್ 2 ವಿಕೆಟ್ ಪಡೆದರು.

ಆರ್‌ಸಿಬಿ ಭರ್ಜರಿ ಬ್ಯಾಟಿಂಗ್: 175 ರನ್‌ಗಳ ಗುರಿ ಬೆನ್ನತ್ತಿದ ಆರ್‌ಸಿಬಿ ಇನ್ನೂ 22 ಎಸೆತಗಳು ಬಾಕಿ ಇರುವಂತೆಯೇ ಜಯ ದಾಖಲಿಸಿತು. ಕಿಂಗ್ ಕೊಹ್ಲಿ ಜೊತೆಗೆ ಇನ್ನಿಂಗ್ಸ್ ಆರಂಭಿಸಿದ ಫಿಲಿಪ್ ಸಾಲ್ಟ್ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿದರು. ಫಿಲಿಪ್ ಸಾಲ್ಟ್ 31 ಎಸೆತಗಳಲ್ಲಿ 2 ಸಿಕ್ಸ್, 9 ಬೌಂಡರಿ ಸಹಿತ 56 ರನ್ ಗಳಿಸಿದರೆ, ವಿರಾಟ್ ಕೊಹ್ಲಿ 36 ಎಸೆತಗಳಲ್ಲಿ 3 ಸಿಕ್ಸ್, 4 ಬೌಂಡರಿ ಸಹಿತ ಅಜೇಯ 59 ರನ್ ಚಚ್ಚಿದರು. ದೇವದತ್ ಪಡಿಕ್ಕಲ್ 10 ಗಳಿಸಿ ನಿರ್ಗಮಿಸುತ್ತಿದ್ದಂತೆ ಕೊಹ್ಲಿ ಜೊತೆಯಾದ ನಾಯಕ ರಜತ್ ಪಾಟೀದಾರ್ (34 ರನ್), ನಂತರ ಲಿಯಾಮ್ ಲಿವಿಂಗ್‌ಸ್ಟನ್(ಅಜೇಯ 15 ರನ್) ಅಬ್ಬರದ ಆಟವಾಡಿ ತಂಡಕ್ಕೆ ಜಯ ತಂದರು. ಕೆಕೆಆರ್ ಪರ ಸುನಿಲ್ ನರೈನ್, ವರುಣ್ ಚಕ್ರವರ್ತಿ ಹಾಗೂ ವೈಭವ್ ಆರೋರಾ ತಲಾ ಒಂದೊಂದು ವಿಕೆಟ್ ಪಡೆದರು. ಆರ್‌ಸಿಬಿ ಆಲ್‌ರೌಂಡರ್ ಕೃನಾಲ್ ಪಾಂಡ್ಯ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯಗಳು

ಸನ್‌ರೈಸರ್ಸ್ ಹೈದರಾಬಾದ್ V/s ರಾಜಸ್ಥಾನ್ ರಾಯಲ್ಸ್,
ಮಧ್ಯಾಹ್ನ 3.30ಕ್ಕೆ. ಸ್ಥಳ; ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣ, ಹೈದರಾಬಾದ್

ಚೆನ್ನೈ ಸೂಪರ್ ಕಿಂಗ್ಸ್ V/s ಮುಂಬೈ ಇಂಡಿಯನ್ಸ್,
ಸಂಜೆ 7.30ಕ್ಕೆ, ಸ್ಥಳ; ಎಂಎ ಚಿದಂಬರಂ ಕ್ರೀಡಾಂಗಣ, ಚೆನ್ನೈ

ವರ್ಣರಂಜಿತ ಚಾಲನೆ...

18ನೇ ಆವೃತ್ತಿ ಐಪಿಎಲ್ ಪಂದ್ಯಾವಳಿಗೆ ವರ್ಣರಂಜಿತ ಚಾಲನೆ ದೊರೆಯಿತು. ಕೊಲ್ಕತ್ತಾ ಈಡನ್ ಗಾರ್ಡನ್ಸ್ ಮೈದಾನದಲ್ಲಿ ಆಕರ್ಷಕ ಬೆಳಕಿನ ಚಿತ್ತಾರದ ನಡುವೆ ಕಲಾವಿದರು ನೃತ್ಯ ವೈಭವದ ಮೂಲಕ ಮೆರುಗು ನೀಡಿದರು. ಖ್ಯಾತ ಗಾಯಕಿ ಶ್ರೇಯಾ ಘೋಷಾಲ್, ತಮ್ಮ ಹಾಡಿನ ಮೂಲಕ ರಂಜಿಸಿದರು. ಕೆಕೆಆರ್ ತಂಡದ ಮಾಲೀಕ ಹಾಗೂ ಬಾಲಿವುಡ್ ಖ್ಯಾತ ನಟ ಶಾರುಕ್ ಖಾನ್ ಜೊತೆ ಹೆಜ್ಜೆ ಹಾಕಿದ ಆರ್‌ಸಿಬಿ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಅಭಿಮಾನಿಗಳನ್ನು ಪುಳಕಿತಗೊಳಿಸಿದರು.

ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ಎಸ್.ರಘುನಾಥ್ ಬೆಂಬಲಿಸಲು ಮನವಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣಾ ಪ್ರಚಾರದ 'ಬಂಧು ಮಿಲನ' ಕಾರ್ಯಕ್ರಮವನ್ನು ಅಧ್ಯಕ್ಷೀಯ ಅಭ್ಯರ್ಥಿ ಎಸ್.ರಘುನಾಥ್ ಉದ್ಘಾಟಿಸಿದರು.

ಮೈಸೂರು, ಮಾ.22(ಎಂಕೆ)– ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಎಸ್.ರಘುನಾಥ್ ಅವರನ್ನು ಬೆಂಬಲಿಸುವಂತೆ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಮನವಿ ಮಾಡಿದರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ರಾಮಮಂದಿರ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣಾ ಪ್ರಚಾರ ಹಿನ್ನೆಲೆ ಆಯೋಜಿಸಿದ್ದ ಬಂಧು ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬ್ರಾಹ್ಮಣ ಸಮುದಾಯವನ್ನು ಒಗ್ಗೂಡಿಸುವಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹತ್ವದ ಕಾರ್ಯ ನಿರ್ವಹಿಸುತ್ತಿದೆ. ಸಮ್ಮೇಳನಗಳನ್ನು ಆಯೋಜಿಸುವ ಮೂಲಕ ಬ್ರಾಹ್ಮಣ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಹಾಗೂ ಸರ್ಕಾರದ ಕಾರ್ಯಕ್ರಮಗಳನ್ನು ಅರ್ಹ ಫಲಾನುಭವಿಗಳಿಗೆ ದೊರಕಿಸಿಕೊಡುವಲ್ಲಿಯೂ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಕಳೆದ ಚುನಾವಣೆಯಲ್ಲಿ ಕೆಲವೇ ಕೆಲವು ಮತಗಳ ಅಂತರದಿಂದ ಪರಾಭವಗೊಂಡಿದ್ದ ಎಸ್.ರಘುನಾಥ್ ಅವರನ್ನು ಮುಂದಿನ ಅಧ್ಯಕ್ಷರನ್ನಾಗಿ ನೋಡಬೇಕು ಎನ್ನುವುದು ಎಲ್ಲಾ ವಿಪ್ರ ಬಾಂಧವರ ಆಶಯವಾಗಿದೆ. ಬೆಂಗಳೂರು ಹೊರತುಪಡಿಸಿದರೆ, ಮೈಸೂರಿನಲ್ಲಿ ಅತೀ ಹೆಚ್ಚು ಮತದಾರರಿದ್ದು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯಚಟುವಟಿಕೆಗಳು ಪರಿಣಾಮಕಾರಿಯಾಗಿ ಮುಂದುವರೆಯಬೇಕಾದರೆ ಎಸ್.ರಘುನಾಥ್ ಅವರನ್ನು ಬೆಂಬಲಿಸಬೇಕಿದೆ. ಹಾಗಾಗಿ ಅವರನ್ನು ಗೆಲ್ಲಿಸಲು ಎಲ್ಲರೂ ಸಹಕಾರ ನೀಡಬೇಕು ಎಂದು ಕೋರಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷೀಯ ಅಭ್ಯರ್ಥಿ ಎಸ್.ರಘುನಾಥ್ ಮಾತನಾಡಿ, ಕಳೆದ ಚುನಾವಣೆ ಸಂದರ್ಭದಲ್ಲಿ ರಘು ಮಾತನಾಡಲ್ಲ ಎಂಬ ಮಾತುಗಳು ಕೇಳಿಬಂದಿದ್ದವು. ನನಗೆ ಮಾತನಾಡುವ ಕಲೆ ಇಲ್ಲದಿದ್ದರೂ ಸಮುದಾಯದ ವಸ್ತುಸ್ಥಿತಿಯನ್ನು ಸರಿಯಾಗಿ ತಿಳಿಸಬಲ್ಲೆ. ಪ್ರಸಕ್ತ ಸತ್ಯ ವಿಚಾರಗಳನ್ನು ಹೇಳುತ್ತೇನೆ ಹೊರತು ಇಲ್ಲಸಲ್ಲದನ್ನು ಸೇರಿಸಿ, ಭಾಷಣ ಮಾಡುವವನಲ್ಲ ಎಂದರು.

ಚುನಾವಣೆ ಪ್ರಚಾರ ಆರಂಭವಾದಾಗಿನಿಂದ ವೈಯಕ್ತಿಕವಾಗಿ ನನ್ನನ್ನು ಅಟ್ಯಾಕ್ ಮಾಡಬೇಕು ಎನ್ನುವ ಚರ್ಚೆಗಳು ಪ್ರತಿಸ್ಪರ್ಧಿಗಳ ವಾಟ್ಸ್‌ಅಪ್ ಗ್ರೂಪ್‌ಗಳಲ್ಲಿ ನಡೆಯುತ್ತಿವೆ. ಆರೋಪಗಳನ್ನು ಸೃಷ್ಟಿಸಿ, ನಕಾರಾತ್ಮಕವಾಗಿ ಬಿಂಬಿಸುವ ಪ್ರಯತ್ನಗಳು ನಡೆಯುತ್ತಿವೆ. ಆದ್ದರಿಂದ ತೆರೆಮರೆಯಲ್ಲಿ ಸಮುದಾಯದ ವಿರುದ್ಧ ಕೆಲಸ ಮಾಡುವವರನ್ನು ಅಧಿಕಾರದಿಂದ ಕೆಳಗಿಳಿಸಬೇಕಿದೆ. ಬ್ರಾಹ್ಮಣ ಸಮುದಾಯದ ಅಭಿವೃದ್ಧಿಗಾಗಿ ಕೆಲಸ ಮಾಡಲು ಒಂದು ಅವಕಾಶ ನೀಡುವಂತೆ ಕೋರಿದರು.

ಇದೇ ವೇಳೆ ನಿವೃತ್ತ ನೇತ್ರ ತಜ್ಞರಾದ ಡಾ.ಹೆಚ್.ಆರ್.ಮಣಿಕರ್ಣಿಕಾ ಅವರನ್ನು ಅಭಿನಂದಿಸಲಾಯಿತು. ಹೊಯ್ಸಳ ಕರ್ನಾಟಕ ಸಂಘ ಕಟ್ಟಡ ಸಮಿತಿ ಮಾಜಿ ಅಧ್ಯಕ್ಷ ಎನ್.ಲಕ್ಷ್ಮಿನರಸಿಂಹ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಾಜಿ ಉಪಾಧ್ಯಕ್ಷ ಎಂ.ನರಸಿಂಹನ್, ನಿಕಟಪೂರ್ವ ಉಪಾಧ್ಯಕ್ಷ ಆರ್.ಲಕ್ಷ್ಮಿಕಾಂತ್, ವಿಪ್ರ ಮಹಿಳಾ ಸಂಗಮ ಅಧ್ಯಕ್ಷರಾದ ಕೆ.ಎನ್.ಲಕ್ಷ್ಮಿದೇವಿ, ರಾಜ್ಯ ಸಮಿತಿ ಸದಸ್ಯ ಶಂಕರ ನಾರಾಯಣ, ಕಲ್ಕೆರೆ ನಾಗರಾಜು, ಬಿಜೆಪಿ ಮುಖಂಡರಾದ ರಾಕೇಶ್ ಭಟ್, ಶ್ರೀನಿವಾಸ್ ಪ್ರಸಾದ್, ರಾಮಾನುಜ ಸಹಕಾರ ಸಂಘದ ನಿರ್ದೇಶಕ ಟಿ.ಎಸ್. ಅರುಣ್, ಬೆಮೆಲ್ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷ ಕೃಷ್ಣ ಹೆಗಡೆ, ಎ. ರಾಘವೇಂದ್ರ, ಶ್ರೀಕಾಂತ್ ಕಶ್ಯಪ್, ಸೂರಜ್, ಶೈಲೇಂದ್ರ, ಗಣೇಶ್ ಪ್ರಸಾದ್ ಮತ್ತಿತರರಿದ್ದರು.

ಇಂದು ಸಂಸ್ಕೃತ ಪತ್ರಿಕೋದ್ಯಮ ಕಾರ್ಯಾಗಾರ

ಮೈಸೂರು, ಮಾ.22(ಆರ್‌ಕೆ)– ಮಾ.23ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಶ್ರೀಮನ್ಮಹಾರಾಜ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಸಂಸ್ಕೃತ ಪತ್ರಿಕೋದ್ಯಮ ಕುರಿತು ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ.

ಸುಧರ್ಮಾ ಸಂಸ್ಕೃತ ದಿನಪತ್ರಿಕೆ ಹಾಗೂ ಸಂಸ್ಕೃತ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಕಾರ್ಯಾಗಾರವನ್ನು ಕನ್ನಡಪ್ರಭ ನಿವೃತ್ತ ಉಪಸಂಪಾದಕಿ ಹೆಚ್.ಎಲ್.ಸೀತಾದೇವಿ ಉದ್ಘಾಟಿಸುವರು. ಸುಧರ್ಮಾ ಸಂಸ್ಕೃತ ಪತ್ರಿಕೆ ಪ್ರಧಾನ ಸಂಪಾದಕ ವಿದ್ವಾನ್ ಪ್ರೊ.ಹೆಚ್.ವಿ.ನಾಗರಾಜರಾವ್ ಅವರು ಅಧ್ಯಕ್ಷತೆ ವಹಿಸುವ ಕಾರ್ಯಾಗಾರದಲ್ಲಿ ಪತ್ರಿಕೆಯ ಗೌರವ ಸಂಪಾದಕ ವಿದ್ವಾನ್ ಟಿ.ವಿ.ಸತ್ಯನಾರಾಯಣ, ಜನಮಿತ್ರ ಪತ್ರಿಕೆಯ ಡಾ.ಕೂಡ್ಲಿ ಗುರುರಾಜ್, ಸಂಸ್ಕೃತ ಮಹಾವಿದ್ಯಾಲಯದ ಪ್ರಾಚಾರ್ಯ ವಿದ್ವಾನ್ ಡಾ.ಪಿ.ಸತ್ಯನಾರಾಯಣ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಸಂಸ್ಕೃತ ಪತ್ರಿಕೋದ್ಯಮ, ವಾರ್ತಾ ಸಂಗ್ರಹ, ವೃತ್ತಾಂತ ಲೇಖನ, ಅನುವಾದ ಲೇಖನ ಹಾಗೂ ಅಂಕಣ ಕುರಿತಂತೆ ತಜ್ಞರು ಕಾರ್ಯಾಗಾರದಲ್ಲಿ ವಿಷಯ ಮಂಡಿಸುವರು. ಮಧ್ಯಾಹ್ನ 3.45 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಸುಧರ್ಮಾ ಪತ್ರಿಕೆ ಸಂಪಾದಕಿ, ಪದ್ಮಶ್ರೀ ಪುರಸ್ಕೃತ ಜಯಲಕ್ಷ್ಮಿ ಸಂಪತ್‌ಕುಮಾರಿ ತಿಳಿಸಿದ್ದಾರೆ.

ರಾಜ್ಯದಲ್ಲಿ 400 ಮಂದಿಯ ಹನಿಟ್ರ್ಯಾಪ್ ಆಗಿದೆ!

ಸಚಿವ ಸತೀಶ್ ಜಾರಕಿಹೊಳಿ



ಬೆಳಗಾವಿ, ಮಾ.22– ಯಾವಾಗಲೂ ಘರ್ಜಿಸುವ ಹುಲಿಗಳೇ ಟಾರ್ಗೆಟ್ ಆಗುತ್ತವೆ. ಹನಿಟ್ರ್ಯಾಪ್ ವಿಷಯದಲ್ಲೂ ಘರ್ಜಿಸುವ ಹುಲಿಗಳನ್ನು ಟಾರ್ಗೆಟ್ ಮಾಡಿ, ಸಿಡಿಗಳನ್ನು ತೋರಿಸಿ ಹೆದರಿಸಲಾಗುತ್ತಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಶನಿವಾರ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಹನಿಟ್ರ್ಯಾಪ್ ಪ್ರಕರಣದ ಬಗ್ಗೆ ಸಚಿವ ರಾಜಣ್ಣ ಅವರೊಂದಿಗೆ ಚರ್ಚಿಸಿದ್ದೇನೆ. ಅವರು ಕಾನೂನು ಸಲಹೆ ಮತ್ತು ತಜ್ಞರ ಅಭಿಪ್ರಾಯ ಪಡೆದು ಪೊಲೀಸರಿಗೆ ದೂರು ನೀಡಬೇಕು ಎಂದರು. ಹನಿಟ್ರ್ಯಾಪ್ ವಿಚಾರದಲ್ಲಿ ದೂರು ನೀಡಿದ ನಂತರವೇ ತನಿಖೆ ನಡೆಯಲಿದೆ. ಈ ಪ್ರಕರಣವನ್ನು ಸಿಬಿಐಗೆ ವಹಿಸುವ ಅಗತ್ಯ ಇಲ್ಲ. ರಾಜ್ಯ ಪೊಲೀಸರೇ ಪ್ರಕರಣದ ತನಿಖೆ ನಡೆಸಿ, ಆರೋಪಿಗಳನ್ನು ಬಂಧಿಸಲು ಸಮರ್ಥರಾಗಿದ್ದಾರೆ ಎಂದು ಅವರು ತಿಳಿಸಿದರು. ಹನಿಟ್ರ್ಯಾಪ್ ವಿಚಾರದಲ್ಲಿ ಯಾರು ಸಂಚು ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ರಾಜಕೀಯಕ್ಕಾಗಿ ಮಾತ್ರವಲ್ಲ. ಬ್ಲ್ಯಾಕ್‌ಮೇಲ್ ಮತ್ತು ವ್ಯಾಪಾರ ವಿಷಯವಾಗಿಯೂ ಹನಿಟ್ರ್ಯಾಪ್ ಮಾಡುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಸತೀಶ್ ಜಾರಕಿಹೊಳಿ ಉತ್ತರಿಸಿದರು.

ಈ ಹನಿಟ್ರ್ಯಾಪ್ ಪ್ರಕರಣದ ಹಿಂದೆ ಯಾರಿದ್ದಾರೆ ಎಂದು ಗೊತ್ತಾಗಬೇಕು. ಯಾವ ಕಾರಣಕ್ಕೆ ಈ ಹನಿಟ್ರ್ಯಾಪ್ ನಡೆದಿದೆ ಎಂಬುದು ತನಿಖೆಯಿಂದ ತಿಳಿಯಬೇಕು. ಈ ಪ್ರಕರಣವನ್ನು ಯಾವ ರೀತಿ ತನಿಖೆ ನಡೆಸಬೇಕು ಎಂಬುದನ್ನು ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ನಿರ್ಧರಿಸುತ್ತಾರೆ ಎಂದರು.

ಇದಕ್ಕೂ ಮುನ್ನ ರಾಜ್ಯದಲ್ಲಿ ಕೇವಲ 40 ನಾಯಕರು ಅಲ್ಲ, ಕನಿಷ್ಠ 400 ಜನರನ್ನು ಹನಿಟ್ರ್ಯಾಪ್‌ಗೆ ಸಿಲುಕಿಸಲಾಗಿದೆ. ಬರೀ ರಾಜ್ಯದಿಂದ ಮಾತ್ರವಲ್ಲ, ದೆಹಲಿಯ ಅನೇಕ ನಾಯಕರು ಮತ್ತು ಅಧಿಕಾರಿಗಳನ್ನು ಕೂಡ ಹನಿಟ್ರ್ಯಾಪ್ ಮಾಡಲಾಗಿದೆ ಎಂದು ಲೋಕೋಪಯೋಗಿ ಸಚಿವರು ಹೇಳಿದ್ದರು.

ಬೆಂಗಳೂರಲ್ಲಿ ಕಾಲೇಜು ಕಟ್ಟಡದಿಂದ ಹಾರಿ 21 ವರ್ಷದ ವಿದ್ಯಾರ್ಥಿನಿ ಸಾವು

ಬೆಂಗಳೂರು, ಮಾ.22– ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ಮಧ್ಯಾಹ್ನ 21 ವರ್ಷದ ಬಿಸಿಎ ವಿದ್ಯಾರ್ಥಿನಿ ಖಾಸಗಿ ಎಂಜಿನಿಯರಿಂಗ್ ಕಾಲೇಜು ಕಟ್ಟಡದ ನಾಲ್ಕನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಮೃತಳನ್ನು ಕೇರಳದ ಕೋಝಿಕ್ಕೋಡ್ ಮೂಲದ ಲಕ್ಷ್ಮಿ ಮಿತ್ರ ಎಂದು ಗುರುತಿಸಲಾಗಿದೆ. ಖಾಸಗಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆರನೇ ಸೆಮಿಸ್ಟರ್ ಬಿಸಿಎ (ವಿಮಾನಯಾನ) ವಿದ್ಯಾರ್ಥಿನಿಯಾಗಿದ್ದಳು. ಮಧ್ಯಾಹ್ನ 1.30 ರ ಸುಮಾರಿಗೆ ಲಕ್ಷ್ಮಿ ಕಾಲೇಜಿನ ನಾಲ್ಕನೇ ಮಹಡಿಯಿಂದ ಹಾರಿ ಈ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಹೇಳಲಾಗಿದೆ. ಕಾಲೇಜು ಸಿಬ್ಬಂದಿ ಆಕೆಯನ್ನು ಹತ್ತಿರದ ಆಸ್ಪತ್ರೆಗೆ ಸಾಗಿಸಿದರು, ಆದರೆ ವೈದ್ಯರು ಆಕೆ ಮೃತಪಟ್ಟಿದ್ದಾಳೆ ಎಂದು ಘೋಷಿಸಿದರು. ಯಾವುದೇ ಆತ್ಮಹತ್ಯೆ ಪತ್ರ ಪತ್ತೆಯಾಗಿಲ್ಲ, ಘಟನೆಗೆ ಕಾರಣ ಇನ್ನೂ ತಿಳಿದುಬಂದಿಲ್ಲ. ಈ ಸಂಬಂಧ ಪೊಲೀಸರು ಇನ್ನೂ ದೂರು ದಾಖಲಿಸಿಲ್ಲ, ಸಂತ್ರಸ್ತೆಯ ಪೋಷಕರ ಆಗಮನಕ್ಕಾಗಿ ಪೊಲೀಸರು ಕಾಯುತ್ತಿದ್ದಾರೆ.

ಸಾಹಿತ್ಯ ಸಿಂಚನ–ಗದ್ಯ ಕೃತಿ, ರಂಗು ರಂಗಿನ ಪದಗಳು–ಮಕ್ಕಳ ಕವನ ಸಂಕಲನ ಬಿಡುಗಡೆ

ಟಿವಿ, ಮೊಬೈಲ್‌ನಿಂದ ನೈತಿಕ ಮೌಲ್ಯಗಳು ಕುಸಿತ



ಮೈಸೂರಿನ ನಮನ ಕಲಾಮಂಟಪದಲ್ಲಿ ಶನಿವಾರ ನಡೆದ ಮೈಸೂರು ಸಾಹಿತ್ಯ ದಾಸೋಹದ 113ನೇ ಕಾರ್ಯಕ್ರಮದಲ್ಲಿ ವಾಣಿ ಸುಬ್ಬಯ್ಯ ಅವರ ಸಾಹಿತ್ಯ ಸಿಂಚನ–ಗದ್ಯ ಕೃತಿ ಹಾಗೂ ರಂಗರಂಗಿನ ಪದಗಳು–ಮಕ್ಕಳ ಕವನ ಸಂಕಲನವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆಗೊಳಿಸಿದರು.

ಮೈಸೂರು, ಮಾ.22(ಜಿಎ)–ಟಿವಿಯ ಜೊತೆಗೆ ಮೊಬೈಲ್ ಬಳಕೆ ಹೆಚ್ಚಾದ ನಂತರ ನೈತಿಕ ಮೌಲ್ಯಗಳು ಕುಸಿಯುತ್ತಿವೆ. ಮಾನವೀಯ ಮೌಲ್ಯಗಳು ಕಡಿಮೆಯಾಗುತ್ತಿವೆ ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ನಡೆದ ಮೈಸೂರು ಸಾಹಿತ್ಯ ದಾಸೋಹದ 113ನೇ ಕಾರ್ಯಕ್ರಮದಲ್ಲಿ ವಾಣಿ ಸುಬ್ಬಯ್ಯ ಅವರ ಸಾಹಿತ್ಯ ಸಿಂಚನ–ಗದ್ಯ ಕೃತಿ ಹಾಗೂ ರಂಗರಂಗಿನ ಪದಗಳು–ಮಕ್ಕಳ ಕವನ ಸಂಕಲನ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಪರಸ್ಪರ ಸಂಬಂಧಗಳೇ ಇಲ್ಲ ಎನ್ನುವಂತೆ ಮನೆಯಲ್ಲಿ ಇರುವವರೇ ಮೊಬೈಲ್‌ನಲ್ಲಿ ಮಾತನಾಡುವ ಪರಿಸ್ಥಿತಿ ಇದೆ. ಹೀಗಾಗಿ ಸದಾ ಮಾನಸಿಕ ನೆಮ್ಮದಿ ನೀಡುವ ಹಾಗೂ ಜ್ಞಾನಾರ್ಜನೆಗೂ ಕಾರಣವಾಗುವ ನೈತಿಕ ಹಾಗೂ ಮಾನವೀಯ ಮೌಲ್ಯಗಳುಳ್ಳ ಸಾಹಿತ್ಯ ಓದಬೇಕು ಎಂದರು.

ವಾಣಿ ಸುಬ್ಬಯ್ಯ ಅವರು ಶಿಕ್ಷಣ ಕ್ಷೇತ್ರದಲ್ಲಿ ಮೂರು ದಶಕಗಳ ಸೇವೆ ಸಲ್ಲಿಸಿದ್ದು, ಅದರ ಆಧಾರದ ಮೇಲೆ ಸಾಹಿತ್ಯ ಸಿಂಚನ ಕೃತಿ ರಚಿಸಿದ್ದಾರೆ. ಇಲ್ಲಿ ಆಧ್ಯಾತ್ಮಿಕ, ಧಾರ್ಮಿಕ, ಶೈಕ್ಷಣಿಕ, ನಾಟಕ, ಪ್ರಬಂಧ, ವ್ಯಕ್ತಿಚಿತ್ರ, ನೀತಿ ಕತೆಗಳು, ಪ್ರವಾಸ ಕಥನ–ಹೀಗೆ ಎಲ್ಲವೂ ಮೇಳೈಸಿವೆ. ಒಂದು ರೀತಿಯಲ್ಲಿ ಸಮೃದ್ಧ ಓದಿಗೆ ಬೇಕಾದ ಎಲ್ಲಾ ವಿಷಯಗಳು ಇಲ್ಲಿ ಒಳಗೊಂಡಿದ್ದು, ಮಕ್ಕಳ ಕವನಗಳಲ್ಲಿ ಹಬ್ಬ, ಸಂತೆ, ಜಾತ್ರೆ, ಪ್ರಾಣಿ, ಪಕ್ಷಿ, ಪರಿಸರ, ಯೋಧ, ಅನ್ನದಾತ, ಕನ್ನಡ ನಾಡು–ನುಡಿಯ ವಿಚಾರಗಳನ್ನು ಸಚಿತ್ರವಾಗಿ ಕಟ್ಟಿಕೊಟ್ಟಿದ್ದಾರೆ. ಸ್ವಾಮಿ ವಿವೇಕಾನಂದ, ಬಸವಣ್ಣ, ಅಕ್ಕ ಮಹಾದೇವಿ, ಕಿತ್ತೂರು ರಾಣಿ ಚೆನ್ನಮ್ಮ, ಸಾಲುಮರದ ತಿಮ್ಮಕ್ಕ, ತುಳಸಿಗೌಡ, ಪುಟ್ಟೀರಮ್ಮ ಮೊದಲಾದವರ ವ್ಯಕ್ತಿಚಿತ್ರ ಕುರಿತ ಕವನಗಳಿವೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಕೋಶಾಧ್ಯಕ್ಷ ಜಿ.ಪ್ರಕಾಶ್, ಚುಕ್ಕಿ ಚಿತ್ರ ಕಲಾವಿದ ಮೋಹನ್ ವೇರ್ಣೇಕರ್, ಪ್ರೊ.ಆರ್.ಎ. ಕುಮಾರ್, ಹರೀಶ್, ರಾಜಗೋಪಾಲ್‌ಚಾರಿ, ಬಿ.ಕೆ.ಮೀನಾಕ್ಷಿ, ಎನ್.ವಿ. ರಮೇಶ್, ಉಷಾ ರಮೇಶ್ ಎಂ, ಮುತ್ತುಸ್ವಾಮಿ, ಲೇಖಕ ಎ.ಆರ್.ಶ್ರೀಧರ್, ಸವಿಗನ್ನಡ ಸಂಪಾದಕ ರಂಗನಾಥ್ ಮೈಸೂರು, ಸುಮಾ ರಂಗನಾಥ್, ರಾಜೇಶ್ವರಿ ಶಿವರಾಂ, ಆಶಾ ಅರಸ್, ಮೈಸೂರು ಸಾಹಿತ್ಯ ದಾಸೋಹದ ಸಂಸ್ಥಾಪಕ ಎಂ.ಆರ್.ಆನಂದ್, ಬಿ.ಪಿ.ಅಶ್ವತ್ಥನಾರಾಯಣ ಉಪಸ್ಥಿತರಿದ್ದರು.

ರೈಲಿಗೆ ತಲೆ ಕೊಟ್ಟು ಯುವತಿ ಆತ್ಮಹತ್ಯೆ

ಮಂಡ್ಯ, ಮಾ.22– ರೈಲಿಗೆ ತಲೆಕೊಟ್ಟು ಯುವತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಬಂದೀಗೌಡ ಬಡಾವಣೆಯ ರೈಲ್ವೆ ಹಳಿ ಬಳಿ ಸಂಭವಿಸಿದೆ.

ಮೀಸಲು ಸಶಸ್ತ್ರ ಪಡೆಯ ಅನ್ಸರ್ ಪಾಷಾ ಎಂಬುವವರ ಮಗಳಾದ ಸುಹಾನಾ (19) ಆತ್ಮಹತ್ಯೆಗೆ ಶರಣಾದ ಯುವತಿಯಾಗಿದ್ದು, ಸುಹಾನಾ ಮೈಸೂರಿನ ಖಾಸಗಿ ಕಾಲೇಜಿನಲ್ಲಿ ಬಿಎ ವ್ಯಾಸಂಗ ಮಾಡಿದ್ದಳು ಎಂದು ತಿಳಿದು ಬಂದಿದೆ.

ನಿನ್ನೆ ರಾತ್ರಿ ಮನೆಯಿಂದ ತನ್ನ ಸ್ಕೂಟರ್‌ನಲ್ಲಿ ಬಂದು, ಸ್ಕೂಟರ್ ನಿಲ್ಲಿಸಿ ರೈಲು ಹಳಿ ಬಳಿ ಹೋಗುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಚಾಮುಂಡಿ ಎಕ್ಸ್‌ಪ್ರೆಸ್ ರೈಲಿಗೆ ಸಿಲುಕಿ ಸುಹಾನಾ ಆತ್ಮಹತ್ಯೆಗೆ ಶರಣಾಗಿರುವ ಬಗ್ಗೆ ಮಾಹಿತಿ ಸಿಕ್ಕಿದೆ. ಕಳೆದ ತಿಂಗಳು ಇದೇ ರೈಲಿಗೆ ಸಿಲುಕಿ ಮಂಡ್ಯ ತಾಲೂಕಿನ ಹೆಬ್ಬಕವಾಡಿ ಗ್ರಾಮದ ವಿಜಯಲಕ್ಷ್ಮಿ ಎಂಬ ಯುವತಿ ಆತ್ಮಹತ್ಯೆಗೆ ಶರಣಾಗಿದ್ದಳು.

ಸುಹಾನಾ ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಮಂಡ್ಯ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಅನಧಿಕೃತ ಫ್ಲೆಕ್ಸ್ ಅಳವಡಿಸಿದರೆ ದಂಡ



ಮಂಡ್ಯ, ಮಾ.22– ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಫ್ಲೆಕ್ಸ್ ಮತ್ತು ಪ್ಲಾಸ್ಟಿಕ್‌ನ ಹಾವಳಿ ಹೆಚ್ಚಾಗಿರುವುದರಿಂದ ಇದಕ್ಕೆ ಕಡಿವಾಣ ಹಾಕಲು ನಿರ್ಧಾರಕೈಗೊಳ್ಳಲಾಗಿದೆ. ಏಪ್ರಿಲ್ ಮೊದಲ ವಾರದಿಂದಲೇ ದಂಡ ಅಥವಾ ಶಿಕ್ಷೆ ವಿಧಿಸಲು ತೀರ್ಮಾನಿಸಲಾಗಿದೆ ಎಂದು ನಗರಸಭಾಧ್ಯಕ್ಷ ಎಂ.ವಿ. ಪ್ರಕಾಶ್ (ನಾಗೇಶ್) ಎಚ್ಚರಿಕೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯ ನಗರ ವ್ಯಾಪ್ತಿಯಲ್ಲಿ ಅವೈಜ್ಞಾನಿಕವಾಗಿ ಫ್ಲೆಕ್‌ಗಳನ್ನು ಅಳವಡಿಸಿ ಸಾರ್ವಜನಿಕರಿಗೆ ಕಿರಿಕಿರಿ ಉಂಟುಮಾಡುತ್ತಿರುವುದು ಕಂಡುಬಂದಿದೆ. ಎಲ್ಲೆಂದರಲ್ಲಿ ಫ್ಲೆಕ್ ಅಳವಡಿಸಿದಲ್ಲಿ ದಂಡ ಗ್ಯಾರಂಟಿ ಎಂದು ಎಚ್ಚರಿಸಿದರು.

ಅನುಮತಿ ಪಡೆಯದೆ ಫ್ಲೆಕ್ ಅಳವಡಿಸಬಾರದು ಹಾಗೂ ಸಕ್ಕರೆ ವೃತ್ತ, ಜೆ.ಸಿ.ವೃತ್ತ, ಹೊಸಹಳ್ಳಿ ವೃತ್ತಗಳಲ್ಲಿ ಹೆಚ್ಚು ವಾಹನ ಮತ್ತು ಜನದಟ್ಟಣೆಯಿಂದ ಕೂಡಿರುವ ಪ್ರದೇಶವಾಗಿರುವ ಕಾರಣ ಇಲ್ಲಿ ಫ್ಲೆಕ್‌ಗಳನ್ನು ಅಳವಡಿಕೆಗೆ ನಿಷೇದ ವಿಧಿಸಲಾಗಿದೆ ಈ ಪ್ರದೇಶಗಳಲ್ಲಿ ಫ್ಲೆಕ್ ಅಳವಡಿಸಿದಲ್ಲಿ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದರು.

ಮಂಡ್ಯದಲ್ಲಿ ಅತಿ ಹೆಚ್ಚು ಕ್ಯಾನ್ಸರ್ ರೋಗಿಗಳು ಇದ್ದಾರೆಂಬ ಅಂಕಿ ಅಂಶದಿಂದಾಗಿ ಆತಂಕ ಉಂಟಾಗಿದೆ ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ಕವರ್‌ಗಳನ್ನು ಯಾರೂ ಬಳಸಬಾರದು. ಒಂದು ವೇಳೆ ಪ್ಲಾಸ್ಟಿಕ್ ಕವರ್‌ಗಳನ್ನು ತೆಗೆದುಕೊಂಡು ಹೋಗುವ ಸಾರ್ವಜನಿಕರಿಗೇ ಮೊದಲು ದಂಡ ವಿಧಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ನಾನು ಈಗಾಗಲೇ ಹತ್ತು ರಾಜ್ಯಗಳಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ. ಎಲ್ಲೂ ಪ್ಲಾಸ್ಟಿಕ್ ಕವರ್‌ಗಳು ಇರುವುದಿಲ್ಲ. ಆದರೆ ನಮ್ಮ ರಾಜ್ಯದಲ್ಲೇ ಅತಿ ಹೆಚ್ಚು ಪ್ಲಾಸ್ಟಿಕ್ ಬಳಕೆಯಾಗುತ್ತಿದೆ. ಸಾರ್ವಜನಿಕರೂ ಈ ಬಗ್ಗೆ ಎಚ್ಚರ ವಹಿಸುವುದು ಅಗತ್ಯ ಕೇವಲ ಅಧಿಕಾರಿಗಳಿಂದಲೇ ಎಲ್ಲವನ್ನೂ ಮಾಡಲಾಗದು ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಹೋಟೆಲ್, ಬೀದಿಬದಿ ವ್ಯಾಪಾರಿಗಳ ಮೇಲೆ ದಿಢೀರ್ ದಾಳಿ ನಡೆಸಲಾಗುವುದು ಪ್ಲಾಸ್ಟಿಕ್ ಕವರ್‌ಗಳು ಕಂಡುಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮಂಡ್ಯದಲ್ಲಿ ಕರ್ನಾಟಕ ಬಂದ್‌ಗೆ ನೀರಸ ಪ್ರತಿಕ್ರಿಯೆ

ಕೆಲವೇ ಗಂಟೆಗಳಿಗೆ ಮೀಸಲಾದ ಬಂದ್, ನಗರದಾದ್ಯಂತ ಹೋರಾಟಗಾರರ ರ್‍ಯಾಲಿ

ಮಂಡ್ಯ, ಮಾ.22– ಬೆಳಗಾವಿಯಲ್ಲಿ ಕನ್ನಡಿಗರ ಮೇಲೆ ಮರಾಠಿ ಪುಂಡರ ಹಲ್ಲೆ ಖಂಡಿಸಿ ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಮಂಡ್ಯದಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.



ಬಂದ್ ವೇಳೆ ಮಂಡ್ಯದಲ್ಲಿ ಜನಜೀವನ ಎಂದಿನಂತೆ ಸಾಮಾನ್ಯವಾಗಿತ್ತು.

ಕನ್ನಡ ಸೇನೆ, ಜಯಕರ್ನಾಟಕ ಸಂಘಟನೆ, ರಾಜ್ಯ ರೈತ ಸಂಘ ಸೇರಿದಂತೆ ಹತ್ತಾರು ಸಂಘಟನೆಗಳು ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದವು. ಶನಿವಾರ ಬೆಳಿಗ್ಗೆ ಎಂಟು ಗಂಟೆಗೆ ಮಂಡ್ಯ ನಗರದ ಜೆ.ಸಿ. ವೃತ್ತದಲ್ಲಿ ಕನ್ನಡ ಸೇನೆ ಜಿಲ್ಲಾಧ್ಯಕ್ಷ ಮಂಜುನಾಥ್, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ರೈತ ನಾಯಕಿ ಸುನಂದಾ ಜಯರಾಂ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಮತ್ತು ರಸ್ತೆ ತಡೆ ನಡೆಸಲಾಯಿತು. ಈ ವೇಳೆ ಮರಾಠಿ ಪುಂಡರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಲಾಯಿತು.

ಬಳಿಕ ಹತ್ತು ಗಂಟೆ ನಂತರ ಮತ್ತೆ ಹೋರಾಟ ಆರಂಭಿಸಿ, ಕೆಲ ಹೊತ್ತು ಪ್ರತಿಭಟಿಸಿ ನಗರದಾದ್ಯಂತ ರ್‍ಯಾಲಿ ನಡೆಸಲಾಯಿತು. ರ್‍ಯಾಲಿ ವೇಳೆ ತೆಗೆದಿದ್ದ ಅಂಗಡಿ–ಮುಗ್ಗಟ್ಟನ್ನು ಮುಚ್ಚಿಸಿದರೆ ರ್‍ಯಾಲಿ ಮುಕ್ತಾಯವಾದ 11.30ರ ಬಳಿಕ ಎಂದಿನಂತೆ ವ್ಯಾಪಾರ ವಹಿವಾಟು ಆರಂಭವಾದವು.

ಪ್ರತಿಭಟನೆ ವೇಳೆ ಮಾತನಾಡಿದ ವಿಧಾನ ಪರಿಷತ್ತಿನ ಮಾಜಿ ಸದಸ್ಯ ಕೆಟಿ.ಶ್ರೀಕಂಠೇಗೌಡ, ಮರಾಠಿಗರ ಪುಂಡಾಟಿಕೆ, ಡಿಸಿಎಂ ಡಿ.ಕೆ. ಶಿವಕುಮಾರ್ ಮಂಡ್ಯದವರನ್ನು ಛತ್ರಿಗಳು ಎಂದು ಹೇಳಿರುವ ಹೇಳಿಕೆ ಖಂಡಿಸಿ ಹಾಗೂ ಕನ್ನಡಿಗರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬಂದ್‌ಗೆ ಕರೆ ನೀಡಿದ್ದೇವೆ. ಕನ್ನಡಿಗರ ಹೋರಾಟಕ್ಕೆ ವರ್ತಕರು, ಆಟೋಚಾಲಕರು, ಸೇರಿ ಹಲವರಿಂದ ಬೆಂಬಲ ನೀಡಿದ್ದಾರೆ ಎಂದರು.

ಪ್ರತಿಭಟನೆ ವೇಳೆ ಕೆಎಸ್‌ಆರ್‌ಟಿಸಿ ಬಸ್ ಸಂಚಾರಕ್ಕೆ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ನಿಮಗಾಗಿ ಹೋರಾಟ ಮಾಡುತ್ತಿದ್ದರೆ, ನೀವು ಬಸ್ ಸಂಚರಿಸುತ್ತೀರಾ ಎಂದು ಆಕ್ರೋಶ ವ್ಯಕ್ತಪಡಿಸಿ, ಬಸ್ ತಡೆದರು. ಕೆಲವು ಕಡೆ ಬಸ್ ಡ್ರೈವರ್‌ಗಳು ಹಾಗೂ ನಿರ್ವಾಹಕರು ಪ್ರತಿಭಟನೆಗೆ ಸಾಥ್ ನೀಡಿದರು.

ಬೆಳ್ಳಂಬೆಳಿಗ್ಗೆ ಕೆಲ ಅಂಗಡಿಗಳು ಬಂದ್ ಆಗಿದ್ದರೆ 11 ಗಂಟೆ ವೇಳೆಗೆ ಎಲ್ಲಾ ಅಂಗಡಿಗಳು ತೆರೆದಿದ್ದವು. ಬಸ್ ಸಂಚಾರ ಸಹ ನಿಧಾನವಾಗಿ ಆರಂಭವಾದವು. ವಾಹನ ಸಂಚಾರ, ಆಟೋ ಸಂಚಾರ ಎಂದಿನಂತೆ ಇತ್ತು. ಚಿತ್ರಮಂದಿರಗಳಲ್ಲಿ ಬೆಳಗಿನ ಆಟ ರದ್ದಾಗಿತ್ತು ಬೆಳ್ಳಂಬೆಳಿಗ್ಗೆ ಬಸ್‌ಗಳಲಿಲ್ಲದೇ ಪ್ರಯಾಣಿಕರು ಪರದಾಡಿದ ಸಂಗತಿ ಹೊರ ತುಪಡಿಸಿ ಬಂದ್ ಶಾಂತಿಯುತವಾಗಿ ಮುಕ್ತಾಯವಾಯಿತು.

ಬಂದ್ ಬಗ್ಗೆ ಮಾತನಾಡಿದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಕನ್ನಡ ಸೇನೆ, ಸೇರಿ ರೈತ ಪರ ಸಂಘಟನೆ ಪ್ರತಿಭಟನೆ ಭಾಗಿಯಾಗಿದ್ದಾರೆ. ಪ್ರತಿಭಟನೆ ಮಾಡಿ ನಂತರ ಬೈಕ್ ರ್‍ಯಾಲಿ ಮಾಡಿದ್ದಾರೆ. ಸ್ವಯಂ ಪ್ರೇರಿತವಾಗಿ ಅಂಗಡಿಗಳು ಬಂದ್ ಮಾಡಿ, ನಂತರ ತೆರೆದಿದ್ದಾರೆ. ಯಾವುದೇ ಕಾರಣಕ್ಕೂ ಬಲವಂತವಾಗಿ ಬಂದ್ ಮಾಡದಂತೆ ಸೂಚನೆ ಕೊಟ್ಟಿದ್ದೇವೆ. ಪೊಲೀಸರು ಕೂಡ ಗಸ್ತು ವಾಹನಗಳಲ್ಲಿ ಸಂಚಾರ ನಡೆಸುತ್ತಿದ್ದೇವೆ ಎಂದರು.

ಈವರೆಗೆ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ. ಅಧಿಕಾರಿಗಳು ಮುಖ್ಯ ಸ್ಥಳಗಳಲ್ಲಿ ಬಂದೋಬಸ್ತ್ ಮಾಡಿದ್ದಾರೆ. ಮುಖ್ಯ ಸ್ಥಳಗಳಲ್ಲಿ ಸೂಕ್ತ ಬಂದ್ ಬಸ್ತ್ ಮಾಡಲಾಗಿದೆ. ಕೆಲವು ಶಾಲೆಗಳು ನಡೆದವು. ಸರ್ಕಾರಿ ಕಚೇರಿಗಳು ಎಂದಿನಂತೆ ಕಾರ್ಯ ನಿರ್ವನಿರ್ವಹಿಸಿದವು. ಡಿವೈಎಸ್ಪಿ ನೇತೃತ್ವದಲ್ಲಿ 6 ಇನ್ಸ್‌ಪೆಕ್ಟರ್, 10 ಪಿಎಸ್ಸಿ 150 ಸಿಬ್ಬಂದಿ ನಿಯೋಜನೆ ಮಾಡಿದ್ದೇವೆ ಜಿಲ್ಲೆಯಲ್ಲಿ ಯಾವುದೇ ರೀತಿಯ ಬಂದ್ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮೇಘಾಲಯ ವಿದ್ಯಾರ್ಥಿಗಳು ಆಸ್ಪತ್ರೆಯಿಂದ ಡಿಸ್ಚಾರ್ಜ್



ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಮೇಘಾಲಯದ ವಿದ್ಯಾರ್ಥಿಗಳು.

ಮಂಡ್ಯ, ಮಾ.22– ಹೋಳಿ ಹಬ್ಬದ ಊಟ ಸೇವಿಸಿ ಅಸ್ವಸ್ಥರಾಗಿ ಮಂಡ್ಯ ನಗರದ ಮಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದ ಮಳವಳ್ಳಿ ತಾಲೂಕಿನ ಗೋಕುಲ ವಿದ್ಯಾಶಾಲೆಯ ಮೇಘಾಲಯ ಮೂಲದ 22 ವಿದ್ಯಾರ್ಥಿಗಳು ಹಾಗೂ ಮಳವಳ್ಳಿಯ ಏಳು ಮಂದಿ ವಿದ್ಯಾರ್ಥಿಗಳು ಶನಿವಾರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದರು.

ಕಳೆದ ಮಾ.14ರಂದು ಹೋಳಿ ಹಬ್ಬದ ಆಯೋಕರು ಮಿಕ್ಕಿದ್ದ ಊಟವನ್ನು ಗೋಕುಲ ಶಾಲೆಯ ವಿದ್ಯಾರ್ಥಿಗಳಿಗೆ ಕೊಟ್ಟಿದ್ದ ಹಿನ್ನೆಲೆಯಲ್ಲಿ ಊಟ ಸೇವಿಸಿದ್ದ ವಿದ್ಯಾರ್ಥಿಗಳು ಸೇರಿದಂತೆ 120 ಮಂದಿ ಅಸ್ವಸ್ಥರಾಗಿದ್ದರು. ಈ ಪೈಕಿ ಮೇಘಾಲಯದ ಇಬ್ಬರು ವಿದ್ಯಾರ್ಥಿಗಳು ಸಾವನ್ನಪ್ಪಿದ್ದರು. ಇದೀಗ ಗುಣಮುಖರಾದ ಒಟ್ಟು 29 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಖುದ್ದು ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಡಿಡಿಪಿಐ ಶಿವರಾಮೇಗೌಡ ಮಕ್ಕಳು ಡಿಸ್ಚಾರ್ಜ್ ಆಗುವ ವೇಳೆ ಉಪಸ್ಥಿತರಿದ್ದರು. ಗೋಕುಲ ವಿದ್ಯಾಶಾಲೆ ಬಂದ್ ಆಗಿರುವುದರಿಂದ ಡಿಸಿ ನೇತೃತ್ವದಲ್ಲಿ ಮೇಘಾಲಯ ವಿದ್ಯಾರ್ಥಿಗಳನ್ನು ಮಂಡ್ಯ ನಗರದ ಬಾಲಕರ ಬಾಲಮಂದಿರದಲ್ಲಿ ವಾಸ್ತವ್ಯ ಇರಿಸಲು ವ್ಯವಸ್ಥೆ ಮಾಡಲಾಗಿದೆ.

ಚುನಾವಣೆಯಲ್ಲಿ ಪುರುಷೋತ್ತಮ್–ಚಕ್ರಪಾಣಿ ತಂಡಕ್ಕೆ ಪ್ರಚಂಡ ಜಯ



ವಿಜೇತ ತಂಡವನ್ನು ಮುಖಂಡರು, ಅಭಿಮಾನಿಗಳು ಅಭಿನಂದಿಸಿದರು.

ಕೆ.ಆರ್.ಪೇಟೆ,ಮಾ.22– ಪಟ್ಟಣದ ಹೇಮಾವತಿ ಬಡಾವಣೆಯಲ್ಲಿರುವ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್–ಬಿಜೆಪಿ ಮೈತ್ರಿ ಕೂಟದ ಎಲ್ಲಾ 12 ಅಭ್ಯರ್ಥಿಗಳು ಸಂಘದ ಹಾಲಿ ಅಧ್ಯಕ್ಷರಾದ ಕೆ.ಪುರುಷೋತ್ತಮ್ ಮತ್ತು ಪುರಸಭೆಯ ಮಾಜಿ ಅಧ್ಯಕ್ಷ ಕೆ.ಟಿ.ಚಕ್ರ ಪಾಣಿ ನೇತೃತ್ವದಲ್ಲಿ ಭರ್ಜರಿ ಸಾಧಿಸಿದ್ದಾರೆ.

ಕಾಂಗ್ರೆಸ್–ಬಿಜೆಪಿ ಮೈತ್ರಿ ಕೂಟದ ಅಭ್ಯರ್ಥಿಗಳಾದ ಕೆ.ಟಿ.ಚಕ್ರಪಾಣಿ, ಕೆ.ಪುರುಷೋತ್ತಮ್, ಥಿಯೇಟರ್ ಚಂದ್ರಣ್ಣ, ರಾಜಾನಾಯಕ್, ಕೆ.ಎನ್.ಕಾಳೇಗೌಡ, ನಂದೀಶ್, ಹಿರೀಕಳಲೆ ಬಲರಾಂ, ತೇಗನಹಳ್ಳಿ ಟಿ.ಜೆ.ನಾಗೇಶ್, ಕೋಮಲಮಂಜೇಗೌಡ, ಗಂಗನಹಳ್ಳಿ ಗಂಗಾದೇವಿ, ಹಿರೀಕಳಲೆ ಹೆಚ್.ಜೆ.ಸೋಮಶೇಖರ್. ಯೋಗ ನಿಂಗಯ್ಯ ಅವರು ಭರ್ಜರಿ ಗೆಲುವು ಸಾಧಿಸಿದ್ದಾರೆ. ಚುನಾವಣಾಧಿಕಾರಿಯಾಗಿ ತಾಲ್ಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಹೆಚ್.ಬಿ.ಭರತ್‌ಕುಮಾರ್, ಸಹ ಚುನಾವಣಾಧಿಕಾರಿಯಾಗಿ ಸಂಘದ ಸಿಇಓ ಬಿ.ಎನ್. ಕಾಂತರಾಜು ಕಾರ್ಯನಿರ್ವಹಿಸಿದರು.

ಮಂಡ್ಯ ಜಿಲ್ಲೆಯ ಜನರನ್ನು ಛತ್ರಿಗಳು ಎಂದು ಅಪಮಾನ

ಡಿಸಿಎಂ ಡಿ.ಕೆ.ಶಿವಕುಮಾರ್ ಕ್ಷಮೆ ಕೇಳಲು ನಾಳೆವರೆಗೆ ಗಡುವು

ಮಂಡ್ಯ, ಮಾ.22– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಂಡ್ಯ ಜಿಲ್ಲೆಯ ಜನರನ್ನು ಛತ್ರಿಗಳು ಎಂದು ಸಂಬೋಧಿಸಿದ್ದು, ಜಿಲ್ಲೆಯ ಜನತೆಗೆ ನೋವುಂಟು ಮಾಡಿದೆ. ಡಿ.ಕೆ.ಶಿವಕುಮಾರ್ ಅವರು ಮಾರ್ಚ್ 24ರ ಸೋಮವಾರ ಸಂಜೆಯೊಳಗೆ ಜಿಲ್ಲೆಯ ಜನತೆಯ ಕ್ಷಮೆ ಕೇಳಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಏಕೀಕರಣ ಸಮಿತಿಯ ಸದಸ್ಯ, ಇಂಡುವಾಳು ಚಂದ್ರಶೇಖರ್ ಒತ್ತಾಯಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸ್ವಾತಂತ್ರ್ಯ ಪೂರ್ವದಿಂದಲೂ ಜಿಲ್ಲೆಯ ಜನರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದರ ಜೊತೆಗೆ ಪ್ರಮುಖ ನೀರಾವರಿ ಚಳುವಳಿಗಳಲ್ಲಿ ಹಾಗೆಯೇ ರಾಷ್ಟ್ರ ರಾಜಕಾರಣದಲ್ಲೂ ಭಾಗವಹಿಸಿ ಹೆಸರು ಮಾಡಿದ್ದಾರೆ. ಜಿಲ್ಲೆಯ ಜನತೆಯ ಬಗ್ಗೆ ಬೇರೆ ಜಿಲ್ಲೆಯ ಜನಕ್ಕೂ ಗೌರವ ಇದೆ. ಇಂತಹ ಜಿಲ್ಲೆಯ ಜನಗಳನ್ನು ಛತ್ರಿಗಳು ಎಂದಿರುವುದನ್ನು ತೀವ್ರವಾಗಿ ಖಂಡಿಸುತ್ತೇವೆ ಎಂದರು.

ಜಿಲ್ಲೆಯನ್ನು ಪ್ರತಿನಿಧಿಸುವ ಕಾಂಗ್ರೆಸ್ ಎಂಎಲ್ಎ ಮತ್ತು ಎಂಎಲ್‌ಸಿಗಳು ಈ ಬಗ್ಗೆ ಒಂದು ಮಾತನ್ನು ಆಡದಿರುವುದು ವಿಪರ್ಯಾಸ. ಶಿವಕುಮಾರ ಅವರಿಗೆ ಈ ಬಗ್ಗೆ ತಿಳಿಸಿ ಸ್ಪಷ್ಟನೆ ನೀಡುವ ಕೆಲಸವನ್ನು ಸಹ ಮಾಡಿಲ್ಲ. ಕಾಂಗ್ರೆಸ್ ಅಧ್ಯಕ್ಷರಾಗಿರುವ ಡಿ.ಕೆ.ಶಿವಕುಮಾರ್ ಅವರದೇ ಛತ್ರಿ ಬುದ್ಧಿ ಎಂಬುದು ಸಾಬೀತಾಗಿದೆ. ಸೋಮವಾರದೊಳಗೆ ಕ್ಷಮೆ ಕೇಳದಿದ್ದರೆ ಜಿಲ್ಲೆಗೆ ಬಂದರೆ ಕಪ್ಪು ಬಾವುಟ ಪ್ರದರ್ಶಿಸಿ ಬಹಿಷ್ಕಾರ ಹಾಕಲಾಗುವುದು ಎಂದು ಎಚ್ಚರಿಸಿದರು.

ಮಾರ್ಚ್ 25ಕ್ಕೆ ಛತ್ರಿ ಮೆರವಣಿಗೆ: ಮಾ.24ರ ಸೋಮವಾರ ಸಂಜೆಯೊಳಗೆ ಕ್ಷಮಾಪಣೆ ಕೇಳದಿದ್ದರೆ ಮಾರ್ಚ್ 25 ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ನಗರದ ವಿಶ್ವೇಶ್ವರಯ್ಯ ಪ್ರತಿಮೆ ಬಳಿಯಿಂದ ಸಂಜಯ ಸರ್ಕಲ್‌ವರೆಗೆ ಛತ್ರಿಗಳನ್ನು ಹಿಡಿದು ಪ್ರತಿಭಟನೆ ಮಾಡಲು ತೀರ್ಮಾನಿಸಲಾಗಿದೆ. ಸಾರ್ವಜನಿಕರು, ರೈತರು, ಸಂಘ–ಸಂಸ್ಥೆಗಳ ಮುಖಂಡರು ಛತ್ರಿಯೊಂದಿಗೆ ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು. ಗೋಷ್ಠಿಯಲ್ಲಿ ಮುಖಂಡರಾದ ಶಂಭೂನ ಹಳ್ಳಿ ಸುರೇಶ್ ಶಿವಳ್ಳಿಚಂದ್ರು, ಬೋರಲಿಂಗೇಗೌಡ ಪಣಕನಹಳ್ಳಿ, ಹಲ್ಲೆಗೆರೆ ಶಿವರಾಂ, ಹೊಳಲು ಸಂತೋಷ್, ಇಂಡುವಾಳು ಸಿದ್ದೇಗೌಡ ಹಾಜರಿದ್ದರು.

ಒಂದನೇ ಪುಟದಿಂದ

ಬಂದ್‌ಗೆ ಓಗೊಡದ ಜನತೆ

ವ್ಯವಹಾರ ಯಾವುದೇ ಅಡೆತಡೆಯಿಲ್ಲದೇ ನಡೆದವು. ಬಂದ್‌ಗೆ ಕರೆ ನೀಡಿದ್ದ ವಾಟಾಳ್ ನಾಗರಾಜ್ ನೇತೃತ್ವದ ಕನ್ನಡ ಒಕ್ಕೂಟದ ಮುಖಂಡರು, ಕಾರ್ಯಕರ್ತರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬಿಎಂಟಿಸಿ ಬಸ್‌ಗಳ ಸಂಚಾರ, ವಿಮಾನ ಹಾರಾಟ, ರೈಲು ಸಂಚಾರ ಎಂದಿನಂತಿತ್ತು

ಓಲಾ, ಊಬರ್ ವಾಹನ ಚಾಲಕರು ಹಾಗೂ ಕೆಲವು ಆಟೋ ಸಂಘಟನೆಗಳು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದ್ದವು, ಅಗತ್ಯ ಸೇವೆಗಳಾದ ಹಾಲು, ಔಷಧ, ದಿನಪತ್ರಿಕೆ, ತರಕಾರಿ ಸರಬರಾಜು ಎಂದಿನಂತಿತ್ತು. ಮೈಸೂರಿನಲ್ಲಿ ಕೆಎಸ್‌ಆರ್‌ಟಿಸಿ ಹಾಗೂ ಗ್ರಾಮಾಂತರ ಬಸ್ ನಿಲ್ದಾಣಗಳಲ್ಲಿ ಕನ್ನಡಪರ ಸಂಘಟನೆಗಳ ಪ್ರತಿಭಟನೆಯಿಂದ ಬಸ್‌ಗಳ ಸಂಚಾರದಲ್ಲಿ ಎರಡು ತಾಸು ವಿಳಂಬ ಉಂಟಾಯಿತು, ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದ ನಂತರ ಸಂಚಾರ ಸುಗಮವಾಯಿತು.

ಧಾರವಾಡ, ಹಾವೇರಿ, ಬಾಗಲ ಕೋಟೆ, ಗದಗ ಜಿಲ್ಲೆಗಳಲ್ಲಿ ಎಂದಿನಂತೆ ಬಸ್, ಆಟೋ ಸಂಚಾರ ಇತ್ತು, ಶಾಲಾ–ಕಾಲೇಜುಗಳು ಎಂದಿನಂತೆ ನಡೆದವು. ಮಾರು ಕಟ್ಟೆ, ಹೋಟೆಲ್‌ಗಳಲ್ಲಿ ಎಂದಿನಂತೆ ವ್ಯಾಪಾರ–ವಹಿವಾಟು ನಡೆದವು. ವಿಜಯ ಪುರದಲ್ಲಿ ಬಂದ್ ಕರೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು, ಜನರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿದ್ದರು. ಬಸ್, ಆಟೋಗಳು ರಸ್ತೆಗಿಳಿದವು, ಅಂಗಡಿ ಮುಂಗಟ್ಟುಗಳ ವಹಿವಾಟು ಎಂದಿನಂತೆ ನಡೆಯಿತು.

> ರಾಜ್ಯಾದ್ಯಂತ ಬಂದ್ ಯಶಸ್ವಿಯಾಗಿದೆ. ಆದರೆ ರಾಜ್ಯ ಸರ್ಕಾರ ಪೊಲೀಸರ ಮೂಲಕ ಬಂದ್ ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಕನ್ನಡ ಪರ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ನಾವು ಮಾಡಿರೋ ಹೋರಾಟದಲ್ಲಿ ಒಂದು ಹನಿ ನೀರು ಸಿಗದ ರೀತಿ ಆಗಬೇಕಿತ್ತು. ಆದರೂ ಯಶಸ್ಸು ಸಿಕ್ಕಿದೆ. ಹೋಟೆಲ್‌ನವರಿಗೆ ಭಾರಿ ದುರಹಂಕಾರ ಬಂದಿದೆ. ಎಲ್ಲವೂ ಪೊಲೀಸ್ ಕೈಯಲ್ಲೇ ಇದೆ. ತೀರ ಹತ್ತಿಕ್ಕುವ ಮಟ್ಟಕ್ಕೆ ಹೋಗಬಾರದಿತ್ತು. ಆದರೂ ಬಂದ್ ಯಶಸ್ವಿಯಾಗಿದೆ.
>
> -ವಾಟಾಳ್‌ನಾಗರಾಜ್

ವಿಲೇವಾರಿಗೆ ಕಟ್ಟುನಿಟ್ಟಿನ ನಿಯಮ

ಖರೀದಿಸುವ ನಿಯಮ ರೂಪಿಸುವಂತೆ ಸಲಹೆ ನೀಡಿದ್ದಾರೆ. ಕುಡಿಯುವ ನೀರಿನ ಬಾಟಲ್‌ಗಳನ್ನು ಮಾರಾಟ ಮಾಡುವ ಕಂಪನಿಗಳಿಗೆ ಪ್ಲಾಸ್ಟಿಕ್ ಬಾಟಲ್‌ನ ವೈಜ್ಞಾನಿಕ ವಿಲೇವಾರಿ ಜವಾಬ್ದಾರಿಯೂ ಇರುತ್ತದೆ. ಈ ಹಿನ್ನೆಲೆಯಲ್ಲಿ ಖಾಲಿ ಬಾಟಲ್ ಗಳನ್ನು ಕನಿಷ್ಠ ದರ ನೀಡಿ ಮರಳಿ ಖರೀದಿಸಿದರೆ ಪ್ಲಾಸ್ಟಿಕ್ ಬಾಟಲ್‌ಗಳ ವಿಲೇವಾರಿ ಸುಲಭವಾಗಲಿದೆ, ಅಲ್ಲದೆ, ಪರಿಸರದ ಮೇಲಾಗುತ್ತಿರುವ ಹಾನಿ ತಡೆಯಲು ಸಾಧ್ಯವಾಗುತ್ತದೆ ಎಂದಿದ್ದಾರೆ.

ಮಣ್ಣಲ್ಲಿ ಮಣ್ಣಾಗದ, ನೀರಿನಲ್ಲಿ ಕರಗದ, ಸುಟ್ಟರೆ ವಿಷಕಾರಿ ಅಂಶಗಳನ್ನು ಪರಿಸರಕ್ಕೆ ಸೂಸುವ ಪ್ಲಾಸ್ಟಿಕ್ ಪ್ರಕೃತಿಗಷ್ಟೇ ಅಲ್ಲದೆ ಜನ, ಜಾನುವಾರುಗಳ ಆರೋಗ್ಯ ಕ್ಕೂ ಮಾರಕವಾಗಿದೆ. ಕೇಂದ್ರ ಸರ್ಕಾರ ನಿರ್ದಿಷ್ಟ ಏಕಬಳಕೆ ಪ್ಲಾಸ್ಟಿಕ್ ತಯಾರಿಕೆ, ದಾಸ್ತಾನು, ಮಾರಾಟ, ಬಳಕೆ ನಿಷೇಧಿಸಿದೆ, ರಾಜ್ಯ ಸರ್ಕಾರ ಸಹ ಈ ಸಂಬಂಧ ನಿಯಮಗಳನ್ನು ರೂಪಿಸಿದ್ದರೂ, ಏಕ ಬಳಕೆ ಪ್ಲಾಸ್ಟಿಕ್ ಉತ್ಪನ್ನ ಹೆಚ್ಚಿನ ಸಂಖ್ಯೆಯಲ್ಲಿ ಪರಿಸರಕ್ಕೆ ಹಾನಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದಿದ್ದಾರೆ. ನೀರಿನ ಬಾಟಲ್ ಖರೀದಿಗೆ ಬರುವ ಗ್ರಾಹಕರಿಂದ ಪ್ಲಾಸ್ಟಿಕ್ ಬಾಟಲ್ ನೀರು ಮಾರುವ ಚಿಲ್ಲರೆ ಅಂಗಡಿಗಳು, ಯಾವುದೇ ಕಂಪನಿಯ ನೀರಿನ ಬಾಟಲ್ ಆಗಿದ್ದರೂ, ಅದಕ್ಕೆ ಕನಿಷ್ಠ ಬೆಲೆ ನೀಡಿ ಇಲ್ಲವೇ ಹೊಸ ನೀರಿನ ಬಾಟಲ್ ದರದಲ್ಲಿ ಕಡಿತ ಮಾಡಿ ಮಾರಾಟ ಮಾಡಬೇಕು ಮತ್ತು ಸಂಗ್ರಹಿಸಲಾದ ಖಾಲಿ ಬಾಟಲ್‌ಗಳನ್ನು ನೀರು ಮಾರಾಟ ಮಾಡುವ ಕಂಪನಿ ಗಳೇ ಹಿಂಪಡೆದು, ವೈಜ್ಞಾನಿಕ ರೀತಿ ವಿಲೇವಾರಿ ಮಾಡುವುದನ್ನು ಕಡ್ಡಾಯ ಗೊಳಿಸಲು ಸೂಚಿಸಲಾಗಿದೆ. ಯಾವುದೇ ವಸ್ತುಗಳ ಉತ್ಪಾದಕರು, ತಮ್ಮ ಉತ್ಪನ್ನಗಳಿಂದ ಪರಿಸರದ ಮೇಲಾಗುವ ಪರಿಣಾಮ ನಿರ್ವಹಿಸುವ ಜವಾಬ್ದಾರಿಯನ್ನೂ ಹೊಂದಿರುತ್ತಾರೆ.

ಯತ್ನ; ಆರೋಪಿ ಕಾಲಿಗೆ ಗುಂಡು

ಮೂಲದ ಎಂ.ಆದರ್ಶ ಅಲಿಯಾಸ್ ಮುರುಗನ್, ವಿಜೇಶ್ ಹಾಗೂ ಶ್ರೀಜಿತ್ ಮೂವರು ಆರೋಪಿಗಳನ್ನು ಬಂಧಿಸಿದ್ದರು. ಪ್ರಕರಣದ ತನಿಖೆ ನಡೆಸುತ್ತಿದ್ದ ಮೈಸೂರು ಗ್ರಾಮಾಂತರ ಠಾಣೆಯ ಸರ್ಕಲ್ ಇನ್ಸ್‌ಸ್ಪೆಕ್ಟರ್ ಶಿವನಂಜಶೆಟ್ಟಿ, ಪೊಲೀಸ್ ವಶದಲ್ಲಿದ್ದ ಆದರ್ಶ್‌ನನ್ನು ದರೋಡೆ ನಡೆದ ಸ್ಥಳ, ಜಯಪುರ ಹೋಬಳಿ ಗೋಪಾಲಪುರ ಗ್ರಾಮದ ಬಳಿ ಮಹಜರ್‌ಗಾಗಿ ಕರೆದೊಯ್ದಿದ್ದರು. ಶುಕ್ರವಾರ ರಾತ್ರಿ ಗೋಪಾಲಪುರ ಗ್ರಾಮದ ರಸ್ತೆಯಲ್ಲಿ ದರೋಡೆಗೆ ಬಳಸಿದ್ದ ಕಾರು ಬಿಟ್ಟು ಹೋಗಿದ್ದ ಸ್ಥಳದಲ್ಲಿ ಮಹಜರು ನಡೆಸುವ ವೇಳೆ ಆರೋಪಿ ಆದರ್ಶ ಮೂತ್ರ ವಿಸರ್ಜನೆ ಮಾಡಬೇಕು ಎಂದಿದ್ದಾನೆ. ಅದಕ್ಕೆ ಅವಕಾಶ ಕಲ್ಪಿಸಿ, ಆತನ ಜೊತೆಯಲ್ಲಿ ಇಬ್ಬರು ಪೊಲೀಸ್ ಸಿಬ್ಬಂದಿ ಬೆಂಗಾವಲಿದ್ದರು.

ಮೂತ್ರ ವಿಸರ್ಜನೆ ಮಾಡುವವನಂತೆ ನಾಟಕವಾಡಿದ ಆರೋಪಿ, ರಸ್ತೆ ಬದಿ ಯಾರೋ ಕುಡಿದು ಬಿಸಾಡಿದ್ದ ಬಿಯರ್ ಬಾಟಲ್ ಅನ್ನು ತೆಗೆದುಕೊಂಡು ಜಯ ಪುರ ಪೊಲೀಸ್ ಠಾಣೆ ಸಬ್‌ಇನ್‌ಸ್ಪೆಕ್ಟರ್ ಪ್ರಕಾಶ್ ಯತ್ತಿನಮನಿ ಹಾಗೂ ಕಾನ್‌ಸ್ಟೇಬಲ್ ಹರೀಶ್ ಅವರಿಗೆ ಚುಚ್ಚಿ ಪರಾರಿಯಾಗಲು ಯತ್ನಿಸಿದ್ದಾನೆ. ಈ ವೇಳೆ ಸ್ಥಳದಲ್ಲಿದ್ದ ಸರ್ಕಲ್ ಇನ್ಸ್‌ಸ್ಪೆಕ್ಟರ್ ಶಿವನಂಜಶೆಟ್ಟಿ, ಆತನಿಗೆ ಶರಣಾಗುವಂತೆ ಕೂಗಿಕೊಂಡರೂ ಅದಕ್ಕೂ ಜಗ್ಗದೆ ಆರೋಪಿ ತಪ್ಪಿಸಿಕೊಂಡು ಓಡಲೆತ್ನಿಸಿದಾಗ ಬೈಲುಕುಪ್ಪೆ ಸರ್ಕಲ್ ಇನ್ಸ್‌ಸ್ಪೆಕ್ಟರ್ ದೀಪಕ್, ತಮ್ಮ ಪಿಸ್ತೂಲ್‌ನಿಂದ ಆರೋಪಿ ಆದರ್ಶ ಕಾಲಿಗೆ ಗುಂಡು ಹಾರಿಸಿದ್ದಾರೆ.

ಪೊಲೀಸರ ಮೇಲೆ ಹಲ್ಲೆ ನಡೆಸಿ, ಬಂಧನದಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ಆರೋಪದಡಿ ಆದರ್ಶ ವಿರುದ್ಧ ಜಯಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಘಟನಾ ಸ್ಥಳಕ್ಕೆ ಎಸ್ಪಿ ಎನ್.ವಿಷ್ಣುವರ್ಧನ್, ಅಡಿಷನಲ್ ಎಸ್ಪಿಗಳಾದ ನಾಗೇಶ್, ಸಿ.ಮಲ್ಲಿಕ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರಲ್ಲಿ ಪ್ರತಿಭಟನೆಗಷ್ಟೇ ಬಂದ್ ಸೀಮಿತ

ನಿಲ್ದಾಣದ ಬಳಿ ಬಂಧಿಸಿ, ಸಿಎಆರ್ ಮೈದಾನಕ್ಕೆ ಕರೆದೊಯ್ದರು. ಬಳಿಕ ಬೆಳಗ್ಗೆ 10.45ಕ್ಕೆ ಅವರನ್ನೆಲ್ಲಾ ಬಿಡುಗಡೆ ಮಾಡಿದರು.



ಬೆಳಗಾವಿ ವಿಭಾಗದ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಮತ್ತು ನಿರ್ವಾಹಕನ ಮುಖಕ್ಕೆ ಮಸಿ ಬಳಿದು ಪುಂಡಾಟಿಕೆ ಮೆರೆದ ಎಂಇಎಸ್ ಕಾರ್ಯಕರ್ತರನ್ನು ತಕ್ಷಣ ಬಂಧಿಸಬೇಕು. ಕನ್ನಡ ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿ, ಸಂಸ್ಕಾರವನ್ನು ತಿರಸ್ಕರಿಸುವ ಹಾಗೂ ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ತರುವಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಮುಂದೆ ಇಂತಹ ಘಟನೆಗಳು ನಡೆಯದಂತೆ ಎಚ್ಚರ ವಹಿಸುವ ಮೂಲಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಬೇಕು ಎಂದು ಒತ್ತಾಯಿಸಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಇಂದು ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣ ಹಾಗೂ ಗನ್‌ಹೌಸ್ ಸರ್ಕಲ್ ಬಳಿ ತೀವ್ರ ಪ್ರತಿಭಟನೆ ನಡೆಸಿದರು.

ಎಂಇಎಸ್ ಕಾರ್ಯಕರ್ತರ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಹಲ್ಲೆ ನಡೆಸಿದವರನ್ನು ಬಂಧಿಸುವವರೆಗೆ ಹೋರಾಟ ನಿಲ್ಲಿಸುವುದಿಲ್ಲ ಎಂದು ಪಟ್ಟು ಹಿಡಿದು, ಪ್ರತಿಭಟನೆ ಮುಂದುವರೆಸಿದರಲ್ಲದೆ, ಕೆಲ ಬಸ್ ಸಂಚಾರಕ್ಕೆ ತಡೆಯೊಡ್ಡಿದ ಕಾರಣ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನಿರ್ದೇಶನದಂತೆ ಪ್ರತಿಭಟನಾಕಾರರನ್ನು ಮುಂಜಾಗ್ರತಾ ಕ್ರಮವಾಗಿ ಬಂಧಿಸಿ, ಹೇಳಿಕೆ ದಾಖಲಿಸಿಕೊಂಡು, ಪೊಲೀಸರು ನಂತರ ಬಿಡುಗಡೆ ಮಾಡಿದರು.

ಇಂದು ಬೆಳಗ್ಗೆ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದನ್ನು ಹೊರತುಪಡಿಸಿ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಕರ್ನಾಟಕ ಬಂದ್‌ಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳು ಎಂದಿನಂತೆ ಸಂಚರಿಸಿದರೆ, ಕಾರು, ಆಟೋ, ಸರಕು ಸಾಗಾಣೆ ವಾಹನ ಹಾಗೂ ಟ್ರಾವೆಲ್ ವಾಹನಗಳು ಕಾರ್ಯಾಚರಿಸಿದವು. ಉಳಿದಂತೆ ಹೋಟೆಲ್, ಸಿನಿಮಾ, ಮಾರುಕಟ್ಟೆಗಳು, ಅಂಗಡಿ–ಮುಂಗಟ್ಟು ಎಂದಿನಂತೆ ತೆರೆದಿದ್ದು, ವಹಿವಾಟು ಮಾಮೂಲಿನಂತಿತ್ತು.

ಶಾಲಾ–ಕಾಲೇಜು, ಕೈಗಾರಿಕೆಗಳು, ರಸ್ತೆಬದಿ ವ್ಯಾಪಾರ, ಹಣ್ಣು, ತರಕಾರಿ ವ್ಯಾಪಾರ ಎಂದಿನಂತೆ ನಡೆಯಿತು. ಬಂದ್, ಜನಜೀವನದ ಮೇಲೆ ಯಾವುದೇ ರೀತಿಯ ಪರಿಣಾಮ ಬೀರಲಿಲ್ಲ. ಆದರೆ, ಬಂದ್‌ಗೆ ಕರೆ ನೀಡಿದ್ದ ಹಿನ್ನೆಲೆಯಲ್ಲಿ ದೂರದ ಸ್ಥಳಗಳಿಗೆ ಪ್ರಯಾಣ ಮಾಡುವವರ ಸಂಖ್ಯೆ ಕಡಿಮೆಯಾಗಿದ್ದುದು ಕಂಡು ಬಂದಿತು. ಉಳಿದಂತೆ ದೇವಸ್ಥಾನಗಳು, ಆಸ್ಪತ್ರೆಗಳು, ಮೆಡಿಕಲ್ ಸ್ಟೋರ್‌ಗಳು ಎಲ್ಲಾ ರೀತಿಯ ಅಗತ್ಯ ಸೇವೆಗಳು ಹಾಗೂ ವಾಣಿಜ್ಯ ವಹಿವಾಟುಗಳು ಮಾಮೂಲಿನಂತಿತ್ತು.

ಡಿಸಿಪಿಗಳಾದ ಎಂ.ಮುತ್ತುರಾಜು ಮತ್ತು ಎಸ್.ಜಾಹ್ನವಿ ನೇತೃತ್ವದಲ್ಲಿ ಮೈಸೂರಿನ ನಗರ ಮತ್ತು ಗ್ರಾಮಾಂತರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಕೆಆರ್.ಸರ್ಕಲ್, ಪುರಭವನ, ಡಿ.ದೇವರಾಜ ಅರಸು ರಸ್ತೆ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಿ ಭಾರೀ ಬಂದೋಬಸ್ತ್ ಮಾಡಲಾಗಿತ್ತು. ಬಂದ್ ನೆಪದಲ್ಲಿ ಬಲವಂತವಾಗಿ ಅಂಗಡಿ ಮುಂಗಟ್ಟು ಮುಚ್ಚಿಸುವುದು ಅಥವಾ ವಾಹನ ಸಂಚಾರಕ್ಕೆ ತಡೆಯೊಡ್ಡುವುದು ಕಂಡುಬಂದಲ್ಲಿ ಅಂತಹವರ ವಿರುದ್ಧ ಪ್ರಕರಣ ದಾಖಲಿಸುವಂತೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಅಧೀನ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದ ಹಿನ್ನೆಲೆಯಲ್ಲಿ ಎಲ್ಲಾ ಉಪ ವಿಭಾಗದ ಎಸಿಪಿಗಳು ಹಾಗೂ ಅವರ ವ್ಯಾಪ್ತಿಗೆ ಬರುವ ಠಾಣೆಗಳ ಪೊಲೀಸ್ ಇನ್‌ಸ್ಪೆಕ್ಟರ್‌ಗಳು ಇಂದು ಬೆಳಗ್ಗೆಯಿಂದಲೇ ಗಸ್ತಿನಲ್ಲಿದ್ದು, ಸಾರ್ವಜನಿಕ ಸೇವೆಗೆ ತೊಂದರೆಯಾಗದಂತೆ ಕಟ್ಟೆಚ್ಚರ ವಹಿಸಿದ್ದರು.

ತಾಲೂಕು ಕೇಂದ್ರಗಳಲ್ಲಿಯೂ ಯಾವುದೇ ಅಂಗಡಿ–ಮುಂಗಟ್ಟು ಮುಚ್ಚಿದ್ದು, ವ್ಯಾಪಾರ–ವಹಿವಾಟು, ಇನ್ನಿತರ ಸೇವೆಗಳು ಸ್ಥಗಿತಗೊಂಡಿದ್ದ ಬಗ್ಗೆ ವರದಿಯಾಗಿಲ್ಲ. ಆದರೂ ಮೈಸೂರು ಜಿಲ್ಲೆಯಾದ್ಯಂತ ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಿದ್ದರಿಂದ ಬಲವಂತವಾಗಿ ಅಂಗಡಿ–ಮುಂಗಟ್ಟು ಮುಚ್ಚುವುದು, ರಸ್ತೆ ತಡೆ ನಡೆಸುವುದು, ಟೈರ್‌ಗೆ ಬೆಂಕಿ ಹಚ್ಚುವುದು ಸೇರಿದಂತೆ ಯಾವುದೇ ಅಹಿತಕರ ಘಟನೆ ನಡೆದ ಬಗ್ಗೆಯೂ ಮಾಹಿತಿ ಇಲ್ಲ ಎಂದು ಎಸ್ಪಿ ಎನ್.ವಿಷ್ಣುವರ್ಧನ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

4ನೇ ಶನಿವಾರವಾದ್ದರಿಂದ ಸರ್ಕಾರಿ ಕಚೇರಿಗಳು ಬಂದ್ ಆಗಿದ್ದವು. ಎಲ್ಲಿಯೂ ವಾಹನ ಹಾಗೂ ರೈಲು ಸಂಚಾರಕ್ಕೆ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಅಡ್ಡಿಯುಂಟು ಮಾಡಲಿಲ್ಲ. ಇಂದಿನ ಕರ್ನಾಟಕ ಬಂದ್ ಮೈಸೂರಿನಲ್ಲಿ ಪ್ರತಿಭಟನೆಗಷ್ಟೇ ಸೀಮಿತವಾಗಿತ್ತು

ಮಂಡ್ಯದಲ್ಲಿ ನೀರಸ ಪ್ರತಿಕ್ರಿಯೆ: ಬೆಳಗಾವಿಯಲ್ಲಿ ಕನ್ನಡಿಗರ ಮೇಲೆ ಮರಾಠಿ ಪುಂಡರ ಹಲ್ಲೆ ಖಂಡಿಸಿ ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಮಂಡ್ಯದಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

ಕನ್ನಡ ಸೇನೆ, ಜಯಕರ್ನಾಟಕ ಸಂಘಟನೆ, ರಾಜ್ಯ ರೈತ ಸಂಘ ಸೇರಿದಂತೆ ಹತ್ತಾರು ಸಂಘಟನೆಗಳು ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದವು. ಶನಿವಾರ ಬೆಳಿಗ್ಗೆ ಎಂಟು ಗಂಟೆಗೆ ಮಂಡ್ಯ ನಗರದ ಜೆ.ಸಿ. ವೃತ್ತದಲ್ಲಿ ಕನ್ನಡ ಸೇನೆ ಜಿಲ್ಲಾಧ್ಯಕ್ಷ ಮಂಜುನಾಥ್, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ರೈತ ನಾಯಕಿ ಸುನಂದಾ ಜಯರಾಂ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಮತ್ತು ರಸ್ತೆ ತಡೆ ನಡೆಸಲಾಯಿತು. ಈ ವೇಳೆ ಮರಾಠಿ ಪುಂಡರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಲಾಯಿತು. ಬಳಿಕ ಹತ್ತು ಗಂಟೆ ನಂತರ ನಗರದಾದ್ಯಂತ ರ್‍ಯಾಲಿ ನಡೆಸಲಾಯಿತು. ರ್‍ಯಾಲಿ ವೇಳೆ ತೆಗೆದಿದ್ದ ಅಂಗಡಿ–ಮುಗ್ಗಟ್ಟನ್ನು ಮುಚ್ಚಿಸಿದರೆ ರ್‍ಯಾಲಿ ಮುಕ್ತಾಯವಾದ 11.30ರ ಬಳಿಕ ಎಂದಿನಂತೆ ವ್ಯಾಪಾರ ವಹಿವಾಟು ಆರಂಭವಾಯಿತು.

ಚಾಮರಾಜನಗರದಲ್ಲಿ ಉತ್ತಮ ಸ್ಪಂದನೆ: ಬೆಳಗಾವಿ ಜಿಲ್ಲೆಯ ಗಡಿ ಭಾಗದಲ್ಲಿ ಹಾಗೂ ಮಹಾರಾಷ್ಟ್ರದಲ್ಲಿ ಕನ್ನಡಿಗರ ವಿರುದ್ಧ ನಡೆಯುತ್ತಿರುವ ಮರಾಠಿಗರ ಕೆಲವೊಂದು ಸಂಘಟನೆಗಳ ಪುಂಡಾಟಿಕೆ ಖಂಡಿಸಿ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿ ಸಲು ಆಗ್ರಹಿಸಿ ಶನಿವಾರ ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಲಿಲ್ಲ.

ಜಿಲ್ಲಾ ಕೇಂದ್ರವಾದ ಚಾಮರಾಜನಗರ ಸೇರಿದಂತೆ ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ತಾಲೂಕಿನಲ್ಲಿ ಜನಜೀವನ ಎಂದಿನಂತೆಯೇ ಸಹಜವಾಗಿತ್ತು. ಆಟೋ, ಬಸ್, ಟ್ಯಾಕ್ಸಿ ಸಂಚಾರ ಸಹ ಮಾಮೂಲಿನಂತೆಯೇ ಇದ್ದವು. ಅಂಗಡಿ, ಮುಂಗಟ್ಟುಗಳು, ಹೋಟೇಲ್, ಪೆಟ್ರೋಲ್ ಬಂಕ್, ಶಾಲಾ– ಕಾಲೇಜುಗಳು, ಸರ್ಕಾರಿ ಹಾಗೂ ಖಾಸಗಿ ಕಚೇರಿಗಳು ಎಂದಿನಂತೆ ಕಾರ್ಯನಿರ್ವಹಿಸಿದವು.

ಜಿಲ್ಲೆಯಲ್ಲಿ ಯಾವುದೇ ಸಂಘಟನೆಯೂ ಬಂದ್‌ಗೆ ಬೆಂಬಲ ಸೂಚಿಸಿ ಎಂದು ಹೇಳಿಕೆ ನೀಡಿರಲಿಲ್ಲ. ಕೆಲವು ಕನ್ನಡಪರ ಸಂಘಟನೆಗಳು ಮಾತ್ರ ಪ್ರತಿಭಟನೆಯನ್ನು ನಡೆಸಿ, ಮಹಾರಾಷ್ಟ್ರ ಸರ್ಕಾರ ಹಾಗೂ ಮಹಾರಾಷ್ಟ್ರದ ಕೆಲವೊಂದು ಸಂಘಟನೆಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಹೀಗಾಗಿ, ಜಿಲ್ಲೆಯಲ್ಲಿ ಬಂದ್‌ನಿಂದ ಯಾವುದೇ ಪರಿಣಾಮಗಳು ಬೀರಲಿಲ್ಲ.

ಕರ್ನಾಟಕ ಬಂದ್‌ಗೆ ಸ್ಪಂದಿಸದ ಕೊಡಗು ಜನತೆ

ಮಡಿಕೇರಿ: ರಾಜ್ಯದ ಗಡಿ ಜಿಲ್ಲೆ ಬೆಳಗಾವಿಯಲ್ಲಿನ ಮರಾಠಿ ಸಂಘಟನೆ ಎಂಇಎಸ್ ಪುಂಡಾಟಿಕೆಯನ್ನು ಖಂಡಿಸಿ ಕನ್ನಡ ಪರ ಸಂಘಟನೆಗಳು ಕರೆದಿದ್ದ ಕರ್ನಾಟಕ ಬಂದ್‌ಗೆ ಕೊಡಗು ಜಿಲ್ಲೆಯಲ್ಲಿ ಸ್ಪಂದನೆ ವ್ಯಕ್ತವಾಗಲಿಲ್ಲ.. ಜಿಲ್ಲೆಯಲ್ಲಿ ಎಂದಿನಂತೆ ದೈನಂದಿನ ಚಟುವಟಿಕೆಗಳು ನಡೆದವು. ಎಲ್ಲಾ ರೀತಿಯ ವಾಹನ ಸಂಚಾರ, ಸಹಜವಾಗಿತ್ತು. ಅಂಗಡಿಗಳು, ಮಾರುಕಟ್ಟೆ ಸಹಿತ ವ್ಯಾಪಾರ ವಹಿವಾಟು ಎಂದಿನಂತೆ ಇತ್ತು.

ಹಾಗಾಗಿ ಕೊಡಗಿನ ಪ್ರಮುಖ ಸಂಘಟನೆ ಬಂದ್‌ಗೆ ಬೆಂಬಲಿಸುವ ಸಂಬಂಧ ಹೇಳಿಕೆ ನೀಡಲಿಲ್ಲ. ಈ ಬಗ್ಗೆ ತಮ್ಮ ಅನಿಸಿಕೆಗಳನ್ನು ಬೆಂಬಲವನ್ನು ವ್ಯಕ್ತಪಡಿಸಿರಲಿಲ್ಲ ಇದರಿಂದಾಗಿ ಕೊಡಗಿನ ಜನತೆಗೆ ಬಂದ್ ಬಿಸಿ ಏನೂ ತಟ್ಟಲಿಲ್ಲ

ಮೈಸೂರಲ್ಲಿ ಕೆಲ ಸಮಯ ಮಳೆ



ಮೈಸೂರು, ಮಾ.22(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಶನಿವಾರ ಕೆಲ ಸಮಯ ಮಳೆ ಸುರಿಯಿತು.

ಬೆಳಗ್ಗೆಯಿಂದ ಮೋಡ ಕವಿದ ವಾತಾವರಣದ ಜೊತೆಗೆ ಬಿಸಿಲಿನ ತಾಪವೂ ಹೆಚ್ಚಾಗಿತ್ತು. ಸಂಜೆ 7.30ರ ವೇಳೆಗೆ ಕೆಲಕಾಲ ಅಬ್ಬರಿಸಿದ ಮಳೆ, ಬಿಸಿಲಿನಿಂದ ಬಸವಳಿದಿದ್ದ ಮೈಸೂರಿಗೆ ಅಲ್ಪಮಟ್ಟಿಗೆ ತಂಪೆರೆಯಿತು. ಕೇವಲ 15–20 ನಿಮಿಷಗಳ ಕಾಲ ಸುರಿದ ಮಳೆ–ಗಾಳಿಯಿಂದಾಗಿ ನಗರದ ಪ್ರಮುಖ ರಸ್ತೆಗಳು ಗಿಡ–ಮರಗಳ ಹೂ, ಎಲೆ, ಮುರಿದು ಬಿದ್ದ ಒಣಗಿದ ಸಣ್ಣ ಸಣ್ಣ ಕೊಂಬೆಗಳಿಂದ ಆವೃತ್ತವಾದವು. ಅಲ್ಲಲ್ಲಿ ಮಳೆ ನೀರು ನಿಂತು ವಾಹನಗಳ ಸಂಚಾರಕ್ಕೂ ತೊಂದರೆ ಉಂಟಾಯಿತು.

ಏಕಾಏಕಿ ಸುರಿದ ಮಳೆಗೆ ಕೆಲ ಪಾದಚಾರಿಗಳು ಪರದಾಡಿದರೆ, ಕೆಲವರು ಮಳೆಯಲ್ಲಿ ನೆನೆಯುತ್ತಾ ಸಂಭ್ರಮಿಸಿದ ದೃಶ್ಯವೂ ಕಂಡುಬಂತು. ದ್ವಿಚಕ್ರ ವಾಹನ ಸವಾರರು ಪೆಟ್ರೋಲ್ ಬಂಕ್, ಇತರ ಸೂರುಗಳಡಿ ನಿಂತು ಮಳೆ ನಿಂತ ಬಳಿಕ ಮುಂದೆ ಸಾಗುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಮಳೆ ಸುರಿಯುತ್ತಿದ್ದ ವೇಳೆ ಮೈಸೂರಿನ ಹೃದಯಭಾಗವಾದ ಸಯ್ಯಾಜಿರಾವ್ ರಸ್ತೆ, ಕೆ.ಆರ್.ಸರ್ಕಲ್, ಹಾರ್ಡಿಂಜ್ ವೃತ್ತ, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ಹುಣಸೂರು ಮುಖ್ಯರಸ್ತೆ, ಮೈಸೂರು–ಬೆಂಗಳೂರು–ಮುಖ್ಯ ರಸ್ತೆ ಸೇರಿದಂತೆ ಹಲವೆಡೆ ವಾಹನಗಳ ದಟ್ಟಣೆ ಹೆಚ್ಚಾಗಿ ಪರದಾಡುವ ಸ್ಥಿತಿಯೂ ನಿರ್ಮಾಣವಾಗಿತ್ತು.

ಬೆಂಗಳೂರಿನ ಹಲವೆಡೆ ಭಾರಿ ಮಳೆ

10 ವಿಮಾನ ಚೆನ್ನೈಗೆ ಮಾರ್ಗ ಬದಲಾವಣೆ

ಬೆಂಗಳೂರು, ಮಾ.22– ರಾಜ್ಯ ರಾಜಧಾನಿಯಲ್ಲಿ ಶುಕ್ರವಾರ ಸುರಿದ ಭಾರಿ ಮಳೆಯಿಂದಾಗಿ ಬೆಂಗಳೂರಿಗೆ ತೆರಳುತ್ತಿದ್ದ ಕನಿಷ್ಠ 10 ವಿಮಾನಗಳನ್ನು ಚೆನ್ನೈಗೆ ಮಾರ್ಗ ಬದಲಾವಣೆ ಮಾಡಲಾಗಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಇಂಡಿಗೋ 'ಎಕ್ಸ್'ಪೋಸ್ಟ್‌ನಲ್ಲಿ ಬೆಂಗಳೂರಿನಲ್ಲಿ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳು ವಿಮಾನಗಳ ಮೇಲೆ ಪರಿಣಾಮ ಬೀರುತ್ತಿವೆ ಎಂದು ಇಂಡಿಗೋ ಹೇಳಿದೆ. ನಾವು ಹವಾಮಾನವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ ಮತ್ತು ಸಕಾಲಿಕ ನವೀಕರಣಗಳೊಂದಿಗೆ ನಿಮಗೆ ತಿಳಿಸುತ್ತೇವೆ ಎಂದು ತಿಳಿಸಿದೆ.

ಪ್ರಯಾಣ ಯೋಜನೆಗಳನ್ನು ಸರಿಹೊಂದಿಸುವ ಅಗತ್ಯವಿದ್ದರೆ, ನೀವು ನಮ್ಮ ವೆಬ್‌ಸೈಟ್ ಮೂಲಕ ಹೊಂದಿಕೊಳ್ಳುವ ಮರುಬುಕಿಂಗ್ ಆಯ್ಕೆಗಳನ್ನು ಅನ್ವೇಷಿಸಬಹುದು ಅಥವಾ ಅನುಕೂಲಕರವಾಗಿ ಮರುಪಾವತಿಯನ್ನು ಪಡೆಯಬಹುದು ಎಂದು ಇಂಡಿಗೋ ಹೇಳಿದೆ.

ತಮ್ಮ ತಂಡಗಳು ಹವಾಮಾನವನ್ನು ಸೂಕ್ಷ್ಮವಾಗಿ ಗಮನಿಸುತ್ತಿವೆ ಮತ್ತು ಪರಿಸ್ಥಿತಿಗಳು ಸುಧಾರಿಸಿದ ತಕ್ಷಣ ಸುಗಮ ಮತ್ತು ಸಕಾಲಿಕ ಕಾರ್ಯಾಚರಣೆಗಳನ್ನು ಪುನರಾರಂಭಿಸಲು ಬದ್ಧವಾಗಿರುತ್ತವೆ ಎಂದು ಅದು ಹೇಳಿದೆ. ಬೆಂಗಳೂರಿನಲ್ಲಿ ವಾಯು ಸಂಚಾರ ದಟ್ಟಣೆಗೆ ಕಾರಣವಾಗುವ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದಾಗಿ ವಿಮಾನ ಕಾರ್ಯಾಚರಣೆಗಳು ಪರಿಣಾಮ ಬೀರುತ್ತವೆ ಎಂದು ಏರ್ ಇಂಡಿಯಾ ಹೇಳಿದೆ.

ಇಂದು ಮೈಸೂರಲ್ಲಿ 30 ಜೊತೆ ಕಾಟ ಕುಸ್ತಿ ಪಂದ್ಯಾವಳಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕುಸ್ತಿ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಮಾ.22(ಜಿಎ)–ಮೈಸೂರಿನ ಹಿನಕಲ್ ಹತ್ತು ಜನಗಳ ಗರಡಿ ಟ್ರಸ್ಟ್, ಮೈಸೂರು ಜಿಲ್ಲಾ ಕುಸ್ತಿ ಸಂಘ ಸಹಯೋಗದಲ್ಲಿ ನಗರದ ದೊಡ್ಡಕೆರೆ ಮೈದಾನದಲ್ಲಿರುವ ಶ್ರೀ ಜಯಚಾಮರಾಜ ಒಡೆಯರ್ ಅಖಾಡ ಸಾಹುಕಾರ ಚೆನ್ನಯ್ಯ ಕ್ರೀಡಾಂಗಣದಲ್ಲಿ ನಾಳೆ (ಮಾ.23) ಮಾರಿ ಹಬ್ಬದ ಪ್ರಯುಕ್ತ 30 ಜೊತೆ ಕಾಟ ಕುಸ್ತಿ ಪಂದ್ಯಾವಳಿಯನ್ನು ಏರ್ಪಡಿಸಲಾಗಿದೆ ಎಂದು ಕುಸ್ತಿ ವ್ಯವಸ್ಥಾಪಕ ಪೈಸ್ಟಾರ್ ವೆಂಕಟೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಕುಸ್ತಿಗೆ ಸಾಕಷ್ಟು ಇತಿಹಾಸವಿದ್ದು, ಅದನ್ನು ಉಳಿಸುವ ಹಿನ್ನೆಲೆಯಲ್ಲಿ ಈ ರೀತಿ ಪಂದ್ಯಾವಳಿಗಳನ್ನು ಆಯೋಜಿಸಲಾಗುತ್ತಿದ್ದು, ಸಾಕಷ್ಟು ಪ್ರತಿಭೆಗಳಿಗೆ ಅವಕಾಶ ನೀಡಲಾಗುತ್ತಿದೆ ಎಂದರು.

ಕುಸ್ತಿ ಪಂದ್ಯಾವಳಿಯ ಜ್ಯೋತಿಯನ್ನು ಹಿರಿಯ ಪಟುಗಳು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಸಾಹುಕಾರ ಚೆನ್ನಯ್ಯ ಕ್ರೀಡಾಂಗಣಕ್ಕೆ ತೆಗೆದುಕೊಂಡು ಬರುತ್ತಾರೆ. ನಂತರ ಅಂತರರಾಷ್ಟ್ರೀಯ ಕುಸ್ತಿಪಟು ಆರ್.ಆರ್.ಮಠಪತಿ ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ.

ಮಹಿಳಾ ಕುಸ್ತಿ, ವಿಕಲಚೇತನ ಕುಸ್ತಿ, ಮನರಂಜನಾ ಕುಸ್ತಿ ವಿಶೇಷ

ಅಂದು ಮಧ್ಯಾಹ್ನ 2ಕ್ಕೆ ನಡೆಯಲಿರುವ ಕುಸ್ತಿ ಪಂದ್ಯಾವಳಿಯಲ್ಲಿ ಪುರುಷರು, ಎರಡು ಜೊತೆ ಮಹಿಳಾ ಕುಸ್ತಿ ಮತ್ತು ವಿಕಲಚೇತನರ ಕುಸ್ತಿ, ಸವಾಲ್ ಕುಸ್ತಿ ಪಂದ್ಯಗಳು ಜೊತೆಗೆ ಮನರಂಜನಾ ಕುಸ್ತಿ ವಿಶೇಷವಾಗಿದ್ದು, ಮಟ್ಟಿ ಕುಸ್ತಿ ನಂತರ ಪಾಯಿಂಟ್ ಆಧಾರದ ಮೇಲೆ ನಿರ್ಣಾಯಕವಾಗಿರುತ್ತದೆ. ದಸರಾ ಕಂಠೀರವ ಪ್ರಶಸ್ತಿ ಪುರಸ್ಕೃತರಾದ ಪೈ.ಕಿರಣ್ ಭದ್ರಾವತಿ ಹಾಗೂ ಪೈ.ಶಿವಯ್ಯ ಪೂಜಾರಿ ನಡುವೆ 1 ಗಂಟೆಯ ಕುಸ್ತಿ ನಂತರ ರೋಚಕ ಪಾಯಿಂಟ್ ಕುಸ್ತಿ ನಡೆಯಲಿದೆ. ಪೈ.ಮಂಜು ಕೆಂಚ, ಪೈ.ನಿತಿನ್ ನಡುವೆ 20 ನಿಮಿಷ ಮಟ್ಟಿ ಕುಸ್ತಿ ನಡೆಯಲಿದೆ. ಪೈ.ಉಪೇಂದ್ರ, ಪೈ.ಸೂರಜ್ ಮಟ್ಟಿ ಕುಸ್ತಿ ಜೊತೆಗೆ ಪಾಯಿಂಟ್ ಕುಸ್ತಿ ಸೆಣಸಾಟ ನಡೆಯಲಿದೆ. ಪೈ.ವೆಂಕಟೇಶ್, ಪೈ.ಪಂಚಾಕ್ಷರಿ ನಡುವೆ ಉತ್ತಮ ಪಂದ್ಯಗಳು ನಡೆಯಲಿವೆ ಎಂದು ವಿವರಿಸಿದರು.

ಕುಸ್ತಿ ಪಂದ್ಯಾವಳಿಯಲ್ಲಿ ವಿಜೇತರಾದವರಿಗೆ ಬಂಡೂರು ಟಗರು, ಹೀರೋ ಸೈಕಲ್, ನಾಟಿಕೋಳಿ, ಕುಸ್ತಿ ಪಟುಗಳಿಗೆ ಅಗತ್ಯವಾಗಿ ಬೇಕಾಗುವ ಆಹಾರ ಪದಾರ್ಥಗಳನ್ನು ಹೊಂದಿರುವ ಪೈಲ್ವಾನ್ ಕಿಟ್ ನಗದು ಹಾಗೂ ಆಕರ್ಷಕ ಬಹುಮಾನ ವಿತರಿಸಲಾಗುತ್ತದೆ. ಕುಸ್ತಿ ಪಂದ್ಯಾವಳಿ ವೀಕ್ಷಣೆಗೆ ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಹಿನಕಲ್ ಹತ್ತು ಜನಗಳ ಗರಡಿ ಟ್ರಸ್ಟ್‌ನ ಅಧ್ಯಕ್ಷ ಪಟೇಲ್ ಚನ್ನೇಗೌಡ, ಮೈಸೂರು ಜಿಲ್ಲಾ ಕುಸ್ತಿ ಸಂಘದ ಅಧ್ಯಕ್ಷ ಪೈ.ಚಂದ್ರಶೇಖರ್, ಕುಸ್ತಿ ಪಂದ್ಯಾವಳಿ ಆಯೋಜಕರಾದ ಪೈ.ಗಿರೀಶ್, ಪೈ.ಬಸವರಾಜು, ಪೈ.ಚೌಡನಾಯಕ, ಪೈ.ಚಂದ್ರೇಗೌಡ, ಪೈ.ವೆಂಕಟೇಶ್, ಪೈ.ಜನಾರ್ಧನ್, ಪೈ.ಮಹಾ ದೇವಸ್ವಾಮಿ, ಪೈ.ಉಮೇಶ್, ಪೈ.ಚಂದನ್, ರಾಣಿ ವೆಂಕಟೇಶ್ ಉಪಸ್ಥಿತರಿದ್ದರು.

ಹನಿಟ್ರ್ಯಾಪ್ ಮಾಡುವವರಿಗೆ ಕಠಿಣ ಶಿಕ್ಷೆಯಾಗುವಂತೆ ರಾಷ್ಟ್ರ ಮಟ್ಟದಲ್ಲಿ ಕಾಯ್ದೆ ರೂಪಿಸಬೇಕು

ಮೈಸೂರಿನಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಪ್ರಾಯ

ಮೈಸೂರು, ಮಾ.22(ಬಿಎಲ್‌ಯು)–



ಹನಿಟ್ರ್ಯಾಪ್ ಮಾಡುವವರಿಗೆ ಕಠಿಣ ಶಿಕ್ಷೆ ಆಗುವ ನಿಟ್ಟಿನಲ್ಲಿ ರಾಷ್ಟ್ರ ಮಟ್ಟದಲ್ಲೇ ಕಾಯ್ದೆ ಆಗಬೇಕು ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಹನಿಟ್ರ್ಯಾಪ್ ರಾಜಕೀಯದಲ್ಲಿ ಮಾತ್ರವಲ್ಲದೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹೆಚ್ಚಾಗುತ್ತಿದೆ. ಈ ಮೂಲಕ ವ್ಯಕ್ತಿಯೊಬ್ಬನ ಖಾಸಗಿ ಕ್ಷಣಗಳನ್ನು ಬಹಿರಂಗ ಮಾಡಿ ಆತನ ವ್ಯಕ್ತಿತ್ವ ಹರಣ ಮಾಡುವ ಸಂಚು ನಡೆಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಹನಿಟ್ರ್ಯಾಪ್ ಬಗ್ಗೆ ಕಠಿಣ ಕಾನೂನು ಜಾರಿಯಾಗಬೇಕು. ಇಂತಹ ಕೃತ್ಯ ಮಾಡುವವರಿಗೆ ತಕ್ಕ ಶಿಕ್ಷೆಯಾಗಬೇಕು. ಈ ಸಂಬಂಧ ಸದೃಢ ಕಾಯ್ದೆ ಜಾರಿಗೆ ನನ್ನ ಒತ್ತಾಯವಿದೆ ಎಂದು ಡಾ.ಮಹದೇವಪ್ಪ ಹೇಳಿದರು.

ಸಹಕಾರ ಸಚಿವ ರಾಜಣ್ಣ ಅವರನ್ನು ಹನಿಟ್ರ್ಯಾಪ್ ಖೆಡ್ಡಾಗೆ ಬೀಳಿಸಲು ಪ್ರಯತ್ನಿಸಿದ ಬಗ್ಗೆ ಉನ್ನತ ಮಟ್ಟದ ತನಿಖೆಯಾಗುತ್ತಿದೆ. ಇದರಲ್ಲಿ ಯಾರು ಭಾಗಿಯಾಗಿದ್ದಾರೆ ಎಂಬುದು ಬಹಿರಂಗವಾಗುತ್ತದೆ. ಆದರೆ ಈ ವಿಚಾರವಾಗಿ ಸುಖಾಸುಮ್ಮನೆ ಊಹಾಪೋಹದ ಮಾತುಗಳು ಬೇಡ ಎಂದು ತಿಳಿಸಿದರು.

ಸಚಿವ ರಾಜಣ್ಣ ಅವರ ಆಕ್ರಮಣಶೀಲತೆ ಏನೂ ಕಡಿಮೆಯಾಗಿಲ್ಲ. ಹಿಂದಿನಂತೆಯೇ ಈಗಲೂ ಇದೆ. ಇದರಿಂದ ಹನಿಟ್ರ್ಯಾಪ್ ವಿಚಾರವನ್ನು ಬಹಿರಂಗವಾಗಿ ಹೇಳಿದ್ದಾರೆ ಎಂದರು.

ಶಾಸಕರ ಅಮಾನತು ಸಮರ್ಥನೆ: ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿ ಗಲಾಟೆ ಮಾಡಿದ 18 ಶಾಸಕರನ್ನು ಸ್ಪೀಕರ್ ಯು.ಟಿ.ಖಾದರ್ ಅಮಾನತು ಮಾಡಿರುವುದನ್ನು ಸಮರ್ಥಿಸಿಕೊಂಡ ಡಾ.ಮಹದೇವಪ್ಪ, ತೀವ್ರ ಗದ್ದಲ ಎಬ್ಬಿಸಿದ ಶಾಸಕರನ್ನು ಅಮಾನತು ಮಾಡುವುದನ್ನು ಬಿಟ್ಟು ಸ್ಪೀಕರ್‌ಗೆ ಬೇರೆ ದಾರಿ ಇರಲಿಲ್ಲ ಎಂದು ತಿಳಿಸಿದರು.

ಸದನದಲ್ಲಿ ಸಂಸದೀಯ ಭಾಷೆ ಬಳಕೆಯಾಗಲಿಲ್ಲ. ಪ್ರಜಾಪ್ರಭುತ್ವದ ಆಶಯಗಳನ್ನು ಬಿಜೆಪಿಯವರು ಗಾಳಿಗೆ ತೂರಿದ್ದಾರೆ. ಸ್ಪೀಕರ್ ಪೀಠಕ್ಕೆ ನುಗ್ಗಿ ಗಲಾಟೆ ಮಾಡಿದ್ದಾರೆ. ವಿಧೇಯಕ ಹರಿದು ಪೇಪರ್ ತೂರಿದ್ದಾರೆ. ಇಂತಹ ಸಂದರ್ಭದಲ್ಲಿ ಸ್ಪೀಕರ್ ಅಮಾನತು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿತ್ತು ಎಂದರು.

ಪ್ರಸ್ತುತ ಧರ್ಮ, ರಾಜಕಾರಣ, ನೈತಿಕತೆಯೂ ಕೊಳೆಯುತ್ತಿದೆ. ಪ್ರತಿಯೊಂದು ಕ್ಷೇತ್ರದಲ್ಲಿ ಮೌಲ್ಯಗಳು ಮರೆಯಾಗುತ್ತಿವೆ. ನನ್ನ 40 ವರ್ಷಗಳ ರಾಜಕೀಯ ಜೀವನದಲ್ಲಿ ಇಂತಹ ವಾತಾವರಣ ನಾನು ನೋಡಿಲ್ಲ. ಇದರಿಂದ ಸಹಜವಾಗಿ ನೋವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಅವರ ಆರೋಗ್ಯ ಚೆನ್ನಾಗಿದ್ದು, ಮುಂದಿನ ಮೂರು ವರ್ಷಗಳು ಅವರೇ ಅಧಿಕಾರ ನಡೆಸುತ್ತಾರೆ. ಇದರಲ್ಲಿ ಯಾವುದೇ ಅನುಮಾನ ಬೇಡ. ಸಿದ್ದರಾಮಯ್ಯ ಅವರ ಒಳ್ಳೆಯ ಆಡಳಿತ ನೋಡಿ ಹೊಟ್ಟೆಕಿಚ್ಚಿನಿಂದ ಕೆಲವರು ಮಾತನಾಡುತ್ತಾರೆ ಎಂದು ಡಾ.ಮಹದೇವಪ್ಪ ವಿಪಕ್ಷಗಳಿಗೆ ತಿರುಗೇಟು ನೀಡಿದರು.

ಇವತ್ತು ಡಿಕೆಶಿ, ನಾಳೆ ನಾನೇ ಹನಿಟ್ರ್ಯಾಪ್ ಮಾಡಿಸಿದ್ದು ಅನ್ನುತ್ತಾರೆ!

ಇವತ್ತು ಡಿ.ಕೆ.ಶಿವಕುಮಾರ್, ನಾಳೆ ನಾನೇ ಹನಿಟ್ರ್ಯಾಪ್ ಮಾಡಿಸಿದ್ದೇನೆಂದು ದೂರುತ್ತಾರೆ. ಸುಮ್ಮನೆ ಏನೇನೊ ಹೇಳಿದರೆ ಅದನ್ನೆಲ್ಲಾ ನಂಬಲು ಸಾಧ್ಯವಿದೆಯೇ, ಇದಕ್ಕೆಲ್ಲಾ ಅರ್ಥ ಇದೆಯೇ ಎಂದು ಡಾ.ಮಹದೇವಪ್ಪ ಪ್ರಶ್ನಿಸಿದರು.

ಇಂತಹ ವ್ಯಕ್ತಿಯೇ ನನಗೆ ಹನಿಟ್ರ್ಯಾಪ್ ಮಾಡಿಸಲು ಪ್ರಯತ್ನಿಸಿದರು ಎಂದು ರಾಜಣ್ಣ ಯಾರ ಹೆಸರನ್ನು ಹೇಳಿಲ್ಲ. ಈ ವಿಷಯದಲ್ಲಿ ಬಾಯಿಗೆ ಬಂದಂತೆ ಮಾತನಾಡಿದರೆ ಅದಕ್ಕೆ ಅರ್ಥ ಇರುವುದಿಲ್ಲ. ಈ ಆರೋಪ ಸಂಬಂಧ ತನಿಖೆಯಾಗಲಿ, ಇದರಲ್ಲಿ ಯಾರೇ ಭಾಗಿಯಾಗಿದ್ದರೂ ಶಿಕ್ಷೆಯಾಗಲಿ ಎಂದರು.

ಹಾಯ್ ಎಂದರೆ ಹಲೋ ಎನ್ನುತ್ತಾರೆ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಡಾ.ಮಹದೇವಪ್ಪ, ನಾನು ಎಲ್ಲರಿಗೂ ಹಲೋ ಎನ್ನುತ್ತೇನೆ. ಅದಕ್ಕೆ ಅವರು ಪ್ರತಿಕ್ರಿಯೆ ನೀಡುತ್ತಾರೆ. ಇದರಿಂದ ಟ್ರ್ಯಾಪ್ ಆಗುವುದು ಹೇಗೆ ಎಂದು ಪ್ರಶ್ನಿಸಿದರು. ನನಗೆ ಅಂತಹ ಯಾವ ವಿಚಾರಗಳು ಗೊತ್ತಾಗುವುದಿಲ್ಲ. ನನ್ನನ್ನು ತುಳಿಯುವ ಪ್ರಯತ್ನ ಯಾರು ಮಾಡುತ್ತಾರೊ ಅಥವಾ ಮಾಡಿದ್ದಾರೊ ನನಗೆ ಗೊತ್ತಿಲ್ಲ. ಆದರೆ ನಾನಂತೂ ಸದೃಢವಾಗಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಹನಿಟ್ರ್ಯಾಪ್ ವಿಚಾರವಾಗಿ ರಾಜಣ್ಣ ಜೊತೆ ಪ್ರತ್ಯೇಕ ಸಭೆ ನಡೆಸುವ ಅಗತ್ಯವಿಲ್ಲ. ಈ ವಿಚಾರವಾಗಿ ಉನ್ನತ ಮಟ್ಟದ ತನಿಖೆ ನಡೆಯುವ ಹಿನ್ನೆಲೆಯಲ್ಲಿ ರಾಜಣ್ಣ ಅವರನ್ನು ಭೇಟಿ ಮಾಡುವುದು ಅಪ್ರಸ್ತುತ ಎಂದು ಡಾ.ಮಹದೇವಪ್ಪ ಸ್ಪಷ್ಟನೆ ನೀಡಿದರು.

ಮಾ.24, 25ರಂದು ಕರೆ ನೀಡಿದ್ದ ಬ್ಯಾಂಕ್ ಮುಷ್ಕರ ಮುಂದೂಡಿಕೆ



ಮೈಸೂರು, ಮಾ.22–ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಮಾ.24 ಮತ್ತು 25 ರಂದು ಕರೆ ನೀಡಲಾಗಿದ್ದ ಬ್ಯಾಂಕ್ ಮುಷ್ಕರವನ್ನು ಮುಂದೂಡಲಾಗಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಯುಎಫ್‌ಬಿಯು ಮೈಸೂರು ಘಟಕದ ಸಂಚಾಲಕ ಪ್ರೇಮ್‌ಕುಮಾರ್, ಎಸ್‌ಬಿಐ ಆಫಿಸರ್ ಯೂನಿಯನ್ ವಿಭಾಗೀಯ ಕಾರ್ಯದರ್ಶಿ ಕಲ್ಯಾಣ್ ಕುಮಾರ್, ಮೈಸೂರು ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಪ್ರಭಾರ ಸಂಚಾಲಕ ಪದ್ಮನಾಭನಾಯಕ್, ಕೆನರಾ ಬ್ಯಾಂಕ್ ಆಫೀಸರ್ಸ್ ಅಸೋಸಿಯೇಶನ್ ವಿಭಾಗೀಯ ಕಾರ್ಯದರ್ಶಿಗಳಾದ ಮುರಳಿ ಮತ್ತು ಚೇತನ್‌ಕುಮಾರ್, ಮುಷ್ಕರ ಸಂಬಂಧ ಮುಂದೂಡಲ್ಪಟ್ಟ ಸಂಧಾನ ಸಭೆ ಶುಕ್ರವಾರ ಬೆಳಿಗ್ಗೆಯಿಂದ ನಡೆಯಿತು. ನಮ್ಮ ಬೇಡಿಕೆಗಳ ಕುರಿತು ಗಂಭೀರ ಚರ್ಚೆ ನಡೆಯಿತು. ಇಂಡಿಯನ್ ಬ್ಯಾಂಕ್ ಅಸೋಸಿಯೇಷನ್ ಮತ್ತು ಹಣಕಾಸು ಸೇವೆಗಳ ಇಲಾಖೆಯವರು ಉಪಸ್ಥಿತರಿದ್ದರು. ಡಿಎಫ್‌ಎಸ್‌ನ ಜಂಟಿ ಕಾರ್ಯದರ್ಶಿ ವೀಡಿಯೊ ಕರೆಯ ಮೂಲಕ ಮಾತನಾಡಿದರು ಮತ್ತು 5 ದಿನಗಳ ಬ್ಯಾಂಕಿಂಗ್ ವಿಷಯದ ಕುರಿತು ಹಣಕಾಸು ಸಚಿವಾಲಯ ಮತ್ತು ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ನಡೆಸಿದ ಸಕಾರಾತ್ಮಕ ಚರ್ಚೆಯ ಬಗ್ಗೆ ತಿಳಿಸಿದರು ಎಂದಿದ್ದಾರೆ.

ನೇಮಕಾತಿ ಮತ್ತು ಪಿಎಲ್‌ಐ ಮತ್ತು ಇತರ ವಿಷಯಗಳಂತಹ ವಿಷಯಗಳನ್ನು ಮತ್ತಷ್ಟು ಚರ್ಚಿಸಲು ಅವರು ಪ್ರಸ್ತಾಪಿಸಿದರು. 5 ದಿನಗಳ ಬ್ಯಾಂಕಿಂಗ್ ಅನುಷ್ಠಾನ ಸೇರಿದಂತೆ ಸಮಸ್ಯೆಗಳನ್ನು ನೇರವಾಗಿ ಮೇಲ್ವಿಚಾರಣೆ ಮಾಡುವುದಾಗಿ ಸಿಎಲ್‌ಸಿ ತಿಳಿಸಿದೆ. ಏಪ್ರಿಲ್ ಮೂರನೇ ವಾರದಲ್ಲಿ ಮತ್ತೆ ನಡೆಸಲು ಸಭೆಯನ್ನು ಮುಂದೂಡಲಾಗಿದೆ. ಈ ಸಕಾರಾತ್ಮಕ ಬೆಳವಣಿಗೆಯ ದೃಷ್ಟಿಯಿಂದ ನಮ್ಮ ಮುಷ್ಕರವನ್ನು ಒಂದು ಅಥವಾ ಎರಡು ತಿಂಗಳು ಮುಂದೂಡುವುದು ಅಗತ್ಯವೆಂದು ಭಾವಿಸಲಾಯಿತು. ಹೀಗಾಗಿ 24 ಮತ್ತು 25 ರಂದು ನಮ್ಮ ಮುಷ್ಕರವನ್ನು ಮುಂದೂಡಲಾಗಿದೆ ಎಂದು ಘಟಕಗಳಿಗೆ ತಿಳಿಸಲಾಗಿದೆ. ವಿವರವಾದ ಸುತ್ತೋಲೆ ಹೊರಡಿಸಲಾಗುತ್ತಿದೆ ಎಂದಿದ್ದಾರೆ

ಬಂದಮ್ಮ, ಚಾಮುಂಡಮ್ಮ ಉತ್ಸವ



ಮೈಸೂರಿನ ಹೊಸಬಂಡಿಕೇರಿ 3ನೇ ಕ್ರಾಸ್‌ನಲ್ಲಿ ಜರುಗಿದ ಬಂದಮ್ಮ ಮತ್ತು ಚಾಮುಂಡೇಶ್ವರಿಯ ಪೂಜಾ ಮಹೋತ್ಸವ, ಕಳಸ ಮೆರವಣಿಗೆಯಲ್ಲಿ ಕೆ.ಆರ್.ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿದ್ದರು. ಈ ವೇಳೆ ಮುಖಂಡರಾದ ವಿಕ್ರಾಂತ್ ರಮೇಶ್, ರಾಮಾನುಜ ರಮೇಶ್, ರಾಜು, ರೈಲ್ವೆ ಸೋಮಣ್ಣ, ಶಿವು, ರವಿ ಮತ್ತಿತರರು ಉಪಸ್ಥಿತರಿದ್ದರು. ಮೊಹಲ್ಲಾದ ವಿವಿಧ ರಸ್ತೆಗಳಲ್ಲಿ ಮೆರವಣಿಗೆ ಸಾಗಿ ನೋಡುಗರ ಮನಸೆಳೆಯಿತು.

ಒಳ ಮೀಸಲಾತಿ ವಿಚಾರದಲ್ಲಿ ದಲಿತರ ಇಬ್ಭಾಗ ಯತ್ನ

ದಲಿತಪರ ಚಳುವಳಿಗಳು ಸ್ವವಿಮರ್ಶೆಗೆ ಮುಂದಾಗುವುದು ಒಳಿತು

ಮೈಸೂರು, ಮಾ.22(ಜಿಎ)–ಒಳ ಮೀಸಲಾತಿ ವಿಷಯಕ್ಕೆ ಸಂಬಂಧಿಸಿದಂತೆ ದಲಿತಪರ ಚಳವಳಿಗಳು ತಮ್ಮನ್ನು ತಾವು ಸ್ವವಿಮರ್ಶೆಗೆ ಒಳಪಡಿಸಿಕೊಳ್ಳಬೇಕು. ಏಕೆಂದರೆ ಇದರ ಹೆಸರಿನಲ್ಲಿ ದಲಿತರನ್ನು ಇಬ್ಭಾಗಿಸಿ, ಮೀಸಲಾತಿ ಆಶಯ ಹುಸಿ ಮಾಡುವ ಯತ್ನ ನಡೆದಿದೆ ಎಂದು ಕರ್ನಾಟಕ ದಲಿತ ಚಳವಳ ನವ ನಿರ್ಮಾಣ ವೇದಿಕೆ ಮುಖ್ಯಸ್ಥ ಹರಿಹರ ಆನಂದಸ್ವಾಮಿ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸದ್ಯದಲ್ಲಿ ಮೀಸಲಾತಿ ವಿಷಯ ರಾಜಕೀಯ ಪಕ್ಷಗಳ ಓಟಿನ ರಾಜಕಾರಣಕ್ಕೆ ದುರ್ಬಳಕೆ ಆಗುತ್ತಿದೆ. ಅಸ್ಪೃಶ್ಯರೊಡನೆ ಇತರೆ ಶೋಷಿತ ಸಮುದಾಯಗಳನ್ನೂ ಸೇರಿಸಿ ನೂರೊಂದು ಜಾತಿಗಳ ಪಟ್ಟಿ ಮಾಡಿ ರಾಜಕೀಯ ದಾಳವಾಗಿ ಬಳಸಲಾಗುತ್ತಿದೆ. ಅಲ್ಲದೆ, ಅಸ್ಪೃಶ್ಯರಲ್ಲಿ ಪ್ರಮುಖರಾಗಿರುವ ಎಡ–ಬಲ ಸಮುದಾಯಗಳ ನಡುವೆ ಕಂದಕ ಹಾಗೂ ಗೊಂದಲ ಸೃಷ್ಟಿಸಲಾಗಿದೆ. ಹೀಗಾಗಿ ಈ ನಿಟ್ಟಿನಲ್ಲಿ ಈ ಸಮುದಾಯಗಳು ಎಚ್ಚರಿಕೆಯಿಂದಿರಬೇಕೆಂದು ಕೋರಿದರು.

ಎಡ–ಬಲ ಕಲಹಕ್ಕೆ ಕೂಡಲೇ ಅಂತ್ಯ ಹಾಡಬೇಕಾಗಿದೆ. ಇಲ್ಲದಿದ್ದಲ್ಲಿ ಮೇಲ್ಸ್ತರದವರ ಕುತಂತ್ರ ರಾಜಕಾರಣಕ್ಕೆ ಬಲಿಯಾಗಬೇಕಾಗುತ್ತದೆ. ಇನ್ನು, ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಈ ಹಿಂದಿನ ಅವಧಿಯಲ್ಲಿ ಇಡಬ್ಲ್ಯುಎಸ್ ಹೆಸರಿನಲ್ಲಿ ಜಾರಿಗೊಳಿಸಿದ ಮೀಸಲಾತಿಗೆ ದೇಶದ ಮೀಸಲಾತಿಪರ ಚಳವಳಿಗಳು ತೋರಿದ ಮಹಾ ಮೌನ ಆಘಾತಕಾರಿಯಾಗಿದೆ. ಯಾವುದೇ ಬೇಡಿಕೆ, ಆಗ್ರಹ, ಧರಣಿ, ಹೋರಾಟಗಳಿಲ್ಲದೇ ಸುಲಲಿತವಾಗಿ ಶೇ.10 ಮೀಸಲಾತಿ ದಕ್ಕಿಸಿಕೊಂಡ ಹಿಂದೂ ಶ್ರೇಣೀಕೃತ ವ್ಯವಸ್ಥೆಯ ಮೇಲ್ವರ್ಗಗಳ ಕುರಿತಾಗಿ ಜಾಣ ಮರೆವು ತೋರುತ್ತಿದ್ದೇವೆ. ಆದರೆ ಹತ್ತಾರು ವರ್ಷಗಳಿಂದ ಒಳ ಮೀಸಲಾತಿಗಾಗಿ ಆಗ್ರಹಿಸುತ್ತಿರುವ ಸಮುದಾಯಗಳ ಕುರಿತಾಗಿ ತಳೆದಿರುವ ಅವೈಜ್ಞಾನಿಕ ನಿಜಕ್ಕೂ ಆಷಾಢಭೂತಿತನದ್ದಾಗಿದೆ. ಆದ್ದರಿಂದ ಒಳ ಮೀಸಲಾತಿಯ ಈ ಹೋರಾಟ ತಾರ್ಕಿಕ ಅಂತ್ಯ ಕಾಣಬಹುದಾದ ದಿನಗಳಲ್ಲಿಯಾದರೂ ಎಲ್ಲರೂ ತಮ್ಮ ನಡುವಿನ ಕ್ಲೇಷ ಬದಿಗಿಟ್ಟು ಜನಸಂಖ್ಯೆ ಅನುಗುಣವಾಗಿ ಮೀಸಲಾತಿಯ ಹಂಚಿಕೆಗಾಗಿ ಆಗ್ರಹಿಸುತ್ತಿರುವ ಒಳ ಮೀಸಲಾತಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಹರಕುಮಾರ್, ಆಲಗೂಡು ಚಂದ್ರಶೇಖರ್, ಸೋಮಯ್ಯ ಇದ್ದರು.

ಕುಡಿಯುವ ನೀರಿಗೆ ತ್ಯಾಜ್ಯ ನೀರು ಮಿಶ್ರಣ ಎಚ್ಚರಿಕೆ

ಮೈಸೂರು, ಮಾ.22(ಎಸ್‌ಪಿಎನ್)–ನಗರದ ವಿವಿಧ ಬಡಾವಣೆಗಳಲ್ಲಿ ಕುಡಿಯುವ ನೀರಿಗೆ ತ್ಯಾಜ್ಯ ಮಿಶ್ರಿತ ನೀರು ಸೇರಿ ಕಲುಷಿತಗೊಳ್ಳುತ್ತಿರುವುದು ಕಂಡು ಬಂದಲ್ಲಿ ವಾಣಿವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಲಾಗಿದೆ.

ಮೈಸೂರು ನಗರಪಾಲಿಕೆ ವ್ಯಾಪ್ತಿಯ ವಿವಿಧ ಬಡಾವಣೆಗಳಿಗೆ ವಿವಿಧ ಜಲ ಸ್ಥಾವರಗಳಿಂದ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಈ ಸಂಬಂಧ ಪಾಲಿಕೆ ಎಲ್ಲಾ ಮುಂಜಾಗ್ರತಾ ಕ್ರಮವಹಿಸಲಾಗುತ್ತಿದೆ. ಆದರೂ ತಾಂತ್ರಿಕ ದೋಷದಿಂದಾಗಿ ಕುಡಿಯುವ ನೀರಿಗೆ ತ್ಯಾಜ್ಯ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದ ಕಚೇರಿಗೆ (mysoreugd@gmail.com/eevvww2012@gmail.com) ಮಾಹಿತಿ ನೀಡಬಹುದು. ದೂ.ಸಂ. 0821-2418849, 9449841196 ಸಂಪರ್ಕಿಸಿ.

> “ಬೇಸಿಗೆ ಮುಗಿಯುವವರೆಗೂ ಸಾರ್ವಜನಿಕರು ಮುನ್ನೆಚ್ಚರಿಕಾ ಕ್ರಮವಾಗಿ ನೀರನ್ನು ಕುದಿಸಿ, ಕಾಯಿಸಿ, ಆರಿಸಿ ಕುಡಿಯಬೇಕು.
> – ಮೈಸೂರು ನಗರಪಾಲಿಕೆ

ಜನಸಂಪರ್ಕ ಸಭೆ

ಮೈಸೂರು: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ನ.ರಾ. ಮೊಹಲ್ಲಾ ವಿಭಾಗದ ವತಿಯಿಂದ ಕೇಂದ್ರ ಚಾಮುಂಡಿಪುರಂ, ನ.ರಾ. ಮೊಹಲ್ಲಾ, ಜ್ಯೋತಿನಗರ ಹಾಗೂ ವರುಣ ಉಪ ವಿಭಾಗ ಕಚೇರಿಗಳಲ್ಲಿ ಜನಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಮಾ.24 ಬೆಳಗ್ಗೆ 11 ಗಂಟೆಗೆ ಕೇಂದ್ರ ಉಪವಿಭಾಗ, ಮಧ್ಯಾಹ್ನ 3 ಗಂಟೆಗೆ ನ.ರಾ.ಮೊಹಲ್ಲಾ, ಮಾ.26 ಬೆಳಗ್ಗೆ 11 ಗಂಟೆಗೆ ಚಾಮುಂಡಿಪುರಂ, ಮಧ್ಯಾಹ್ನ 3 ಗಂಟೆಗೆ ಜ್ಯೋತಿನಗರ, ಮಾ.27 ಬೆಳಗ್ಗೆ 11 ಗಂಟೆ ವರುಣದಲ್ಲಿ ಆಯೋಜಿಸಲಾಗಿದೆ.

ನಾಳೆ ಶ್ರೀ ವಾಸುದೇವ ಮಹಾರಾಜ್ ಪ್ರಶಸ್ತಿ ಪ್ರದಾನ



ಭಾನುಪ್ರಕಾಶ್ ಶರ್ಮ



ಶ್ರೀಧರ ದೀಕ್ಷಿತ್

ಮೈಸೂರು,ಮಾ.22–ಮೈಸೂರಿನ ವಾಸುದೇವ ಮಹಾರಾಜ್ ಫೌಂಡೇಷನ್ ವತಿಯಿಂದ ಶ್ರೀ ವಾಸುದೇವ ಮಹಾರಾಜರ 88ನೇ ಜಯಂತ್ಯುತ್ಸವದ ಅಂಗವಾಗಿ ಮಾ.24ರಂದು ಬೆಳಗ್ಗೆ 11.30ಕ್ಕೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶ್ರೀ ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಉದ್ಘಾಟಿಸಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ, ಧಾರ್ಮಿಕ ಚಿಂತಕ ಡಾ.ವಿ. ಭಾನುಪ್ರಕಾಶ್ ಶರ್ಮ ಮತ್ತು ಕರುಣಾಮಯಿ ಫೌಂಡೇಷನ್ ಗೌರವ ಅಧ್ಯಕ್ಷ ಎನ್.ಶ್ರೀಧರ ದೀಕ್ಷಿತ್ ಅವರಿಗೆ 2025ನೇ ಸಾಲಿನ ಶ್ರೀ ವಾಸುದೇವ ಮಹಾರಾಜ್ ಪ್ರಶಸ್ತಿ ಪ್ರದಾನ ಮಾಡುವರು. ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಂಸ್ಕೃತಿ ಚಿಂತಕರು ಹಾಗೂ ವಾಸುದೇವ ಮಹಾರಾಜ್ ಫೌಂಡೇಷನ್ ಅಧ್ಯಕ್ಷ ಡಾ.ಗುರುರಾಜ ಪೋಶೆಟ್ಟಿಹಳ್ಳಿ, ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದ ಸಿಇಓ ಕೆ.ಆರ್. ಯೋಗಾನರಸಿಂಹನ್ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ನವದೆಹಲಿಯಲ್ಲಿ ಕಲಿಸು ಫೌಂಡೇಶನ್‌ನಿಂದ ಗ್ರಂಥಾಲಯ ಲೋಕಾರ್ಪಣೆ





ಮೈಸೂರಿನ ಕಲಿಸು ಫೌಂಡೇಷನ್ ದೆಹಲಿಯಲ್ಲಿ ತೆರೆದಿರುವ 125ನೇ ಗ್ರಂಥಾಲಯವನ್ನು ಸಂಸದ ಯದುವೀರ್ ಉದ್ಘಾಟಿಸಿದರು. ನಂತರ ವಿದ್ಯಾರ್ಥಿಗಳ ಜತೆ ಸಂವಾದ ನಡೆಸಿದರು. ನವದೆಹಲಿ ಸಂಸ್ಥೆ ಬಾನ್ಸುರಿ ಸ್ವರಾಜ್, ನಿಖಿಲೇಶ್ ಈ ವೇಳೆ ಉಪಸ್ಥಿತರಿದ್ದರು.

ನವದೆಹಲಿ, ಮಾ.22(ಬಿಎಲ್‌ಯು)–ಮೈಸೂರಿನ ಕಲಿಸು ಫೌಂಡೇಷನ್ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ತೆರೆದಿರುವ 125ನೇ ಗ್ರಂಥಾಲಯವನ್ನು ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಯದುವೀರ್, ದಾನಗಳಲ್ಲಿ ಶ್ರೇಷ್ಠದಾನವೆಂದರೆ ಅದು ವಿದ್ಯಾದಾನವಾಗಿದೆ. ಈ ಹಿನ್ನೆಲೆ ಮೈಸೂರು ಒಡೆಯರ್ ಸಂಸ್ಥಾನದಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿತ್ತು. ಈ ಕಾರಣದಿಂದಲೇ ವಿಶ್ವದ ಪ್ರಮುಖ ನಗರಗಳಲ್ಲಿ ಮೈಸೂರು ಕೂಡ ಒಂದಾಗಿದೆ ಎಂದು ತಿಳಿಸಿದರು.

ಕಲಿಸು ಸಂಸ್ಥೆ ಕಳೆದ ಕೆಲವು ವರ್ಷಗಳಿಂದ ಜ್ಞಾನ ವೃದ್ಧಿಗೊಳಿಸುವ ಕಾರ್ಯದಲ್ಲಿ ತೊಡಗಿದ್ದು, ಈ ಮಹಾತ್ಕಾರ್ಯದಲ್ಲಿ ನಾನು ಕೂಡ ಭಾಗಿಯಾಗಿರುವುದು ಹೆಮ್ಮೆಯ ವಿಚಾರವಾಗಿದೆ ಎಂದರು.

ನವದೆಹಲಿಯ ಗೋಲ್ ಮಾರುಕಟ್ಟೆಯಲ್ಲಿ ಅಟಲ್ ಆದರ್ಶ್ ಬೆಂಗಾಲಿ ಬಾಲಿಕಾ ವಿದ್ಯಾಲಯದಲ್ಲಿ ತೆರೆದಿರುವ 125ನೇ ಗ್ರಂಥಾಲಯದಲ್ಲಿ ಸಾವಿರಾರು ಪುಸ್ತಕಗಳು ದೊರೆಯಲಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.


ಈ ವೇಳೆ ಮಾತನಾಡಿದ ನವದೆಹಲಿ ಸಂಸದೆ ಬಾನ್ಸುರಿ ಸ್ವರಾಜ್ ಅವರು, ಕಲಿಸು ಸಂಸ್ಥೆ ಸರ್ಕಾರ ಮಾಡುವ ಕೆಲಸ ಮಾಡುತ್ತಿದೆ. ದೆಹಲಿಯ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಿಸಲು ಕಲಿಸು ಸಂಸ್ಥೆ ಜೊತೆ ಕೈ ಜೋಡಿಸಲು ನಾವು ಉತ್ಸುಕರಾಗಿ ದ್ದೇವೆ. ಶೀಘ್ರವೇ ಈ ಸಂಬಂಧ ಒಪ್ಪಂದ ಮಾಡಿ ಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ತರುವಾಯ ಮಾತನಾಡಿದ ಕಲಿಸು ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಿಖಿಲೇಶ್, ನಮ್ಮ ಸಂಸ್ಥೆ ಈವರೆಗೆ ಗ್ರಂಥಾಲಯಗಳಿಗೆ 2.5 ಲಕ್ಷ ಪುಸ್ತಕ ನೀಡಿದೆ. ಇದರಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಯದುವೀರ್ ಒಡೆಯರ್ ಹಾಗೂ ಬಾನ್ಸುರಿ ಸ್ವರಾಜ್ ಅವರು ವಿದ್ಯಾರ್ಥಿಗಳ ಜೊತೆ ಮುಕ್ತ ಸಂವಾದ ನಡೆಸಿದರು.

ದೇಶ - ವಿದೇಶ

ಟೀನೇಜ್ ಹುಡುಗನ ಜೊತೆ ಅಕ್ರಮ ಸಂಬಂಧ ಗರ್ಭವತಿಯಾದ ಐಸ್‌ಲ್ಯಾಂಡ್ ಸಚಿವೆ ರಾಜೀನಾಮೆ



ಐಸ್‌ಲ್ಯಾಂಡ್: ಟೀನೇಜ್ ಹುಡುಗನ ಜೊತೆ ಅಕ್ರಮ ಸಂಬಂಧ ಹೊಂದಿ, ಗರ್ಭವತಿಯಾದ ಕಾರಣ ಐಸ್‌ಲ್ಯಾಂಡ್ ಸಚಿವೆಯೊಬ್ಬರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.


ಐಸ್‌ಲ್ಯಾಂಡ್‌ನ ಮಕ್ಕಳ ಸಚಿವೆ ಅಸ್ತಿಲ್ದುರ್ ಲೋವಾ ಥೋರ್ಸ್‌ಡೋಟ್ಟಿರ್ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, 3 ದಶಕಗಳ ಹಿಂದೆ ತಾವು ಟೀನೇಜ್ ಹುಡುಗೊಂದಿಗೆ ಮಗು ಪಡೆದಿದ್ದೇನೆ ಎಂದು ಒಪ್ಪಿಕೊಂಡಿದ್ದಾರೆ. ಪ್ರಸ್ತುತ 55 ವರ್ಷದ ಅಸ್ತಿಲ್ದುರ್ ಲೋವಾ ಥೋರ್ಸ್‌ಡೋಟ್ಟಿರ್ ತಮ್ಮ 22 ವಯಸ್ಸಿನಲ್ಲಿ 15 ವರ್ಷದ ಹುಡುಗನೊಂದಿಗೆ ಅಕ್ರಮ ಸಂಬಂಧದಿಂದ ಮಗು ಪಡೆದಿದ್ದರು ಎಂದು ಹೇಳಲಾಗಿದೆ. ಈ ವಿಚಾರ ಇದೀಗ ವ್ಯಾಪಕ ಸುದ್ದಿಗೆ ಗ್ರಾಸವಾಗಿ ಥೋರ್ಸ್‌ಡೋಟ್ಟಿರ್ ವಿವಾದಕ್ಕೆ ಸಿಲುಕಿದ್ದರು. ಹಾಗಾಗಿ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ವಿವಾದಗಳಿಂದ ದೂರ ಉಳಿಯಲು ನಿರ್ಧರಿಸಿದ್ದಾರೆ. ಐಸ್‌ಲ್ಯಾಂಡ್‌ನಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಯೊಂದಿಗೆ ದೈಹಿಕ ಸಂಪರ್ಕ ಸಾಧಿಸುವುದು ಕಾನೂನು ಬಾಹಿರವಾಗಿದೆ. ಒಂದು ವೇಳೆ ತಪ್ಪಿತಸ್ಥರೆಂದು ಕಂಡುಬಂದರೆ ಗರಿಷ್ಠ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಬಹುದಾಗಿದೆ.

ಕೌಟುಂಬಿಕ ಕಲಹಕ್ಕೆ ಬೇಸತ್ತು ಪತಿಯ ನಾಲಿಗೆಯನ್ನೇ ಕಚ್ಚಿದ ಮಹಿಳೆ

ಕೋಟಾ (ರಾಜಸ್ಥಾನ): ಝಲಾವರ್ ಜಿಲ್ಲೆಯ ಬಕಾನಿ ಪಟ್ಟಣದಲ್ಲಿ ನಡೆದ ಕೌಟುಂಬಿಕ ಕಲಹದ ವೇಳೆ ಕೋಪಗೊಂಡ ಮಹಿಳೆಯೊಬ್ಬರು ತಮ್ಮ ಪತಿಯ ನಾಲಿಗೆಯನ್ನೇ ಕಚ್ಚಿರುವ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 115(2) ಮತ್ತು 118(2)ರ ಅಡಿಯಲ್ಲಿ ಸ್ವಯಂ ಪ್ರೇರಣೆಯಿಂದ ನೋವುಂಟು ಮಾಡುವ ಮತ್ತು ಗಂಭೀರ ಗಾಯಗಳನ್ನು ಉಂಟುಮಾಡಿದ ಆರೋಪದ ಮೇಲೆ ರವಿನಾ ಸೈನ್ (23) ಎಂಬುವವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸಹಾಯಕ ಸಬ್–ಇನ್ಸ್‌ಪೆಕ್ಟರ್ ಬ್ರಿಜ್‌ರಾಜ್ ಸಿಂಗ್ ಅವರ ಪ್ರಕಾರ ಬಕಾನಿ ಪಟ್ಟಣದ ಕನ್ಹಯಾಲಾಲ್ ಸೈನ್ (25) ಮತ್ತು ಹತ್ತಿರದ ಸುನೆಲ್ ಗ್ರಾಮದ ರವಿನಾ ಸೈನ್ ಒಂದೂವರೆ ವರ್ಷಗಳ ಹಿಂದೆ ವಿವಾಹವಾಗಿದ್ದರು. ದಂಪತಿ ನಡುವೆ ಹೊಂದಾಣಿಕೆ ಇರಲಿಲ್ಲ ಮತ್ತು ಆಗಾಗ್ಗೆ ಜಗಳವಾಡುತ್ತಿದ್ದರು. ಮಹಿಳೆ ಕೋಪದಿಂದ ಕನ್ಹಯಾಲಾಲ್ ಅವರ ನಾಲಿಗೆಯ ಒಂದು ಭಾಗವನ್ನು ಕಚ್ಚಿದ್ದಾಳೆ ಎಂದಿದ್ದಾರೆ. ಕುಟುಂಬ ಸದಸ್ಯರು ಕನ್ಹಯಾಲಾಲ್ ಅವರನ್ನು ಕೂಡಲೇ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಝಾಲಾವರ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

ಐದು ಲಕ್ಷ ವಲಸಿಗರ ಕಾನೂನು ರಕ್ಷಣೆ ರದ್ದುಪಡಿಸಿದ ಅಮೆರಿಕ

ವಾಷಿಂಗ್ಟನ್: ಲಕ್ಷಾಂತರ ವಲಸಿಗರ ಕಾನೂನುಬದ್ಧ



ರಕ್ಷಣೆಯನ್ನು ರದ್ದುಗೊಳಿಸುವುದಾಗಿ ಅಮೆರಿಕ ಹೇಳಿದ್ದು, ಅವರಿಗೆ ದೇಶ ತೊರೆಯಲು ವಾರಗಳ ಕಾಲಾವಕಾಶ ನೀಡಿದೆ. ಅಧ್ಯಕ್ಷ ಟ್ರಂಪ್ ಅಮೆರಿಕದ ಇತಿಹಾಸದಲ್ಲಿಯೇ ಅತಿ ದೊಡ್ಡ ಗಡಿಪಾರು ಅಭಿಯಾನವನ್ನು ಕೈಗೊಳ್ಳುವುದಾಗಿ ಮತ್ತು ಮುಖ್ಯವಾಗಿ ಲ್ಯಾಟಿನ್ ಅಮೆರಿಕನ್ ರಾಷ್ಟ್ರಗಳಿಂದ ಅಕ್ರಮ ವಲಸೆ ತಡೆಯುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ಈ ಆದೇಶವು ಅಕ್ಟೋಬರ್ 2022ರ ನಂತರ ಅಮೆರಿಕಕ್ಕೆ ಬಂದಿರುವ ಕ್ಯೂಬಾ, ಹೈಟಿ, ನಿಕರಾಗುವಾ ಮತ್ತು ವೆನೆಜುವೆಲಾ ಸೇರಿದಂತೆ 4 ದೇಶಗಳ ಸುಮಾರು 5,32,000 ಜನರಿಗೆ ಅನ್ವಯಿಸುತ್ತದೆ ಎಂದು ಹೋಮ್ ಲ್ಯಾಂಡ್ ಸೆಕ್ಯುರಿಟಿ ಕಾರ್ಯದರ್ಶಿ ಕ್ರಿಸ್ಟಿ ನೋಯೆಮ್ ಹೇಳಿದ್ದಾರೆ. ಈ 4 ದೇಶದ ಲಕ್ಷಾಂತರ ನಾಗರಿಕರು ಏ.24ರಂದು ಅಥವಾ ಫೆಡರಲ್ ರಿಜಿಸ್ಟರ್‌ನಲ್ಲಿ ನೋಟಿಸ್ ಪ್ರಕಟವಾದ 30 ದಿನಗಳಲ್ಲಿ ಅಮೆರಿಕದಲ್ಲಿ ಉಳಿಯುವ ತಮ್ಮ ಕಾನೂನು ರಕ್ಷಣೆ ಕಳೆದುಕೊಳ್ಳಲಿದ್ದಾರೆ. ಈ ಹೊಸ ಆದೇಶಕ್ಕೂ ಮುನ್ನ ಮಾನವೀಯ ಪೆರೋಲ್‌ನಲ್ಲಿ ಬಂದವರು ತಮ್ಮ ಪೆರೋಲ್ ಅವಧಿ ಮುಗಿಯುವವರೆಗೆ ಅಮೆರಿಕದಲ್ಲಿಯೇ ಉಳಿಯಬಹುದಿತ್ತು.


ಬಂದೂಕಿನ ಬುಲೆಟ್‌ಗಳನ್ನು ಬಾಣಲೆಗೆ ಹಾಕಿ ಹುರಿದ ಸಬ್‌ಇನ್ಸ್‌ಪೆಕ್ಟರ್!

ಕೊಚ್ಚಿ: ಕೊಚ್ಚಿ ನಗರ ಪೊಲೀಸ್ ಸಶಸ್ತ್ರ ಮೀಸಲು ಪಡೆ (ಎಆರ್) ಶಿಬಿರದಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಒಬ್ಬರು ಬಂದೂಕಿನ ಬುಲೆಟ್‌ಗಳನ್ನು ಬಾಣಲೆಗೆ ಹಾಕಿ ಹುರಿದಿರುವ ವಿಲಕ್ಷಣ ಘಟನೆ ನಡೆದಿದೆ. ಅದೃಷ್ಟವಶಾತ್ ಯಾವುದೇ ರೀತಿಯ ಅಪಾಯವಾಗಿಲ್ಲ. ಮಾ.10ರಂದು ಮೃತ ಪೊಲೀಸ್ ಸಿಬ್ಬಂದಿ ಅಂತ್ಯಕ್ರಿಯೆ ಇತ್ತು. ಅದಕ್ಕಾಗಿ ಗಾಳಿಯಲ್ಲಿ ಗುಂಡು ಹಾರಿಸಬೇಕಾಗಿತ್ತು. ಅಧಿಕಾರಿ ಸಿವಿ ಸಜೀವ್, ಅಂತ್ಯಕ್ರಿಯೆ ಸಮಾರಂಭಕ್ಕಾಗಿ ಬಂದೂಕಿನ ಗುಂಡುಗಳನ್ನು ಸಿದ್ಧಪಡಿಸುತ್ತಿದ್ದರು.

ಮದ್ದುಗುಂಡು ಘಟಕದ ಉಸ್ತುವಾರಿ ವಹಿಸಿದ್ದ ಪಿಎಸ್‌ಐ ಸಜೀವ್ ಶಿಬಿರದ ಶಸ್ತ್ರಾಗಾರದಲ್ಲಿ ಸಂಗ್ರಹಿಸಲಾದ ಖಾಲಿ ಗುಂಡುಗಳು ತುಕ್ಕು ಹಿಡಿದಿರುವುದನ್ನು ಗಮನಿಸಿದ್ದಾರೆ. ಸಾಮಾನ್ಯವಾಗಿ ಅಂತಹ ಗುಂಡುಗಳನ್ನು ಬಳಕೆಗೆ ಯೋಗ್ಯವಾಗಿಸಲು ಸೂರ್ಯನ ಬೆಳಕಿನಲ್ಲಿ ಒಣಗಿಸಲಾಗುತ್ತದೆ. ಆದರೆ ಕಡಿಮೆ ಸಮಯದ ಕಾರಣ ಶಿಬಿರದ ಅಡುಗೆ ಮನೆಯಲ್ಲಿರುವ ಬಾಣಲೆಯಲ್ಲಿ ಅವುಗಳನ್ನು ಬಿಸಿ ಮಾಡಲು ನಿರ್ಧರಿಸಿದರು. ಹೀಗೆ ಮಾಡುವಾಗ ಎರಡು ಗುಂಡುಗಳು ದೊಡ್ಡ ಶಬ್ದದೊಂದಿಗೆ ಸ್ಫೋಟಗೊಂಡವು. ಖಾಲಿ ಗುಂಡುಗಳ ಒಳಗೆ ಇದ್ದ ಗನ್‌ಪೌಡರ್ ಸ್ಫೋಟಕ್ಕೆ ಕಾರಣವಾಗಬಹುದು ಎಂಬುದನ್ನು ಅಧಿಕಾರಿ ಸಂಪೂರ್ಣವಾಗಿ ಮರೆತಿದ್ದಾರೆ. ಅದೃಷ್ಟವಶಾತ್, ಅಡುಗೆ ಮನೆಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳು ಇರಲಿಲ್ಲ.

ಮಸೀದಿ ಮೇಲೆ ಇಸ್ಲಾಮಿಸ್ಟ್ ಉಗ್ರರ ದಾಳಿ: 44 ಮಂದಿ ಸಾವು

ನಿಯಾಮಿ: ನೈರುತ್ಯ ನೈಗರ್‌ನಲ್ಲಿರುವ ಮಸೀದಿಯೊಂದರ ಮೇಲೆ



ಇಸ್ಲಾಮಿಸ್ಟ್ ಉಗ್ರರು ನಡೆಸಿದ ದಾಳಿಯಲ್ಲಿ ಕನಿಷ್ಠ 44 ನಾಗರಿಕರು ಮೃತಪಟ್ಟಿದ್ದು, 13 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ನೈಗರ್, ಬುರ್ಕಿನಾ ಫಾಸೊ ಮತ್ತು ಮಾಲಿಯ ಗಡಿ ಪ್ರದೇಶದ ಸಮೀಪದಲ್ಲಿರುವ ಫೋಂಬಿಟಾ ಗ್ರಾಮದ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುವ ವೇಳೆ ದಾಳಿ ಸಂಭವಿಸಿದೆ. ಈ ದಾಳಿಯನ್ನು ಇಸ್ಲಾಮಿಕ್ ಸ್ಟೇಟ್ ಸಂಘಟನೆಯ ಅಂಗ ಸಂಸ್ಥೆಯಾದ ಇಐಜಿಎಸ್ ನಡೆಸಿರುವ ಸಾಧ್ಯತೆ ಇದೆ. ಮುಸ್ಲಿಮರ ಪವಿತ್ರ ರಂಜಾನ್ ಪ್ರಯುಕ್ತ ಪ್ರಾರ್ಥನೆ ಸಲ್ಲಿಸಲು ಹೆಚ್ಚಿನ ಸಂಖ್ಯೆಯಲ್ಲಿ ಮಸೀದಿಗೆ ಬಂದಿದ್ದರು. ಇದೇ ವೇಳೆ ಭಾರಿ ಶಸ್ತ್ರಸಜ್ಜಿತ ಉಗ್ರರು, ಜನರನ್ನು ಸುತ್ತುವರಿದು ಹತ್ಯಾಕಾಂಡ ನಡೆಸಿದ್ದಾರೆ. ಮಸೀದಿ ಮೇಲೆ ದಾಳಿ ನಡೆಸಿದ ಬಳಿಕ ದಾಳಿಕೋರರು ಮಾರುಕಟ್ಟೆ ಮತ್ತು ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಮೈಸೂರು ಮಿತ್ರ ಭಾನುವಾರ 23 ಮಾರ್ಚ್ 2025

ಸುಂಟಿಕೊಪ್ಪ ನಾಡ್ ಕೊಡವ ನಮ್ಮೆ ಉತ್ಸವಕ್ಕೆ ಚಾಲನೆ



ಶುಕ್ರವಾರ ಆರಂಭವಾದ ಸುಂಟಿಕೊಪ್ಪ ನಾಡ್ ಕೊಡವ ನಮ್ಮೆ' ಉತ್ಸವದಲ್ಲಿ ಮಹಿಳೆಯರು ಕೊಡವ ಸಾಂಪ್ರದಾಯಿಕ ಉಡುಪಿನೊಂದಿಗೆ ನೃತ್ಯ ಮಾಡಿದರು.

ಮಡಿಕೇರಿ,ಮಾ.22– ವೈಶಿಷ್ಟ್ಯಪೂರ್ಣ ಕೊಡವ ಸಂಸ್ಕೃತಿಯ ಆಚಾರ, ವಿಚಾರ, ಪದ್ಧತಿ, ಪರಂಪರೆ ಬಿಂಬಿಸುವ 'ಸುಂಟಿಕೊಪ್ಪ ನಾಡ್ ಕೊಡವ ನಮ್ಮೆ' ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಹಾಗೂ ಸುಂಟಿಕೊಪ್ಪ ಕೊಡವ ಸಮಾಜದ ಸಂಯುಕ್ತಾಶ್ರಯದಲ್ಲಿ ನಡೆದ ಸುಂಟಿಕೊಪ್ಪ ನಾಡ್ ಕೊಡವ ನಮ್ಮೆಯಲ್ಲಿ ಸುಂಟಿಕೊಪ್ಪ ಅಯ್ಯಪ್ಪ ದೇವಾಲಯದಿಂದ ಮುಖ್ಯ ಪಟ್ಟಣದ ಮೂಲಕ ಕೊಡವ ಸಮಾಜದ ವರೆಗೆ ಆಚಾರ, ವಿಚಾರ, ಸಂಸ್ಕೃತಿಯನ್ನು ಬಿಂಬಿಸುವ ಸಾಂಪ್ರದಾಯಿಕ ದುಡಿಕೊಟ್ಟ್, ಕೊಂಬ್–ಆಟ್, ವಾಲಗದೊಂದಿಗೆ ಕೊಡವ ಸಾಂಸ್ಕೃತಿಕ ಮೆರವಣಿಗೆ ನಡೆಯಿತು.

ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕೊಡವ ಜನಾಂಗದ ಮೂಲ ಸಾಂಪ್ರದಾಯಿಕ ಆಚಾರ, ವಿಚಾರ, ಸಂಸ್ಕೃತಿ, ಭಾಷೆ, ಉಡುಪು ತೊಡುಪನ್ನು ಉಳಿಸಿಕೊಂಡಾಗ ಮಾತ್ರ ಕೊಡವ ಜನಾಂಗ ಉಳಿಯಲು ಸಾಧ್ಯ. ಹಿರಿಯರು ಕಟ್ಟಿಕೊಟ್ಟ ಐನ್‌ಮನೆ, ಕೈಮಡ, ಮಂದ್ ಮಾನಿ ಕೊಡವರ ಮೂಲ ನೆಲೆಯಾಗಿಯೇ ಉಳಿಯಬೇಕೆಂದರು.

ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಅವರು ಮಾತನಾಡಿ, ಕೊಡವ ಸಂಸ್ಕೃತಿ, ಆಚಾರ, ವಿಚಾರವನ್ನು ಉಳಿಸಿ ಬೆಳೆಸುವ ಜೊತೆಗೆ ಮುಂದಿನ ಯುವ ಪೀಳಿಗೆಗೆ ಮಾರ್ಗದರ್ಶನವನ್ನು ನೀಡುವಂತಾಗಬೇಕು ಎಂದು ಹೇಳಿದರು.

ಹಾಕಿ ಆಟಗಾರ ಹಾಗೂ ಕ್ರೀಡಾ ವೀಕ್ಷಕ ವಿವರಣೆಗಾರರಾದ ಚೆಪ್ಪುಡಿರ ಎ. ಕಾರ್ಯಪ್ಪ, ಕಾಫಿ ಮಂಡಳಿಯ ಮಾಜಿ ಉಪಾಧ್ಯಕ್ಷ ನಡಿಕೇರಿಯಂಡ ಬೋಸ್ ಮಂದಣ್ಣ ಮೊದಲಾದವರು ಮಾತನಾಡಿದರು.

ಸುಂಟಿಕೊಪ್ಪ ಕೊಡವ ಸಮಾಜ ಮಹಿಳೆಯರಿಂದ ಸ್ವಾಗತ ನೃತ್ಯ ನೆರವೇರಿತು. ಹಿರಿಯ ಕೊಡವಾಭಿಮಾನಿ ಪುಡಿಯಂಡ ಕೆ.ಮುತ್ತಣ್ಣ, ಹಿರಿಯ ಜಾನಪದ ಕಲಾವಿದ ಚಿಕ್ಕಂಡ ಉತ್ತಪ್ಪ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ಸದಸ್ಯ ಮುಕ್ಕಾಟೀರ ಎ.ವಸಂತ, ಹಿರಿಯ ಕೊಡವಾಭಿಮಾನಿ ಚೇನಂಡ ಎ.ಉತ್ತಯ್ಯ, ಹಿರಿಯ ಹಾಕಿ ಆಟಗಾರರಾದ ಮಾಳೆಯಂಡ ಡಿ.ಮುತ್ತಪ್ಪ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ರಿಜಿಸ್ಟ್ರಾರ್ ಅಜ್ಜಿಕುಟ್ಟೀರ ಸಿ.ಗಿರೀಶ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ವಿಚಾರಗೋಷ್ಠಿ, ಕವನ ವಾಚನ ನಡೆಯಿತು. ಕಾರ್ಯಕ್ರಮದ ಅಂಗವಾಗಿ ಬೆಕ್ಕೆಸೊಡ್ಲೂರು ಮಂದತವ್ವ ಕೊಡವ ಸಾಂಸ್ಕೃತಿಕ ತಂಡದಿಂದ ವಿವಿಧ ನೃತ್ಯ, ಉಮ್ಮತಾಟ್, ಮುಕೋಡ್ಲು ವ್ಯಾಲಿಡ್ಯೂ ತಂಡದಿಂದ ಪೀಲಿಯಾಟ್ ಬೊಳಕಾಟ್, ಕೊಡಗರಳ್ಳಿ ತಂಡದಿಂದ ಬಾಳೋಪಾಟ್, ವಾಲಗತಾಟ್ ಪ್ರದರ್ಶನ ನೆರವೇರಿತು.



ಸುಂಟಿಕೊಪ್ಪ ನಾಡ್ ಕೊಡವ ನಮ್ಮೆ' ಉತ್ಸವದಲ್ಲಿ ವಿವಿಧ ಕ್ಷೇತ್ರದ ಗಣ್ಯರನ್ನು ಸನ್ಮಾನಿಸಿ, ಗೌರವಿಸಲಾಯಿತು.

35ನೇ ರಾಮೋತ್ಸವದ ಪೂರ್ವಭಾವಿ ಸಭೆ



ರಾಮೋತ್ಸವದ ಪೂರ್ವಭಾವಿ ಸಭೆಯಲ್ಲಿ ಕೆ.ಎಂ.ಗಣೇಶ್ ಮಾತನಾಡಿದರು.

ಮಡಿಕೇರಿ,ಮಾ.22– ಶ್ರೀ ರಾಮೋತ್ಸವ ಆಡಳಿತ ಮಂಡಳಿ ವತಿಯಿಂದ ಏ.5 ಮತ್ತು 6ರಂದು ನಡೆಯಲಿರುವ 35ನೇ ರಾಮೋತ್ಸವದ ಪೂರ್ವಭಾವಿ ಸಭೆ ಇಲ್ಲಿನ ಮಲ್ಲಿಕಾರ್ಜುನ ನಗರದ ಶ್ರೀ ಕೋದಂಡರಾಮ ದೇವಾಲಯದಲ್ಲಿ ಇಂದು ನಡೆಯಿತು.

ಸಮಿತಿ ಅಧ್ಯಕ್ಷ ಕೆ.ಎಂ.ಗಣೇಶ್ ಮಾತನಾಡಿ, ಈಗಾಗಲೇ ರಾಮೋತ್ಸವದ ಸಿದ್ಧತೆಗಳು ಆರಂಭವಾಗಿದ್ದು, ಎಲ್ಲಾ ಸಮಿತಿಗಳು ತಮಗೆ ಒಪ್ಪಿಸಿರುವ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ. ನಾಡಿನ ಜನತೆ ರಾಮೋತ್ಸವಕ್ಕೆ ತಮ್ಮ ತನುಮನಧನ ಸಹಕಾರವನ್ನು ನೀಡುವ ಮೂಲಕ ಜಾತಿ, ಮತ, ಭೇದವಿಲ್ಲದೆ ಒಗ್ಗಟ್ಟಿನಿಂದ ಭಾಗವಹಿಸುವಂತೆ ಮನವಿ ಮಾಡಿದರು.

ಸಭೆಯಲ್ಲಿ ದೇವಾಲಯ ಟ್ರಸ್ಟ್‌ನ ಅಧ್ಯಕ್ಷ ನಂಜುಂಡ, ದೇವಾಲಯದ ಮುಖ್ಯ ಸಲಹೆಗಾರ ಜಿ.ರಾಜೇಂದ್ರ, ಸಲಹೆಗಾರ ಸಂಪತ್ತು, ಗೌಡ ಸಮಾಜಗಳ ಒಕ್ಕೂಟಗಳ ಅಧ್ಯಕ್ಷ ಸೂರ್ತಲೆ ಸೋಮಣ್ಣ, ಕೊಡವ ಸಮಾಜದ ಪ್ರಧಾನ ಕಾರ್ಯದರ್ಶಿ ಕನ್ನಂಡ ಸಂಪತ್ತು, ರಾಮೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಬೊಳ್ಳಜಿರ ಬಿ.ಅಯ್ಯಪ್ಪ, ಸಹ ಕಾರ್ಯದರ್ಶಿಗಳಾದ ಚಂದನ್ ನಂದರಬೆಟ್ಟು, ಗೋಪಿನಾಥ್, ಉಪಾಧ್ಯಕ್ಷರಾದ ಅಂಬೆಕಲ್ ನವೀನ್ ಕುಶಾಲಪ್ಪ, ಹೆಚ್.ಆರ್.ಜಗದೀಶ್, ಖಜಾಂಚಿ ಡಾ.ಮೋಹನ್ ಅಪ್ಪಾಜಿ, ಮಹಿಳಾ ಸಮಿತಿ ಅಧ್ಯಕ್ಷೆ ಭಾರತಿ ರಮೇಶ್, ಕಾರ್ಯಾಧ್ಯಕ್ಷೆ ಜಯಂತಿ ಶೆಟ್ಟಿ, ಆಹಾರ ಸಮಿತಿಯ ಅಧ್ಯಕ್ಷ ಹೆಚ್.ವಿ.ಸುಧಾಕರ್, ಮೆರವಣಿಗೆ ಸಮಿತಿ ಅಧ್ಯಕ್ಷ ಪರಮೇಶ್, ವೇದಿಕೆ ಸಮಿತಿ ಅಧ್ಯಕ್ಷ ಗುರುಪ್ರಸಾದ್, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಮಹೇಶ್, ಸ್ವಾಗತ ಸಮಿತಿ ಅಧ್ಯಕ್ಷ ವಿನೋದ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಕುಶಾಲನಗರದ ವ್ಯಾಪ್ತಿ ಸಾಧಾರಣ ಮಳೆ

ಕುಶಾಲನಗರ : ಪಟ್ಟಣ ಸೇರಿದಂತೆ ಸುತ್ತಮುತ್ತ ಗ್ರಾಮಗಳಲ್ಲಿ ಶನಿವಾರ ಸಂಜೆ ಸಾಧಾರಣ ಮಳೆ ಸುರಿಯಿತು. ಕೂಡಿಗೆ, ಹೆಬ್ಬಾಲೆ, ಚಿಕ್ಕತ್ತೂರು ಗ್ರಾಮಗಳಲ್ಲಿ ಜೋರಾಗಿ ಮಳೆ ಬಂದಿದೆ. ಇದರಿಂದ ರಸ್ತೆಯಲ್ಲಿ ಮಳೆ ನೀರು ಹರಿದಿದೆ. ಬೆಳಿಗ್ಗೆ ಯಿಂದ ತೀವ್ರವಾಗಿದ್ದ ಬಿಸಿಲಿನ ಧಗೆ ಮಧ್ಯಾಹ್ನ ನಂತರ ಮೋಡಕವಿದ ವಾತಾವರಣ ಇತ್ತು. ಸಂಜೆ ವೇಳೆ ಬಂದ ಸಾಧಾರಣ ಮಳೆಯಿಂದ ವಾತಾವರಣ ತಂಪಾಯಿತು.

ನಾಯಿಗಳ ದಾಳಿಗೊಳಗಾಗಿದ್ದ ಕಾಡು ಕುರಿಯನ್ನು ರಕ್ಷಿಸಿದ ಗ್ರಾಮಸ್ಥರು

ಮಡಿಕೇರಿ,ಮಾ.22– ಬೀದಿನಾಯಿಗಳ ದಾಳಿಯಿಂದ ಗಂಭೀರ ಗಾಯಗೊಂಡು ನರಳಾಡುತ್ತಿದ್ದ ಕಾಡು ಕುರಿಯೊಂದನ್ನು ಗ್ರಾಮಸ್ಥರು ರಕ್ಷಿಸಿ ಅರಣ್ಯ ಇಲಾಖೆಗೆ ಒಪ್ಪಿಸಿದ ಘಟನೆ ನಾಪೋಕ್ಲು ಬಳಿಯ ಚೆರಿಯಪರಂಬು ಗ್ರಾಮದಲ್ಲಿ ನಡೆದಿದೆ. ಚೆರಿಯಪರಂಬು ಗ್ರಾಮದ ಕಕ್ಕುಂದ ಕ್ಕಾಡು ವೆಂಕಟೇಶ್ವರ ದೇವಸ್ಥಾನಕ್ಕೆ ತೆರಳುವ ರಸ್ತೆ ಬದಿಯಲ್ಲಿ ಕಾಡು ಕುರಿಯೊಂದರ ಮೇಲೆ ಬೀದಿ ನಾಯಿಗಳು ದಾಳಿ ನಡೆಸುತ್ತಿರುವ ದೃಶ್ಯ ಕಂಡ ಗ್ರಾಮದ ನಿವಾಸಿ ಉಬೈಸ್ ಹಾಗೂ ಕುಟುಂಬ ಸದಸ್ಯರು, ಬೀದಿನಾಯಿಗಳ ದಾಳಿಯಿಂದ ಕಾಡು ಕುರಿಯನ್ನು ರಕ್ಷಿಸಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.




ಬೀದಿ ನಾಯಿಗಳ ದಾಳಿಯಿಂದ ಗಂಭೀರ ಗಾಯಗೊಂಡಿದ್ದ ಕಾಡು ಕುರಿಯನ್ನು ಗ್ರಾಮಸ್ಥರು ರಕ್ಷಿಸಿ, ಚಿಕಿತ್ಸೆ ಕೊಡಿಸಿದರು.

ಮಾಹಿತಿ ತಿಳಿದು ಸ್ಥಳಕ್ಕೆ ಧಾವಿಸಿದ ಅರಣ್ಯ ಇಲಾಖೆಯ ಗಸ್ತು ಅರಣ್ಯಪಾಲಕ ಶರತ್ ಹಾಗೂ ಅರಣ್ಯ ವೀಕ್ಷಕ ರಾಹುಲ್ ಅವರು ಬೀದಿನಾಯಿಗಳ ದಾಳಿಯಿಂದ ತೊಡೆಯ ಭಾಗಕ್ಕೆ ಗಂಭೀರ ಸ್ವರೂಪದ ಗಾಯಗಳಾಗಿ ನರಳಾಡುತ್ತಿದ್ದ ಕಾಡು ಕುರಿಯನ್ನು ನಾಪೋಕ್ಲು ಪಶು ಆಸ್ಪತ್ರೆಗೆ ದಾಖಲಿಸಿದರು. ಆಸ್ಪತ್ರೆಯಲ್ಲಿ ಪಶು ವೈದ್ಯಾಧಿಕಾರಿ ಡಾ.ಸಿ.ಪಿ. ಚೇತನ್ ಅವರ ಮಾರ್ಗದರ್ಶನದಂತೆ ನಾಪೋಕ್ಲು ಪಶು ಆಸ್ಪತ್ರೆಯ ಹಿರಿಯ ಪಶು ವೈದ್ಯಕೀಯ ಪರೀಕ್ಷಕ ಸುನಿಲ್ ಅವರ ನೇತೃತ್ವದಲ್ಲಿ ಕಾಡು ಕುರಿಗೆ ಚಿಕಿತ್ಸೆ ನೀಡಲಾಯಿತು. ಭಾಗಮಂಡಲ ವಲಯ ಅರಣ್ಯ ಇಲಾಖೆಯ ಆರ್‌ಎಫ್‌ಓ ರವೀಂದ್ರ ಅವರ ನಿರ್ದೇಶನದಂತೆ ಕಾಡು ಕುರಿಯನ್ನು ಕ್ಯಾಂಪ್‌ಗೆ ಕೊಂಡೊಯ್ದು ಹೆಚ್ಚಿನ ಚಿಕಿತ್ಸೆಯ ಬಳಿಕ ಆರೈಕೆ ಮಾಡಿ ಮತ್ತೆ ಕಾಡಿಗೆ ಬಿಡಲಾಗುವುದು ಎಂದು ಭಾಗಮಂಡಲ ವಲಯದ ಗಸ್ತು ಅರಣ್ಯ ಪಾಲಕ ಶರತ್ ಮಾಹಿತಿ ನೀಡಿದರು.

ಕಾಫಿ ತೋಟಗಳಲ್ಲಿ ಕಾಡಾನೆಗಳ ಬೀಡು

ಮಡಿಕೇರಿ,ಮಾ.22– ವಿರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮೈಲಾಪುರ, ತೂಬನಕೊಲ್ಲಿ, ಮಠ, ಹುಂಡಿ, ಬಾಡಗ ಬಾಣಂಗಾಲ, ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಡಿಗೋಡು, ಗುಹ್ಯ, ಬೀಟಿ ಕಾಡು ಸೇರಿದಂತೆ ಹಲವು ಗ್ರಾಮ ವ್ಯಾಪ್ತಿಯ ತೋಟಗಳಲ್ಲಿ 50ಕ್ಕೂ ಅಧಿಕ ಕಾಡಾನೆಗಳು ಬೀಡು ಬಿಟ್ಟಿವೆ.

ಕೆಲ ದಿನಗಳಿಂದ ಈ ಪ್ರದೇಶಗಳಲ್ಲಿ ಗಜಪಡೆಗಳು ರಾಜಾರೋಷವಾಗಿ ಸಂಚರಿಸುತ್ತಿದ್ದು, ಈ ಭಾಗದ ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ. ಕಾಡಾನೆಗಳ ಭೀತಿಯಿಂದ ಗ್ರಾಮಸ್ಥರು ಮನೆ ಬಿಟ್ಟು ಹೊರಗೆ ಬಾರದಂತಾಗಿದೆ. ಬಾಡಗ ಬಾಣಂಗಾಲ ಕಾಫಿ ತೋಟದಲ್ಲಿ 17 ಕಾಡಾನೆಗಳು ತೋಟದ ಕೆರೆಯಲ್ಲಿ ನೀರು ಕುಡಿದು ಕಾಫಿ ತೋಟದಲ್ಲೇ ಬೀಡು ಬಿಟ್ಟಿವೆ. ಕಾಡಾನೆಗಳ ಗುಂಪಿನಲ್ಲಿ ಮರಿ ಆನೆಗಳಿದ್ದು, ಕಾಡಾನೆಗಳ ಹಿಂಡು ಕಾಫಿ ಗಿಡಗಳನ್ನು ತುಳಿದು ನಾಶಪಡಿಸುತ್ತಿವೆ. ಇದರಿಂದ ಬೆಳೆಗಾರರಿಗೆ ಅಪಾರ ಪ್ರಮಾಣದಲ್ಲಿ ಬೆಳೆನಷ್ಟ ಸಂಭವಿಸುತ್ತಿದೆ. ಅರಣ್ಯ ಇಲಾಖೆ ಕಾಡಾನೆಗಳನ್ನು ಕಾಡಿಗಟ್ಟಿದರೂ ಸಹ ಮರಳಿ ತೋಟಕ್ಕೆ ಬರುತ್ತಿವೆ ಎಂದು ಬೆಳೆಗಾರರು, ಸಾರ್ವಜನಿಕರು ಅಳಲು ತೋಡಿಕೊಂಡಿದ್ದಾರೆ. ಕಾಡಾನೆಗಳ ಹಿಂಡನ್ನು ಅರಣ್ಯ ಇಲಾಖೆ ಕೂಡಲೇ ಕಾಡಿಗಟ್ಟಬೇಕು ಹಾಗೂ ಕಾಡಾನೆಗಳು ಕಾಫಿ ತೋಟಗಳಿಗೆ ಲಗ್ಗೆ ಇಡದಂತೆ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯ ಬೆಳೆಗಾರರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.



ವಿರಾಜಪೇಟೆ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಕಾಡಾನೆಗಳು ಬೀಡು ಬಿಟ್ಟಿವೆ.

ಮಾ.28, ಮುದ್ದಂಡ ಹಾಕಿ ಉತ್ಸವ ಉದ್ಘಾಟನೆ

ಮಡಿಕೇರಿ, ಮಾ.22– ಬೆಳ್ಳಿ ಹಬ್ಬದ ಸಂಭ್ರಮದಲ್ಲಿರುವ ಕೊಡವ ಕುಟುಂಬ ತಂಡಗಳ ನಡುವಿನ ಹಾಕಿ ಹಬ್ಬದ 'ಮುದ್ದಂಡ ಹಾಕಿ ಉತ್ಸವ್' ಮಾ.28 ರಂದು ಫೀ.ಮಾ. ಕೆ.ಎಂ.ಕಾರ್ಯಪ್ಪ ಕಾಲೇಜು ಮೈದಾನದಲ್ಲಿ ಉದ್ಘಾಟನೆಗೊಳ್ಳಲಿದೆ.

ಅಂದು ಬೆಳಿಗ್ಗೆ 9.45ಗಂಟೆಗೆ ನಗರದ ಜನರಲ್ ತಿಮ್ಮಯ್ಯ ವೃತ್ತದಿಂದ ಫೀ.ಮಾ. ಕಾರ್ಯಪ್ಪ ಕಾಲೇಜು ಮೈದಾನದವರೆಗೆ ಕೊಡವ ಸಾಂಪ್ರದಾಯಿಕ ಮತ್ತು ಸಾಂಸ್ಕೃತಿಕ ಮೆರವಣಿಗೆ ನಡೆಯಲಿದ್ದು, ನಂತರ ಮೈದಾನದಲ್ಲಿ ಧ್ವಜಾರೋಹಣ ನೆರವೇರಿಸಲಾಗುವುದು. ಸಭಾ ಕಾರ್ಯಕ್ರಮವನ್ನು ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು, ಮಡಿಕೇರಿ ಶಾಸಕ ಡಾ.ಮಂತರ್ ಗೌಡ, ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಅರ್ಜುನ ಪ್ರಶಸ್ತಿ ವಿಜೇತ ಒಲಂಪಿಯನ್ ಅಂಜಪರವಂಡ ಬಿ.ಸುಬ್ಬಯ್ಯ, ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ, ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ, ಅತಿಥಿಗಳಾಗಿ ಜಿಲ್ಲಾಧಿಕಾರಿ ವೆಂಕಟರಾಜಾ, ಎಸ್‌ಪಿ ಕೆ.ರಾಮರಾಜನ್, ಕೊಡಗು ವಿವಿ ಉಪಕುಲಪತಿ ಅಶೋಕ್ ಸಂಗಪ್ಪ ಆಲೂರ ಇತರರು ಉಪಸ್ಥಿತರಿರುವರು.

ಕರ್ನಾಟಕ ಬಂದ್‌ಗೆ ಸ್ಪಂದಿಸದ ಕೊಡಗು ಜನತೆ



ಬೆಳಗಾವಿಯಲ್ಲಿನ ಮರಾಠಿ ಸಂಘಟನೆ ಎಂಇಎಸ್ ಪುಂಡಾಟಿಕೆಯನ್ನು ಖಂಡಿಸಿ ಕನ್ನಡ ಪರ ಸಂಘಟನೆಗಳು ಕರೆದಿದ್ದ ಕರ್ನಾಟಕ ಬಂದ್‌ಗೆ ಕೊಡಗಿನಲ್ಲಿ ಸ್ಪಂದನೆ ವ್ಯಕ್ತವಾಗಲಿಲ್ಲ.

ಕರ್ನಾಟಕ ಬಂದ್‌ಗೆ ಓಗೊಡದ ಗಡಿಜಿಲ್ಲೆ

ಚಾಮರಾಜನಗರ,ಮಾ.22–ಬೆಳಗಾವಿ ಜಿಲ್ಲೆಯ ಗಡಿ ಭಾಗದಲ್ಲಿ ಹಾಗೂ ಮಹಾರಾಷ್ಟ್ರದಲ್ಲಿ ಕನ್ನಡಿಗರ ವಿರುದ್ಧ ನಡೆಯುತ್ತಿರುವ ಮರಾಠಿಗರ ಕೆಲವೊಂದು ಸಂಘಟನೆಗಳ ಪುಂಡಾಟಿಕೆ ಖಂಡಿಸಿ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಶನಿವಾರ ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಲಿಲ್ಲ.

ಜಿಲ್ಲಾ ಕೇಂದ್ರವಾದ ಚಾಮರಾಜನಗರ ಸೇರಿದಂತೆ ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ತಾಲೂಕಿನಲ್ಲಿ ಜನಜೀವನ ಎಂದಿನಂತೆಯೇ ಸಹಜವಾಗಿತ್ತು. ಆಟೋ, ಬಸ್, ಟ್ಯಾಕ್ಸಿ ಸಂಚಾರ ಸಹ ಮಾಮೂಲಿನಂತೆಯೇ ಇದ್ದವು. ಅಂಗಡಿ, ಮುಂಗಟ್ಟುಗಳು, ಹೋಟೆಲ್, ಪೆಟ್ರೋಲ್ ಬಂಕ್, ಶಾಲಾ– ಕಾಲೇಜುಗಳು, ಸರ್ಕಾರಿ ಹಾಗೂ ಖಾಸಗಿ ಕಚೇರಿಗಳು ಎಂದಿನಂತೆ ಕಾರ್ಯನಿರ್ವಹಿಸಿದವು.

ಜಿಲ್ಲೆಯಲ್ಲಿ ಯಾವುದೇ ಸಂಘಟನೆಯೂ ಬಂದ್‌ಗೆ ಬೆಂಬಲ ಸೂಚಿಸಿ ಎಂದು ಹೇಳಿಕೆ ನೀಡಿರಲಿಲ್ಲ. ಕೆಲವು ಕನ್ನಡಪರ ಸಂಘಟನೆಗಳು ಮಾತ್ರ ಪ್ರತಿಭಟನೆಯನ್ನು ನಡೆಸಿ, ಮಹಾರಾಷ್ಟ್ರ ಸರ್ಕಾರ ಹಾಗೂ ಮಹಾರಾಷ್ಟ್ರದ ಕೆಲವೊಂದು ಸಂಘಟನೆಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಹೀಗಾಗಿ, ಜಿಲ್ಲೆಯಲ್ಲಿ ಬಂದ್‌ನಿಂದ ಯಾವುದೇ ಪರಿಣಾಮಗಳು ಬೀರಲಿಲ್ಲ.



ಕರ್ನಾಟಕ ಬಂದ್ ಬೆಂಬಲಿಸಿ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಪ್ರತಿಭಟಿಸಿದರು.

ಕರ್ನಾಟಕ ಸೇನಾಪಡೆ ಪ್ರತಿಭಟನೆ: ಎಂಇಎಸ್ ಸಂಘಟನೆಯನ್ನು ರಾಜ್ಯದಲ್ಲಿ ನಿಷೇಧಿಸುವಂತೆ ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಹಾಗೂ ವಿವಿಧ ಕನ್ನಡಪರ ಸಂಘಟನೆಗಳು ಕರೆ ನೀಡಿದ ಕರ್ನಾಟಕ ಬಂದ್ ಬೆಂಬಲಿಸಿ ಕರ್ನಾಟಕ ಸೇನಾಪಡೆಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ನಗರದ ಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಎಂಇಎಸ್ ಭಿತ್ತಿ ಪತ್ರಗಳಿಗೆ ಟೊಮೆಟೊದಿಂದ ಒಡೆದು, ಎಂಇಎಸ್ ಸಂಘಟನೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸೇನಾಪಡೆಯ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ಕನ್ನಡಿಗರ ಮೇಲೆ ನಿರಂತರ ದೌರ್ಜನ್ಯ, ದಬ್ಬಾಳಿಕೆ ನಡೆಸುತ್ತಿರುವ ಎಂಇಎಸ್ ಸಂಘಟನೆಯನ್ನು ರಾಜ್ಯದಲ್ಲಿ ನಿಷೇಧಿಸಬೇಕು. ಮರಾಠಿ ಪುಂಡರು ಬೆಳಗಾವಿ ಗಡಿಭಾಗದಲ್ಲಿ ಕರ್ನಾಟಕದ ಬಸ್ ನಿರ್ವಾಹಕನ ಮೇಲೆ ಹಲ್ಲೆ ಮಾಡಿರುವುದು ಖಂಡನೀಯವಾದದ್ದು ಎಂದರು.

ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ಕೈಗೊಂಡು ಎಂಇಎಸ್ ಸಂಘಟನೆ ನಿಷೇಧಿಸಬೇಕು. ಅದನ್ನು ಬಿಟ್ಟು ರಾಜಕಾರಣಕ್ಕಾಗಿ ಕಣ್ಣೊರೆಸುವ ತಂತ್ರ ಮಾಡುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ನಿಜಧ್ವನಿ ಗೋವಿಂದರಾಜು, ಆಟೋ ಲಿಂಗರಾಜು, ತಾಂಡವಮೂರ್ತಿ, ರಾಚಪ್ಪ, ವೀರಭದ್ರ, ಮುತ್ತಿಗೆ ಗೋವಿಂದರಾಜು, ನಂಜುಂಡಶೆಟ್ಟಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಬಂದ್‌ಗೆ ಸಾರ್ವಜನಿಕರ ಆಕ್ರೋಶ : ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್, ಶನಿವಾರ ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಜಿಲ್ಲೆಯ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಕನ್ನಡ ನಾಡು, ನುಡಿ ವಿಚಾರವಾಗಿ ಬಂದ್ ಮಾಡುವುದಕ್ಕೆ ನಮ್ಮ ತಕರಾರು ಇಲ್ಲ. ಆದರೆ, ಪ್ರಸ್ತುತ ಎಸ್‌ಎಸ್‌ಎಲ್‌ಸಿ ಸೇರಿದಂತೆ ಎಲ್ಲಾ ಶಾಲೆಗಳಲ್ಲಿ ಮಕ್ಕಳಿಗೆ ಪರೀಕ್ಷೆ ನಡೆಯುತ್ತಿದ್ದು, ಬಂದ್‌ನಿಂದ ಮಕ್ಕಳಿಗೆ ತೊಂದರೆಯಾಗುತ್ತಿದೆ. ಗ್ರಾಮೀಣ ಪ್ರದೇಶದ ಮಕ್ಕಳು ನಿಗದಿತ ಸಮಯದಲ್ಲಿ ಶಾಲೆಗಳಿಗೆ ತೆರಳಲು ತೊಂದರೆಯಾಗುತ್ತದೆ. ಹೀಗಾಗಿ ಬಂದ್ ಅನ್ನು ಪರೀಕ್ಷೆಗಳು ಮುಕ್ತಾಯವಾದ ಬಳಿಕ ನಡೆಸಬೇಕಿತ್ತು ಎಂದು ಅಸಮಾಧಾನದ ಮಾತುಗಳು ಕೇಳಿ ಬರುತ್ತಿದೆ.

ಚಾಮರಾಜನಗರ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ



ಚಾಮರಾಜನಗರ ಸ್ವಚ್ಚತಾ ಅಭಿಯಾನ ಕಾರ್ಯಕ್ರಮಕ್ಕೆ ಶಾಸಕ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಚಾಲನೆ ನೀಡಿದರು.

ಚಾಮರಾಜನಗರ, ಮಾ.22 – ಚೆಲುವ ಚಾಮರಾಜನಗರ ಸ್ವಚ್ಛತಾ ಅಭಿಯಾನ ಕಾರ್ಯಕ್ರಮಕ್ಕೆ ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ನಗರದಲ್ಲಿ ಇಂದು ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ ಸೇರಿದಂತೆ ಪಟ್ಟಣದ ಹಲವು ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ನಗರದ ಸಂತೇಮರಹಳ್ಳಿ ವೃತ್ತದಲ್ಲಿಂದು ಹಮ್ಮಿಕೊಳ್ಳಲಾಗಿದ್ದ ಸ್ವಚ್ಛತಾ ಅಭಿಯಾನಕ್ಕೆ ಶಾಸಕರು ಹಸಿರು ನಿಶಾನೆ ತೋರಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಪಟ್ಟಣದ ನಾಲ್ಕೂ ಕಡೆಯು ಅಭಿವೃದ್ಧಿ ಹೊಂದುತ್ತಿದೆ. ಮುಖ್ಯವಾಗಿ ಪಟ್ಟಣದ ಜನರಿಗೆ ಸ್ವಚ್ಛತೆಯ ಬಗ್ಗೆ ಜಾಗೃತಿ ಅಗತ್ಯವಾಗಿದೆ. ಪಟ್ಟಣದ ಸಮಗ್ರ ಅಭಿವೃದ್ಧಿಗಾಗಿ 144 ಕೋಟಿ ರೂ. ಅನುದಾನದ ಅವಶ್ಯವಿದೆ. ಸ್ವಚ್ಛತೆಗೆ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳ ಸಹಕಾರ ಬೇಕೆಂದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಸ್ವಚ್ಛತೆ ಎನ್ನುವುದು ನಗರಸಭೆಯ ಕೆಲಸ ಮಾತ್ರವಲ್ಲ. ಈ ಕಾರ್ಯದಲ್ಲಿ ಎಲ್ಲರ ಸಹಭಾಗಿತ್ವ ಅಗತ್ಯವಾಗಿದೆ. ಮುಂದಿನ ವರ್ಷದೊಳಗೆ ಸ್ವಚ್ಛ, ಸುಂದರ ಪಟ್ಟಣವಾಗುವ ನಿಟ್ಟಿನಲ್ಲಿ ಎಲ್ಲಾ 31 ವಾರ್ಡ್‌ಗಳಲ್ಲಿಯೂ ಪ್ರತಿವಾರ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ ಎಂದರು.

ನಗರಸಭಾ ಅಧ್ಯಕ್ಷರಾದ ಎಸ್. ಸುರೇಶ್, ಉಪಾಧ್ಯಕ್ಷರಾದ ಮಮತ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭೆ ಸದಸ್ಯರಾದ ಕುಮುದ, ಬಸವಣ್ಣ, ಚಂದ್ರಶೇಖರ್, ಚಿನ್ನಮ್ಮ, ಮುಂಜುನಾಥ್, ಶಿವರಾಜು, ಪೌರಾಯುಕ್ತ ಎಸ್.ವಿ. ರಾಮದಾಸ್, ಪಟ್ಟಣದ ವಿವಿಧ ಸಂಘಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಸ್ವಚ್ಛತಾ ಅಭಿಯಾನದಲ್ಲಿ ಇದ್ದರು.

ನಾಡಮೇಗಲಮ್ಮ, ಮಾರಮ್ಮನವರ ಪ್ರಥಮ ಕೊಂಡೋತ್ಸವ: ಸೌದೆಗಳ ಅದ್ದೂರಿ ಮೆರವಣಿಗೆ

ಯಳಂದೂರು,ಮಾ.22–ಪಟ್ಟಣದ ಬಳೇಪೇಟೆಯ ಅಂಬೇಡ್ಕರ್ ಬಡಾವಣೆಯಲ್ಲಿ ಏ.1 ರಂದು ನಡೆಯಲಿರುವ ನಾಡಮೇಗಲಮ್ಮ ಹಾಗೂ ಮಾರಮ್ಮನವರ ಕೊಂಡೋತ್ಸವ ನಿಮಿತ್ತ ಶುಕ್ರವಾರ ಸೌದೆಯನ್ನು ಅದ್ದೂರಿಯಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಕೊಂಡೊಯ್ಯಲಾಯಿತು.

ತಾಲೂಕಿನ ಕಂದಹಳ್ಳಿ ಮಹದೇಶ್ವರ ದೇಗುಲದ ಬಳಿಯಲ್ಲಿ ಪೂಜೆ ಸಲ್ಲಿಸಿ ಅಲಂಕೃತ ಎತ್ತಿನಗಾಡಿಗಳು, ಟ್ರಾಕ್ಟರ್, ಲಾರಿ, ಗೂಡ್ಸ್ ಆಟೋಗಳಲ್ಲಿ ಮಂಗಳ ವಾದ್ಯ ಸಮೇತ ಮೆರವಣಿಗೆಯಲ್ಲಿ ಸೌದೆಗಳನ್ನು ಕೊಂಡೊಯ್ಯಲಾಯಿತು.



ಯಳಂದೂರು ಪಟ್ಟಣದ ಬಳೇಪೇಟೆಯಲ್ಲಿ ನಡೆಯಲಿರುವ ಕೊಂಡೋತ್ಸವಕ್ಕೆ ಸೌದೆಗಳನ್ನು ಅಲಂಕೃತ ಎತ್ತಿನಗಾಡಿಗಳ ಮೂಲಕ ಕೊಂಡೊಯ್ಯಲಾಯಿತು.

ಇದೇ ಪ್ರಥಮ ಬಾರಿಗೆ ಇಲ್ಲಿ ಕೊಂಡೋತ್ಸವವನ್ನು ಆಚರಿಸಲು ತೀರ್ಮಾನಿಸಲಾಗಿದ್ದು ಇದಕ್ಕಾಗಿ ಈಗಾಗಲೇ ಭರದ ಸಿದ್ಧತೆಗಳು ನಡೆಯುತ್ತಿವೆ.

ಗಾಂಧೀಜಿ ಕಂಡ ಕನಸು ನನಸಾಗಬೇಕಾದರೆ ಗ್ರಾಮಗಳು ಉದ್ಧಾರವಾಗಬೇಕು: ಸುತ್ತೂರು ಶ್ರೀಗಳು



ಗುಂಡ್ಲುಪೇಟೆ ತಾಲೂಕಿನ ಬೆರಟಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಧಾರ್ಮಿಕ ಸಭೆಯನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಗುಂಡ್ಲುಪೇಟೆ,ಮಾ.22– ಮಹಾತ್ಮಗಾಂಧೀಜಿ ಅವರು ಕಂಡ ಕನಸು ನನಸಾಗಬೇಕಾದರೆ ಗ್ರಾಮಗಳು ಉದ್ಧಾರವಾಗಬೇಕು ಎಂದು ಸುತ್ತೂರು ಮಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದ್ದಾರೆ


ತಾಲೂಕಿನ ಬೆರಟಹಳ್ಳಿ ಗ್ರಾಮದಲ್ಲಿ ಮಾರಮ್ಮನ ದೇವಾಲಯ ಪ್ರಾರಂಭೋತ್ಸವ ಹಾಗೂ ಪ್ರತಿಷ್ಠಾಪನೆ ಕಾರ್ಯಕ್ರಮದ ಅಂಗವಾಗಿ ಸೋಮವಾರ ಏರ್ಪಡಿಸಿದ್ದ ಧಾರ್ಮಿಕ ಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಗ್ರಾಮಗಳಲ್ಲಿ ಕೃಷಿ ಸೇರಿದಂತೆ ಇನ್ನಿತರ ಕಾಯಕ ಚಟುವಟಿಕೆಗಳು ಸಮರ್ಪಕವಾಗಿ ನಡೆದರೆ ಅಭಿವೃದ್ಧಿ ಆಗುತ್ತದೆ. ಇದರಿಂದ ದೇಶವೂ ಅಭಿವೃದ್ಧಿ ಕಾಣುತ್ತದೆ. ಹಳ್ಳಿಯ ಜನರು ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುವುದನ್ನು ಬಿಟ್ಟು, ಅಲ್ಲಿನ ಜನರೇ ಬದುಕಲು ಬೇಕಾದ ವಾತಾವರಣ ಈಗಲೂ ಇದೆ. ಆದ್ದರಿಂದ ಪಟ್ಟಣಕ್ಕೆ ವಲಸೆ ಹೋಗಿರುವವರು ಗ್ರಾಮಗಳಿಗೆ ಮರಳುವಂತೆ ಮಾಡಬೇಕು. ಸರ್ಕಾರಗಳು ನೀಡುವ ಸೌಲಭ್ಯಗಳನ್ನು ಬಳಸಿಕೊಂಡು ಬೆಳವಣಿಗೆ ಹೊಂದಬೇಕು ಎಂದು ಹೇಳಿದರು.

ಶಾಸಕ ಎಚ್.ಎಂ.ಗಣೇಶ ಪ್ರಸಾದ್ ಮಾತನಾಡಿ, ಜಗತ್ತಿನಲ್ಲಿ ಪ್ರಸ್ತುತ ಹವಾಮಾನ ವೈಪರೀತ್ಯಗಳಿಂದ ತಾಪಮಾನ ಏರಿಕೆಯಾಗಿ ಮನುಷ್ಯನ ಜೀವನದ ಮೇಲೆ ಪ್ರಭಾವ ಬೀರುತ್ತಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಆಕ್ಸಿಜನ್ ಬ್ಯಾಂಕುಗಳನ್ನು ಸ್ಥಾಪನೆ ಮಾಡಿದ್ದಾರೆ. ಇಂತಹ ಪರಿಸ್ಥಿತಿ ಹಳ್ಳಿಗಳಿಗೂ ಬಾರದೆ ಇರಲು ಜಾಗವಿರುವ ಕಡೆಯಲ್ಲಿ ಗಿಡ ನೆಡುವುದೊಂದೆ ಪರಿಹಾರ ಎಂದರು.

ಸಭೆಯಲ್ಲಿ ಸೋಮಹಳ್ಳಿ ಮಠದ ಸಿದ್ದಮಲ್ಲಪ್ಪ ಸ್ವಾಮೀಜಿ, ಪಡುಗೂರು ಮಠದ ಶಿವಲಿಂಗೇಂದ್ರ ಸ್ವಾಮೀಜಿ, ಇಮ್ಮಡಿ ಉದ್ದಾನ ಸ್ವಾಮೀಜಿ, ಸಿದ್ದಗಂಗಾ ಮಠದ ಕಿರಿಯ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ, ಕನಕಪುರ ದೇಗುಲ ಮಠದ ಕಿರಿಯ ಶ್ರೀ ಚನ್ನಬಸವ ಸ್ವಾಮೀಜಿ, ಮರಿಯಾಲ ಮಠದ ಮುರುಘಾರಾಜೇಂದ್ರ ಸ್ವಾಮೀಜಿ, ಹರವೆ ಮಠದ ಸರ್ಪಭೂಷಣ ಸ್ವಾಮೀಜಿ,ರಾಮಾಪುರ ಮಠದ ಬಸವಣ್ಣ ಸ್ವಾಮೀಜಿ, ನಿವೃತ್ತ ಪ್ರಾಧ್ಯಾಪಕ ಡಿ.ಎಸ್.ಸದಾಶಿವಮೂರ್ತಿ, ಕಾಡಾ ಮಾಜಿ ಅಧ್ಯಕ್ಷ ಎಚ್.ಎಸ್. ನಂಜಪ್ಪ, ಚಾಮುಲ್ ನಿರ್ದೇಶಕ ಎಂ.ಪಿ.ಸುನಿಲ್ ಮತ್ತಿತರರು ಇದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮಾ.22– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದಚಾಮರಾಜನಗರ ಉಪ ವಿಭಾಗ ವ್ಯಾಪ್ತಿಯ ಪಣ್ಯದಹುಂಡಿ ಮಾರ್ಗದಲ್ಲಿ 4ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಮಾ.23 ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.



ಬದನಗುಪ್ಪೆ, ಪಣ್ಯದಹುಂಡಿ, ಬೆಂಡರವಾಡಿ, ಕೆಲ್ಲಂಬಳ್ಳಿ ಎನ್.ಜೆ.ವೈ ಇಂಡಸ್ಟ್ರೀಯಲ್ ಏರಿಯಾ, ಕೆ.ಇ.ಡಿ.ಪಿ. 10 ಮತ್ತು 11, ಮುತ್ತಿಗೆ, ಹೆಗ್ಗೊಠಾರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ 1912ಗೆ ಕರೆ ಮಾಡುವಂತೆ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ ಸ್ಥಳ ಬದಲಾವಣೆ

ಯಳಂದೂರು, ಮಾ.22–ಪಟ್ಟಣದ ಬಳೇಪೇಟೆಯಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ಚುನಾವಣೆ ಸ್ಥಳವನ್ನು ಬದಲಾವಣೆ ಮಾಡಲಾಗಿದೆ.

ಈ ಚುನಾವಣೆಯು ಮಾ.23ರ ಭಾನುವಾರ ನಡೆಯಲಿದೆ. ಇದಕ್ಕಾಗಿ ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಚುನಾವಣೆ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ ಆ ದಿನ ಆದರ್ಶ ವಿದ್ಯಾಲಯದ ಪರೀಕ್ಷೆಗಳು ನಡೆಯಲಿದ್ದು, ಕೊಠಡಿಯನ್ನು ಕೊಡಲು ಸಾಧ್ಯವಿಲ್ಲ ಎಂದು ಇಲ್ಲಿನ ಉಪಪ್ರಾಂಶುಪಾಲರು ಮಾಹಿತಿ ನೀಡಿದ್ದಾರೆ. ಹಾಗಾಗಿ ಈ ಪರೀಕ್ಷೆಯನ್ನು ಇದರ ಎದುರಿಗಿರುವ ಸಿದ್ಧಾರ್ಥ ಪ್ರೌಢಶಾಲೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಚುನಾವಣಾಧಿಕಾರಿ ಸುಭಾಷಿಣಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿರುಸಿನ ಪ್ರಚಾರ : ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಭಾನುವಾರ ನಡೆಯಲಿರುವ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಸಾಲಗಾರರ ಕ್ಷೇತ್ರದಿಂದ ಸ್ಪರ್ಧಿಸಿರುವ ವೈ.ಕೆ. ಮೋಳೆ ಗ್ರಾಮದ ವಿ.ನಾಗರಾಜು ಹಾಗೂ ಅಂಬಳೆ ಗ್ರಾಮದ ಸಿದ್ಧನಾಯಕರವರು ಕ್ಷೇತ್ರ ವ್ಯಾಪ್ತಿಯಲ್ಲಿ ಶುಕ್ರವಾರ ಚುನಾವಣಾ ಪ್ರಚಾರ ನಡೆಸಿದರು.

ಕಸಬಾ ಕ್ಷೇತ್ರ ವ್ಯಾಪ್ತಿಗೆ ಯಳಂದೂರು ಪಟ್ಟಣ, ಯರಿಯೂರು, ದುಗ್ಗಹಟ್ಟಿ, ಹೊನ್ನೂರು, ಮೆಳ್ಳಹಳ್ಳಿ, ಅಂಬಳೆ, ಚಂಗಚಹಳ್ಳಿ. ವೈ.ಕೆ.ಮೋಳೆ ಹಾಗೂ ಗುಂಬಳ್ಳಿ ಗ್ರಾಮಗಳಲ್ಲಿ ಸಂಘದ ಸದಸ್ಯರಿಗೆ ತಮ್ಮ ಪರವಾಗಿ ತಮ್ಮ ಕ್ರಮ ಸಂಖ್ಯೆ 5 ರಲ್ಲಿ ಹಣ್ಣಿನಬುಟ್ಟಿಗೆ ಮತ ನೀಡುವಂತೆ ತಮ್ಮ ಬೆಂಬಲಿಗರೊಂದಿಗೆ ಪ್ರಚಾರ ನಡೆಸಿದರು.

ತಾಪಂನ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ವೈ.ಕೆ.ಮೋಳೆ ನಾಗರಾಜು, ಶಿವನಂಜಶೆಟ್ಟಿ, ಸ್ವಾಮಿ, ಹಾಲಿನ ಮಹದೇವಶೆಟ್ಟಿ ಸಿ.ಶಾಂತರಾಜು ಸೇರಿದಂತೆ ಅನೇಕರು ಇದ್ದರು.

● ಎಸ್.ಬಿ.ದೇವರಾಜ

ಯಾರೂ ಈಗ ಶರಣರ ಸಂದೇಶ ಪಾಲಿಸಲು ಸಿದ್ಧರಿಲ್ಲ!



ಪ್ರೊ.ಓ.ಎಲ್.ನಾಗಭೂಷಣಸ್ವಾಮಿ

ಮೈಸೂರಲ್ಲಿ ಭಾನುವಾರ(ಮಾ.23) ಶರಣ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ನಾಡಿನ ಹಿರಿಯ ಸಾಹಿತಿ–ಚಿಂತಕ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಸಮ್ಮೇಳನಾಧ್ಯಕ್ಷರು. ಬೆಂಗಳೂರು ಸಮೀಪದ ಹೊಸಕೋಟೆ ಮೂಲದವರಾದ ಇವರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಹಾಗೂ ಇಂಗ್ಲಿಷ್ ಎಂ.ಎ ಪದವಿ ಪಡೆದು, ಮೈಸೂರು, ಶಿವಮೊಗ್ಗ, ಶಿಕಾರಿಪುರ, ಆನೆಕಲ್ ಸೇರಿದಂತೆ ವಿವಿಧೆಡೆ ಪದವಿ ಕಾಲೇಜುಗಳಲ್ಲಿ ಬೋಧನೆ ಮಾಡಿದವರು. ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದಲ್ಲೂ ಸೇವೆ ಸಲ್ಲಿಸಿದ್ದಾರೆ. ಕವನ ಸಂಕಲನ, ಪ್ರವಾಸ ಕಥನ, ಸಾಹಿತ್ಯ ವಿಮರ್ಶೆ, ಅನುವಾದ, ಅಂಕಣ ಬರಹ... ಹೀಗೆ ವಿವಿಧ ಸಾಹಿತ್ಯ ಪ್ರಾಕಾರಗಳಲ್ಲೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಕನ್ನಡದ ಹಲವು ಸಾಹಿತಿಗಳ ಪುಸ್ತಕಗಳನ್ನು ಇಂಗ್ಲಿಷ್‌ಗೆ ಅನುವಾದಿಸುವ ಮೂಲಕ ಕನ್ನಡ ಸಾಹಿತ್ಯದ ಕಂಪನ್ನು ಪಸರಿಸಿದ್ದಾರೆ. ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಹಲವು ಸಂಪಾದಿತ ಕೃತಿಗಳನ್ನೂ ಕೊಡುಗೆಯಾಗಿ ನೀಡಿದ್ದಾರೆ. ಹೀಗೆ ಕನ್ನಡಕ್ಕಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಅವರು, ಶರಣ ಸಾಹಿತ್ಯದ ಪ್ರಸ್ತುತತೆ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಶ್ರೀಯುತರು ಮಹತ್ವದ ವಿಚಾರಗಳನ್ನು ಹಂಚಿಕೊಂಡಿದ್ದಾರೆ.

ಮೈಸೂರು ಮಿತ್ರ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಉದ್ದೇಶ ಸಾಕಾರವಾಗುತ್ತಿದೆಯೇ?

ನಾಗಭೂಷಣಸ್ವಾಮಿ: ಅಂದಾಜು 1980ರಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಸ್ಥಾಪನೆ ಆಯಿತು. ಅದರ ಮುಖ್ಯ ಉದ್ದೇಶ; ವಚನಗಳೂ ಸೇರಿದಂತೆ ಶಿವಶರಣರ ಚಿಂತನೆಗಳು ಹಾಗೂ ವಿಚಾರಗಳನ್ನು ಪ್ರಚಾರ ಮಾಡುವುದು. ಜೊತೆಗೆ ಪುಸ್ತಕಗಳನ್ನು ಪ್ರಕಟಿಸುವುದು. ಈ ಕೆಲಸ ನಡೆಯುತ್ತಾ ಬಂದಿದೆ. ಕಳೆದ ಐವತ್ತು ವರ್ಷಗಳಲ್ಲಿ ಹಲವು ಪ್ರಮುಖ ಪ್ರಕಟಣೆಗಳು ಹೊರ ಬಂದಿವೆ. ವಿಚಾರ ಸಂಕಿರಣಗಳನ್ನೂ ನಡೆಸಲಾಗಿದೆ. ಸಮ್ಮೇಳನದ ಉದ್ದೇಶವೂ ಇದೇ ಆಗಿದೆ.

ಮಿತ್ರ: ಒಂದೆಡೆ ಜಾತ್ಯಾತೀತತೆ, ಸಾಮರಸ್ಯದ ಭಾಷಣ; ಮತ್ತೊಂದೆಡೆ ಎಲ್ಲವೂ ಜಾತಿ ಆಧಾರಿತವಾಗಿಯೇ ನಡೆಯುತ್ತಿರುವ ಕಾಲಘಟ್ಟದಲ್ಲಿ ಶರಣ ಸಾಹಿತ್ಯದ ಪ್ರಸ್ತುತತೆ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ನಾಗಭೂಷಣಸ್ವಾಮಿ: ಶರಣರು ಹಲವು ಅಂಶಗಳನ್ನು ನಿರಾಕರಿಸಿದರು. ಹೆಣ್ಣು ಮಕ್ಕಳು ಮುಟ್ಟಾದಾಗ, ಹುಟ್ಟು–ಸಾವಿನ ಸಂದರ್ಭ ಸೂತಕ ಎನ್ನುವುದನ್ನು ನಿರಾಕರಿಸಿದರು. ಗ್ರಹಣದಲ್ಲಿ ಆಹಾರ ಸೇವನೆಗೆ ನಿರ್ಬಂಧ, ಉಪವಾಸ ವ್ರತ, ತೀರ್ಥಯಾತ್ರೆ, ದೇವಸ್ಥಾನಗಳಿಗೆ ಹೋಗಿಯೇ ಪೂಜೆ ಮಾಡಿಸಬೇಕೆಂಬ ಆಚರಣೆಗಳನ್ನು ನಿರಾಕರಿಸಿದರು. ಆದ್ದರಿಂದ ಅದು ಆ ಕಾಲ ಘಟ್ಟದಲ್ಲಿ ಕ್ರಾಂತಿಕಾರಿ ಚಲನೆಯಾಗಿತ್ತು. ಆದರೆ ಅದನ್ನು ಜನ ಪಾಲಿಸಲಿಲ್ಲ ಎಂದಾದರೆ ಅದು ಬೋಧನೆಯ ತಪ್ಪಲ್ಲ. ಎಲ್ಲಾ ಧರ್ಮಗಳು ಪ್ರಾಮಾಣಿಕವಾಗಿ ಇರಬೇಕೆಂದು ಹೇಳುತ್ತವೆ. ಆದರೆ ಅದನ್ನು ಹೇಳುವವರೂ ಸೇರಿದಂತೆ ಯಾರೂ ಪ್ರಾಮಾಣಿಕರಾಗದಿದ್ದರೆ ಅದು ಧರ್ಮಗಳ ತಪ್ಪಲ್ಲ. ಬೋಧನೆ ಪ್ರಾಚೀನ ಕಾಲದಿಂದಲೂ ಇದೆ. ಆದ್ದರಿಂದ ಶರಣ ಸಾಹಿತ್ಯದ ಪ್ರಸ್ತುತತೆ ನಮಗೇ ಬಿಟ್ಟಿದ್ದಾಗಿದೆ. ಆದರೆ **ನಮಗೆ ಲಾಭ ಹಾಗೂ ಅಧಿಕಾರ ಸಿಗುವಂತದನ್ನು ಪ್ರಚಾರಕ್ಕೆ ತರುತ್ತೇವೆಯೇ ಹೊರತು ಜೀವನಕ್ಕೆ ಒಳ್ಳೆಯದಾಗಿರುವುದು ಮುಖ್ಯ ಅನ್ನಿಸುವುದಿಲ್ಲ.** ಅನುಷ್ಠಾನಕ್ಕೆ ತರದಿರುವುದು ನಮ್ಮ ತಪ್ಪು. ದಯೆ–ಕರುಣೆ ಇದ್ದರೆ ಜಾತಿ ಬಡಿದಾಟ ಹಾಗೂ ದ್ವೇಷ ಇರುವುದೇ ಇಲ್ಲ. ನಾವು ಹೇಗಿದ್ದೇವೆ ಎನ್ನುವುದಕ್ಕೆ ನಾವೇ ಕಾರಣವೇ ಹೊರತು ಮತ್ತೊಬ್ಬರಲ್ಲ.

ಮಿತ್ರ: ಪ್ರತ್ಯೇಕ ಲಿಂಗಾಯತ ಧರ್ಮ ವಿಚಾರದಲ್ಲಿನ ಪರ–ವಿರೋಧ ಜಂಜಾಟದಿಂದ ಶರಣ ಸಾಹಿತ್ಯದ ಮಹತ್ವಕ್ಕೆ ಧಕ್ಕೆ ಆಗುತ್ತಿದೆಯೇ?.

ನಾಗಭೂಷಣಸ್ವಾಮಿ: ಶರಣ ಸಾಹಿತ್ಯ ಹನ್ನೆರಡನೇ ಶತಮಾನದಲ್ಲಿ ಮೂರ್ನಾಲ್ಕು ದಶಕಗಳು ಹೆಚ್ಚು ಸಕ್ರಿಯವಾಗಿತ್ತು. ಆ ಅವಧಿಯಲ್ಲಿ ಯಜ್ಞ–ಯಾಗ, ಕರ್ಮ ಸಿದ್ಧಾಂತ, ಮಾಯೆ ಸೇರಿದಂತೆ ಸಾಂಪ್ರದಾಯಿಕವಾದ ಬಹಳಷ್ಟು ವಿಚಾರಗಳನ್ನು ನಿರಾಕರಿಸಿದರು. ಎಲ್ಲರೂ ಒಂದೇ ಎನ್ನುವ ಮನೋಭಾವ ಇತ್ತು. ಆದರೆ ಮತ್ತೆ ಹಳೇ ಪದ್ಧತಿ ಜಾರಿಗೆ ಬಂದಿದ್ದು ಏಕೆ ಎನ್ನುವುದು ಬೇರೆ ಕತೆ. ದೊಡ್ಡ ಆದರ್ಶಗಳಿವೆ ಆದರೆ ಅದನ್ನು ಪಾಲಿಸುವ ಜವಾಬ್ದಾರಿ ನಮ್ಮದು. ನಾವೇ ಮೇಲು ಎನ್ನುವ ಭಾವನೆ ಅಳಿಯುವವರೆಗೂ ಜಾತಿ ಹೋಗುವುದೇ ಇಲ್ಲ. ನಮ್ಮ ಧರ್ಮವೇ ಶ್ರೇಷ್ಠ ಎನ್ನುವ ಭಾವನೆ ಹೋಗುವವರೆಗೆ ಅನ್ಯ ಧರ್ಮಗಳ ಮೇಲಿನ ದ್ವೇಷ ಅಳಿಯುವುದಿಲ್ಲ.

ಮಿತ್ರ: ಸಾಮಾಜಿಕ ವ್ಯವಸ್ಥೆಯ ಸುಧಾರಣೆ ಬಗ್ಗೆ ವಿಶ್ವಾಸವಿದೆಯೇ?.

ನಾಗಭೂಷಣಸ್ವಾಮಿ: ರಾಜ್ಯದಲ್ಲಿ ಜಾತಿಯೇ ಗೊತ್ತಿರದ ಸಮುದಾಯಗಳೂ ಸಾಕಷ್ಟಿವೆ. ಶಿಕ್ಷಣ, ವಸತಿ, ಭೂಮಿಯೂ ಇಲ್ಲದೆ ಹೇಗೋ ಬದುಕುತ್ತಿದ್ದಾರೆ. ಸಂಘಟನೆ ಇಲ್ಲದ ಕಾರಣ ಅವರಿಗೆ ರಾಜಕೀಯ ಶಕ್ತಿ ದೂರದ ಮಾತಾಗಿದೆ. ಜಾತಿ ವ್ಯವಸ್ಥೆಯಿಂದ ನಮಗೆ ಅನ್ಯಾಯವಾಗಿದೆ ಎನ್ನುವವರ ಜೊತೆಗೆ ಜಾತಿಯೇ ಗೊತ್ತಿರದ ಲಕ್ಷಾಂತರ ಮಂದಿ ಕಡೆಗೆ ಗಮನ ಕೊಡಬೇಕು. ವೈಯಕ್ತಿಕ ಹಂತದಲ್ಲಿ ಜಾತಿ ವ್ಯವಸ್ಥೆಯನ್ನು ಬೆಂಬಲಿಸುವುದಿಲ್ಲ ಎಂದು ದೃಢವಾಗಿ ನಡೆದುಕೊಳ್ಳಬೇಕು. ಸಣ್ಣ ಸಮುದಾಯಗಳು ಸಂಪೂರ್ಣ ನಿರ್ಲಕ್ಷ್ಯಕ್ಕೆ ಗುರಿಯಾಗಿವೆ. ಇವುಗಳ ಸಂಘಟನೆಗೂ ಆಕ್ಷೇಪವಿದೆ. ಅಂತರ ಜಾತಿ ವಿವಾಹಗಳಿಂದ ಸುಧಾರಣೆ ಆಗುತ್ತದೆ ಎನ್ನಲಾಗದು. ಶಕ್ತಿಯೇ ಇಲ್ಲದ ಜನ ಸಮುದಾಯಗಳ ಸಂಘಟನೆ ಕಡೆ ಗಮನ ಕೊಡಬೇಕು ಎಂದು ನಮಗ್ಯಾರಿಗೂ ಅನ್ನಿಸಿಲ್ಲ. ಶಿಕ್ಷಣ ಇನ್ನಿತರ ಅವಕಾಶಗಳಿಂದ ನಗರದಲ್ಲಿ ತಕ್ಕಮಟ್ಟಿಗೆ ನೆಮ್ಮದಿ ಜೀವನ ನಡೆಸುತ್ತಿರುವವರಿಗೆ ಈ ಆಲೋಚನೆ ಬಂದಿಲ್ಲ. ಕರುಣೆ, ಮನುಷ್ಯತ್ವವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದೇವೆ. ಅಗತ್ಯವಿರುವಷ್ಟೇ ಸಾಕು, ಅದರಲ್ಲೇ ಸುಖವಿದೆ ಎಂಬ ಶರಣರ ಸಂದೇಶವನ್ನು ಪಾಲಿಸಲು ನಾನೂ ಸೇರಿದಂತೆ ಯಾರೂ ಸಿದ್ಧರಿಲ್ಲ.

ಮಿತ್ರ: ಸಮಾಜಕ್ಕೆ ಅವಶ್ಯವಾದ ಶರಣ ಸಾಹಿತ್ಯದ ಮಹತ್ವವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಮಾರ್ಗ ಯಾವುದು?.

ನಾಗಭೂಷಣಸ್ವಾಮಿ: ಬದುಕಿಗೆ ಬೇಕಾದ ಒಳ್ಳೆಯ ಮಾತುಗಳು ಎಲ್ಲಾ ಕಾಲದಲ್ಲೂ ಇರುತ್ತವೆ. ಬುದ್ಧ, ಬಸವ, ಅಂಬೇಡ್ಕರ್ ಸೇರಿದಂತೆ ಎಲ್ಲಾ ಮಹನೀಯರೂ ಲೋಕಕ್ಕೆ ಹಿತವಾದ ಮಾತುಗಳನ್ನೇ ಹೇಳಿದರು. ಆದರೆ ನಮಗೆ ಲೋಕದ ಹಿತಕ್ಕಿಂತ ಸ್ವಾರ್ಥವೇ ಮುಖ್ಯ ಎಂದಾದಾಗ ಯಾರ ಮಾತುಗಳೂ ಕೇಳಿಸುವುದಿಲ್ಲ. ಆದ್ದರಿಂದ ಶಿಕ್ಷಣ ಹಂತದಿಂದಲೇ ಬದಲಾವಣೆ ಆಗಬೇಕಾಗುತ್ತದೆ. ಪ್ರಸ್ತುತ ಹೆಚ್ಚು ಅಂಕ ಪಡೆಯಬೇಕು, ಸ್ಪರ್ಧೆಗಳನ್ನು ಜಯಿಸಬೇಕು, ಒಳ್ಳೆಯ ಹುದ್ದೆಗೆ ಸೇರಬೇಕು ಎನ್ನುವುದೇ ಮುಖ್ಯವಾಗಿದೆ. ಪ್ರೀತಿಯನ್ನು ಬೆಳೆಸುವ ಶಿಕ್ಷಣ ಸಿಗುತ್ತಿಲ್ಲ. ಮನುಷ್ಯರ ಮೇಲೆ ಪ್ರೀತಿಯೇ ಇಲ್ಲ. ನಮ್ಮನ್ನು ಬಿಟ್ಟು ಲೋಕ ಬದಲಾವಣೆ ಆಗಬೇಕು ಎನ್ನುವವರೇ ಹೆಚ್ಚು. **ಬದುಕಲು ಹಣ ಬೇಕು. ಆದರೆ ಅದಕ್ಕೆ ಇಷ್ಟು ಸಾಕೆನ್ನುವ ಮಿತಿ ಇಲ್ಲದಿದ್ದರೆ ಒಬ್ಬೊಬ್ಬರೂ ರಾಕ್ಷಸರಾಗುತ್ತೇವೆ.** ಅದನ್ನೇ ವಚನಕಾರರು ಸ್ಪಷ್ಟವಾಗಿ ಹೇಳಿದ್ದಾರೆ. ಆ ನಿಟ್ಟಿನಲ್ಲಿ ಪ್ರಯತ್ನಗಳಾಗಬೇಕು. ಹಣವಾಗಲಿ, ಅಧಿಕಾರವಾಗಲಿ ಅದರ ಮಿತಿಯ ಅರಿವಾದರೆ ಎಲ್ಲರೂ ಶ್ರೀಮಂತರಾಗುತ್ತೇವೆ.

ಇಂದು ಶರಣ ಸಾಹಿತ್ಯ ಸಮ್ಮೇಳನ

ಮೈಸೂರು, ಮಾ.22– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ಜಿಲ್ಲಾ ಹಾಗೂ ನಗರ ಘಟಕದ ವತಿಯಿಂದ ಕಲಾಮಂದಿರದಲ್ಲಿ ನಾಳೆ(ಮಾ.23) ಬೆಳಗ್ಗೆ 10ಕ್ಕೆ ಶರಣ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ.



ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ಹಾಗೂ ಸಮ್ಮೇಳನಾಧ್ಯಕ್ಷರಾದ ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ಸಮ್ಮುಖದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ.

ಇದೇ ವೇಳೆ ಶಾಸಕರಾದ ಕೆ.ಹರೀಶ್‌ಗೌಡ ಸ್ಮರಣ ಸಂಚಿಕೆ ಹಾಗೂ ಟಿ.ಎಸ್.ಶ್ರೀವತ್ಸ ಕೃತಿಗಳ ಬಿಡುಗಡೆ ಮಾಡಲಿದ್ದಾರೆ. ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ ಚಿತ್ರಕಲಾ ಪ್ರದರ್ಶನ ಹಾಗೂ ಡಾ.ಡಿ.ತಿಮ್ಮಯ್ಯ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಧ್ಯಾಹ್ನ 3.30ಕ್ಕೆ ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ ನಡೆಯಲಿದ್ದು, ಸಂಜೆ 5.30ಕ್ಕೆ ಸಮಾರೋಪ ಸಮಾರಂಭ ಹಾಗೂ ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.


ವಚನ ಜಾಗೃತಿ ಜಾಥಾ: ಸಭಾ ಕಾರ್ಯಕ್ರಮಕ್ಕೂ ಮುನ್ನ ಬೆಳಗ್ಗೆ 9ಕ್ಕೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ(ಮೆಟ್ರೋಪೋಲ್ ಸರ್ಕಲ್)ದ ಬಳಿ ವಚನ ಜಾಗೃತಿ ಜಾಥಾವನ್ನು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಉದ್ಘಾಟಿಸಲಿದ್ದಾರೆ. ಮೆರವಣಿಗೆ ಬಳಿಕ ಧ್ವಜಾರೋಹಣ ಹಾಗೂ ಸಾಮೂಹಿಕ ವಚನ ಗಾಯನ ಜರುಗಲಿದೆ.

ಮಕ್ಕಳ ಚಿತ್ರಕಥೆ "ಬ್ರಹ್ಮ ವಿಧಿಸಿದ ಷರತ್ತು...!"


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಮ್ಮೆ ಸೃಷ್ಟಿಕರ್ತನಾದ ಬ್ರಹ್ಮನು ಔತಣವನ್ನೇರ್ಪಡಿಸಿ ಸಕಲ ದೇವತೆಗಳು ಹಾಗೂ ಸಮಸ್ತ ರಾಕ್ಷಸರಿಗೂ ಆಹ್ವಾನವಿತ್ತನು.




ದೇವತೆಗಳು ಹಾಗೂ ರಾಕ್ಷಸರು ಸಂತೋಷದಿಂದ ಒಪ್ಪಿಕೊಂಡು ಬ್ರಹ್ಮಲೋಕಕ್ಕೆ ಬರುತ್ತಾರೆ.




ದೇವತೆಗಳು ಒಂದು ಭಾಗದಲ್ಲಿ, ರಾಕ್ಷಸರು ಮತ್ತೊಂದು ಭಾಗದಲ್ಲೂ ಸಂಭ್ರಮದಿಂದ ಭೋಜನಕ್ಕೆ ಕುಳಿತರು. ಅವರ ತಟ್ಟೆಗಳಿಗೆಲ್ಲಾ ಮೃಷ್ಟಾನ್ನ ಭೋಜನ ಬಡಿಸಲಾಯಿತು.




ದೇವತೆಗಳು ಹಾಗೂ ರಾಕ್ಷಸರು ಇನ್ನೇನು ಊಟ ಪ್ರಾರಂಭಿಸಲು ತಟ್ಟೆಗೆ ಕೈ ಹಾಕಬೇಕೆನ್ನುವಷ್ಟರಲ್ಲಿ ಬ್ರಹ್ಮನು "ಸ್ವಲ್ಪ ತಾಳಿ, ಇಲ್ಲಿ ಊಟ ಮಾಡಬೇಕಾದರೆ ಒಂದು ಷರತ್ತಿದೆ. ಅದೇನೆಂದರೆ ಊಟದ ತುತ್ತನ್ನು ಬಾಯಿಗೆ ಇಟ್ಟುಕೊಳ್ಳುವಾಗ ಯಾರೂ ಕೈ ಮಡಚಬಾರದು...!" ಎಂದು ಹೇಳಿಬಿಟ್ಟ



ಇದರಿಂದ ತೀವ್ರ ಅಸಮಾಧಾನಗೊಂಡ ರಾಕ್ಷಸ ವರ್ಗದವರು ಬ್ರಹ್ಮನನ್ನು ಕುರಿತು "ನಮ್ಮೆಲ್ಲರನ್ನೂ ಔತಣಕೂಟಕ್ಕೆ ಕರೆದು ಅವಮಾನಿಸುತ್ತೀಯಾ..? ಕೈ ಮಡಚದೇ ಆಹಾರವನ್ನು ಬಾಯಿಗೆ ಇಟ್ಟುಕೊಳ್ಳುವುದಾದರೂ ಹೇಗೆ..?" ಎಂದು ಹೇಳಿ, ಭೋಜನ ಸ್ವೀಕರಿಸದೇ ತೀವ್ರ ಕೋಪದಿಂದ ಎದ್ದು ಹೊರಡಲನುವಾದರು.



ಅಷ್ಟರಲ್ಲೇ ಬ್ರಹ್ಮನು ಶಾಂತಚಿತ್ತದಿಂದ ರಾಕ್ಷಸರನ್ನು ಹೊರ ಹೋಗದಂತೆ ತಡೆದು ದೇವತೆಗಳನ್ನು ತೋರಿಸಿದಾಗ ಅವರೆಲ್ಲಾ ಕೈ ಮಡಚದೆ ಒಬ್ಬರಿಗೊಬ್ಬರು ಪ್ರೀತಿಯಿಂದ ತಿನ್ನಿಸುತ್ತಾ ಸಂತೋಷಪಡುತ್ತಿದ್ದರು. ಈ ದೃಶ್ಯ ಕಂಡ ರಾಕ್ಷಸರು ನಾಚಿ ತಲೆತಗ್ಗಿಸಿದರು.



ವಾರಭವಿಷ್ಯ

23.03.2025 ರಿಂದ 29.03.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ–ಮೀನ, ಚಂದ್ರ, ಧನುಸ್ಸು, ಮಕರ, ಕುಂಭ, ಮೀನ, ಕುಜ–ಮಿಥುನ, ಬುಧ–ಮೀನ, ಗುರು–ವೃಷಭ, ಶುಕ್ರ–ಮೀನ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಪೂರ್ವಾರ್ಧದಲ್ಲಿ ವ್ಯಾಪಾರ, ವ್ಯವಹಾರಗಳು ಭರಾಟೆಯಿಂದ ಸಾಗುವುದು. ಗೃಹ, ನಿವೇಶನ ಖರೀದಿಗೆ ಪ್ರೇರಣೆ. ಯುವಕರಿಗೆ ಉನ್ನತ ವ್ಯಾಸಂಗದಿಂದ ಕೀರ್ತಿ. ಗೃಹಲಕ್ಷ್ಮಿಯ ಸಲಹೆಯನ್ನು ಮನ್ನಿಸುವುದರಿಂದ ಒಳಿತಾಗುವುದು. ದ್ವಿದಳ ಧಾನ್ಯ, ಸಗಟು ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭ. ವ್ಯಯಸ್ಥಿತ ರಾಹುಗ್ರಹ ಫಲಪ್ರಾಪ್ತಿ ಕಾಲದಲ್ಲಿ ವಿಳಂಬ ಉಂಟು ಮಾಡುವನು. ವಾಹನ ರಿಪೇರಿ ಖರ್ಚು ಎದುರಾಗುವುದು.

ಶ್ರೀ ಗಣಪತಿ ಪೂಜೆ, ಶುಭ ಸಂಖ್ಯೆ–6

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ನೀವು ಅಂದುಕೊಂಡಿದ್ದೇ ಒಂದು, ಆಗುತ್ತಿರುವುದೇ ಮತ್ತೊಂದು. ಹೊಸ ವ್ಯಾಪಾರ ಸ್ಥಾಪನೆಯ ಪ್ರಯತ್ನಗಳನ್ನು ಮುಂದೂಡಿ. ರಾಜಕಾರಣಿಗಳಿಗೆ ಹಲವು ರೀತಿಯ ಅಗ್ನಿಪರೀಕ್ಷೆಗಳು ಎದುರಾಗುವುದು. ವಾರ ಮಧ್ಯಾನಂತರ ನೌಕರ ವರ್ಗದವರಿಗೆ ಹಿರಿಯ ಅಧಿಕಾರಿಗಳ ಕೃಪಾಕಟಾಕ್ಷದಿಂದ ಬಡ್ತಿ ಹೊಂದುವ ಸಾಧ್ಯತೆ ಇದೆ. ಹೊಸ ವಾಹನ ಹೊಂದುವ ಕನಸು ನನಸಾಗಲಿದೆ. ಕಫ ಸಂಬಂಧಿ ಕಾಯಿಲೆ ಕಾಡುವುದು.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–5

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಈ ವಾರದಲ್ಲಿ ಯತ್ನ ಕಾರ್ಯಗಳಿಗೆ ಸ್ನೇಹಿತರ ಸಹಾಯ ದೊರಕುವುದು. ಸಮಾಜದ ಪ್ರಮುಖ ವ್ಯಕ್ತಿಗಳೊಡನೆ ಸಂಪರ್ಕ ಉಂಟಾಗುತ್ತದೆ. ದ್ವಂದ್ವ ಆಲೋಚನೆಗಳನ್ನು ಮಾಡುವುದರಿಂದ ಪ್ರಮುಖ ಕೆಲಸಗಳು ಮುಂದೆ ಸಾಗದು. ಲೇವಾದೇವಿ ಸಂಸ್ಥೆಗಳಿಗೆ ಸಾಲ ವಸೂಲಾತಿಯಲ್ಲಿ ವಿಳಂಬ. ಕೇತುಗ್ರಹ ಅಶುಭನಿದ್ದು ಕೆಲವರ ತೆರೆಮರೆ ಕೆಲಸಗಳಿಂದ ತಲೆಬಿಸಿ. ವಾರಾಂತ್ಯಕ್ಕೆ ಮನೆ ದೇವರ ದರ್ಶನದಿಂದ ಮನಃಶಾಂತಿ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–1

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ಕುಟುಂಬ ಸಂಬಂಧಗಳಲ್ಲೂ, ಆಫೀಸಿನಲ್ಲಿ ಉಂಟಾಗುವ ಬದಲಾವಣೆಗಳಿಗೂ ಸಿದ್ಧರಾಗಿರಿ. ಹಬ್ಬದ ಖರ್ಚುಗಳು ವಿಪರೀತವೆನಿಸುವುದು. ಸ್ತ್ರೀಯರು ಪ್ರಸಾದನ ವಸ್ತು ಖರೀದಿಗೆ ಹೆಚ್ಚಿನ ಹಣ ವ್ಯಯಿಸುವರು. ಸಹೋದರರಲ್ಲಿ ಒಮ್ಮತದ ಕೊರತೆಯಿಂದ ಆಸ್ತಿ ವಿವಾದಗಳು ಬಗೆಹರಿಯದು. ವಿಚಾರ ಹೀನತೆಯಿಂದ ಮುಖ್ಯ ಕೆಲಸಗಳು ಮುಂದೆ ಸಾಗದು. ಸಂಚಾರಿ ನಿಯಮ ಪಾಲಿಸದೆ ಸಂಕಷ್ಟಕ್ಕೆ ಗುರಿಯಾಗುವಿರಿ.

ಶ್ರೀ ಅಪರಾಜಿತ ಸೋತ್ರ ಪಠಿಸಿ. ಶುಭ ಸಂಖ್ಯೆ–8

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಈ ಸಪ್ತಾಹದಲ್ಲಿ ಹೊಸ ಮಿತ್ರರ ಪರಿಚಯವಾಗುವುದು. ಧನಾತ್ಮಕವಾಗಿ ಚಿಂತಿಸಿದಲ್ಲಿ ಸಾಧನೆಯ ಮಾರ್ಗ ತೆರೆದುಕೊಳ್ಳುವುದು. ನಂಬಿಕಸ್ಥ ವ್ಯಕ್ತಿಗಳಿಂದ ಮಹತ್ವದ ಯೋಜನೆ ಸಫಲತೆಗೊಳ್ಳುವುದು. ಅಧ್ಯಾಪಕ ವೃತ್ತಿಯವರಿಗೆ ಸ್ಥಳ ಬದಲಾವಣೆಯ ಸಾಧ್ಯತೆ ಇರುತ್ತದೆ. ಸಾಮಿಲ್ ಉದ್ಯಮದವರಿಗೆ ಉತ್ತಮ ವ್ಯಾಪಾರದಿಂದ ಹೆಚ್ಚಿನ ಧನಲಾಭವಾಗುವುದು. ಸಟ್ಟಾ ಜೂಜುಗಳಿಂದ ದೂರವಿರಿ, ದುರ್ಮಾರ್ಗಿಗಳ ಸಲಹೆ ತಿರಸ್ಕರಿಸಿ.

ಶ್ರೀ ಸೂರ್ಯ ನಮಸ್ಕಾರ. ಶುಭ ಸಂಖ್ಯೆ–4

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ಧನ ಸಂಚಯ. ಶುಭ ವಾರ್ತೆ ಬರುವುದು. ನಿಮ್ಮ ಹಿತಚಿಂತಕರೊಂದಿಗೆ ಸಮಾಗಮ. ನೆರೆಹೊರೆಯಲ್ಲಿ ಸೌಹಾರ್ದತೆಯ ವಾತಾವರಣ. ಸರ್ಕಾರಿ ಕಚೇರಿ ಕೆಲಸಗಳು ನಿಮ್ಮ ಅನುಕೂಲಕ್ಕೆ ಆಗುವುದು. ಜನ್ಮ ಕೇತುವಿನ ಕಾರಣ ದುಡುಕಿನ ನಿರ್ಧಾರಗಳಿಂದ ಸಂಬಂಧಗಳು ಕೆಡುವುದು. ಸಣ್ಣಪುಟ್ಟ ಶಸ್ತ್ರಕ್ರಿಯೆಯ ಸಾಧ್ಯತೆ ಇರುತ್ತದೆ. ಅಂದರ್–ಬಾಹರ್ ಯುಗಾದಿಯ ಸಂಭ್ರಮ ಹಾಳುಗೆಡುವುವುದು.

ಶ್ರೀ ಅಷ್ಟಾಕ್ಷರೀ ಮಂತ್ರ ಜಪಿಸಿ. ಶುಭ ಸಂಖ್ಯೆ–2

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಸದ್ಯದಲ್ಲೇ ನಿಮ್ಮ ಭಾಗ್ಯದಲ್ಲಿ ಬದಲಾವಣೆ ಆಗುವುದಿದೆ. ಸಾಫ್ಟ್‌ವೇರ್ ಮಂದಿಗೆ ವೃತ್ತಿ ಬದಲಾವಣೆಯಿಂದ ಆದಾಯದಲ್ಲಿ ಹೆಚ್ಚಳ. ಮಾತೇ ಮುತ್ತು, ತೂಕವಾಗಿ ಮಾತನಾಡಿ ಕಾರ್ಯ ಸಾಧಿಸಿಕೊಳ್ಳಿ. ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವಲ್ಲಿ ವಿಳಂಬವಾಗಲಿದೆ. ನಿರಾಶರಾಗುವ ಅಗತ್ಯವಿಲ್ಲ. ಯುಗಾದಿಯ ನಂತರ ಪಂಚಮ ಶನಿ ಮುಕ್ತಾಯವಾಗಿ ಹೊಸ ಭರವಸೆಯು ಮೂಡಲಿದೆ.

ಶ್ರೀ ನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–3

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ವಾರದ ಆದಿಗೆ ವಸ್ತ್ರಾಭರಣ ವ್ಯಾಪಾರಿಗಳಿಗೆ ವ್ಯಾಪಾರ ಚುರುಕಾಗಿ ನಡೆಯುವುದು. ಲಾಭಾಂಶದಲ್ಲಿ ಹೆಚ್ಚಳವಾಗುವುದು. ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ಹೊಸ ಒಡಂಬಡಿಕೆಗಳು ಹೇರಳವಾಗಿ ದೊರಕುವುದು. ಮನೆಯಲ್ಲಿ ಮಂಗಳ ಕಾರ್ಯಕ್ಕೆ ನಾಂದಿ ಆಗುವುದು. ಉತ್ತಮರ ಸಹವಾಸದಿಂದ ಸಮಾಜದಲ್ಲಿ ಮಾನ್ಯತೆ. ದೂರ ಪ್ರಯಾಣ ಸಮಯದಲ್ಲಿ ಜಾಗೃತರಾಗಿರಿ. ಕಳ್ಳಕಾಕರಿಂದ ತೊಂದರೆ ಆದೀತು.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–4

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಪ್ತಾಹದ ಆದಿಗೆ ನಿಮ್ಮ ರಾಶಿಗೆ ಬರುವ ಮನೋಕಾರಕ ಚಂದ್ರ ಮಾನಸಿಕ ನೆಮ್ಮದಿ, ಹರ್ಷಗಳನ್ನು ತರಲಿದ್ದಾನೆ. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ಶುಭ ವಾರ್ತೆ ಬರುವುದು. ನೆರೆ ಹೊರೆಯಲ್ಲಿ ಹಾಗೂ ಮಕ್ಕಳಲ್ಲಿ ಮನಸ್ತಾಪಗಳು ಉಂಟಾಗುವುದು. ಕಬ್ಬಿಣ, ಸಿಮೆಂಟ್ ವ್ಯಾಪಾರ ಲಾಭದಿಂದ ನಡೆಯುವುದು. ಸರ್ಕಾರಿ ನೌಕರರು ಆಪಾದನೆಗೆ ಗುರಿಯಾಗುವರು. ಉಷ್ಣಜನಿತ ಕಾಯಿಲೆ ಕಾಡಬಹುದು.

ಶ್ರೀ ಗುರುಗ್ರಹ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–7

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದಾರಂಭಕ್ಕೆ ನಿಮಗೆ ಲಾಭ ತರುವಂತಹ ವ್ಯಾಪಾರ, ವ್ಯವಹಾರಗಳು ಹುಡುಕಿಕೊಂಡು ಬರಲಿದೆ. ಚಂದ್ರ ಗ್ರಹ ಪ್ರಭಾವದಿಂದ ಸ್ಥಗಿತಗೊಂಡಿದ್ದ ಕೆಲಸಗಳು ಮರು ಚಾಲನೆ ಪಡೆಯುವುದು. ಸತಿ–ಪತಿಯರಲ್ಲಿ ಉಂಟಾಗಿದ್ದ ವಿರಸ ನಿವಾರಣೆ ಆಗುವುದು. ವಾರದ ಉತ್ತರಾರ್ಧದಲ್ಲಿ ಸೌಖ್ಯ ಹೀನತೆ, ವೈದ್ಯರ ಭೇಟಿ, ಔಷಧದ ಖರ್ಚುಗಳು ಎದುರಾಗಲಿದೆ. ಆತುರದ ವಾಹನ ಚಾಲನೆ ಮುಳುವಾಗುವುದು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–9

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಣ್ಣ ಕೈಗಾರಿಕೆಗಳಿಗೆ ಅನುಕೂಲಕರ ವಾತಾವರಣವಿದೆ. ಗಾರ್ಮೆಂಟ್ಸ್ ಉದ್ಯಮದವರಿಗೆ ಬೃಹತ್ ಆರ್ಡರ್‌ಗಳು ದೊರೆಯಲಿದೆ. ರಫ್ತು ವ್ಯವಹಾರವೂ ಹೆಚ್ಚಾಗಲಿದೆ. ಕ್ಷೀರಜನ್ಯ ವಸ್ತು ವ್ಯಾಪಾರಿಗಳಿಗೆ ತಂಪು ಪಾನೀಯ ವಿತರಕರಿಗೆ ಕೈ ತುಂಬಾ ಕೆಲಸವೂ, ಧನಲಾಭವೂ ಉಂಟಾಗಲಿದೆ. ಶುಭ ಚಂದ್ರನಿಂದ ಏನೇ ಸಮಸ್ಯೆ ಬಂದರೂ ಬುದ್ಧಿ ಕುಶಲತೆಯಿಂದ ಬಗೆಹರಿಸಿಕೊಳ್ಳುವಿರಿ. ಜಲಾಶಯಗಳ ಹತ್ತಿರ ಹುಡುಗಾಟ ಬೇಡ.

ಶ್ರೀ ಗುರುರಾಯರ ದರ್ಶನ. ಶುಭ ಸಂಖ್ಯೆ–3

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

'ನಂಬಿ ಕೆಟ್ಟವರಿಲ್ಲವೋ ಹರಿಯ ನಂಬದವರು ಕೆಟ್ಟರೆ ಕೆಡಲಿ ಬಿಡು' ಎಂಬ ದಾಸರ ಪದದಂತೆ ಮುಂದೆ ಸಾಗಿ. ನಿಮ್ಮ ಸಾಮಾಜಿಕ ಜೀವನದಲ್ಲಿ ಪ್ರತಿಸ್ಪರ್ಧಿಗಳು ಅಡಚಣೆ ಉಂಟು ಮಾಡುವರು. ವಾಹನ ರಿಪೇರಿ ಖರ್ಚುಗಳು ಎದುರಾಗುವುದು. ವಾರಾಂತ್ಯಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಇಷ್ಟಪಟ್ಟಿದ್ದನ್ನು ಪಡೆಯುವಿರಿ. ಹಣಕಾಸಿನ ಪರಿಸ್ಥಿತಿ ಸುಧಾರಿಸುವುದು. ಶುಭ ಫಲಗಳನ್ನು ಅನುಭವಿಸುವಿರಿ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–5

ಹುಣಸೂರು ಕಸಬಾ ಕೃಷಿ ಪತ್ತಿನ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಗರ ಜಯಭೇರಿ

ಒಂದೂ ಸ್ಥಾನ ಗೆಲ್ಲದ ಕಾಂಗ್ರೆಸ್‌ಗೆ ಮುಖಭಂಗ



ಹುಣಸೂರು ಕಸಬಾ ಕೃಷಿಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಆಯ್ಕೆಯಾದ ಶಾಸಕ ಜಿ.ಡಿ.ಹರೀಶ್‌ಗೌಡ ಸೇರಿದಂತೆ ನೂತನ ನಿರ್ದೇಶಕರು ಪ್ರಮಾಣಪತ್ರ ಸ್ವೀಕರಿಸಿದರು.

ಹುಣಸೂರು, ಮಾ.22– ತೀವ್ರ ಜಿದ್ದಾಜಿದ್ದಿಯಿಂದ ಕೂಡಿದ್ದ ಹುಣಸೂರು ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಶಾಸಕ ಜಿ.ಡಿ.ಹರೀಶ್‌ಗೌಡ ಬಣ ಎಲ್ಲಾ 12 ಸ್ಥಾನಗಳಲ್ಲಿಯೂ ಜಯಭೇರಿ ಬಾರಿಸಿದ್ದು, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಬೆಂಬಲಿಗರು ಒಂದೂ ಸ್ಥಾನ ಗೆಲ್ಲಲಾಗದೇ ತೀವ್ರ ಮುಖಭಂಗ ಅನುಭವಿಸಿದ್ದಾರೆ.

ಹುಣಸೂರಿನ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಎಲ್ಲಾ 12 ಕ್ಷೇತ್ರಗಳಲ್ಲೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ನಿರ್ದೇಶಕರಾಗಿ ಆಯ್ಕೆಯಾಗಿದ್ದು, ಸೊಸೈಟಿಯ ಅಧಿಕಾರವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದಾರೆ.

ಸಾಲಗಾರರ ಕ್ಷೇತ್ರದ ಸಾಮಾನ್ಯ ವರ್ಗದಿಂದ ಶಾಸಕ ಜಿ.ಡಿ.ಹರೀಶ್‌ಗೌಡ (334), ರಮೇಶ್ (273), ದಿವಾಕರ್.ಎಸ್ (256), ಕೆ.ಎಸ್.ಬೀರೇಶ್ (236), ಮಹದೇವ್ರ (256), ಎ ವರ್ಗದಿಂದ ಎಂ.ಕೆ ವಾಸೇಗೌಡ (287), ಬಿ ವರ್ಗದಿಂದ ಹೆಚ್.ಸಿ. ರವಿಕುಮಾರ್ (231), ಪ.ಜಾ ವರ್ಗದಿಂದ ರುದ್ರಾಭೋವಿ (207), ಪ.ಪಂ ವರ್ಗದಿಂದ ಪುಟ್ಟರಾಜು (195), ಮಹಿಳಾ ಮಿಸಲು ಕ್ಷೇತ್ರದಿಂದ ಶಶಿಕಲಾಬಾಯಿ (211), ಸುನಂದ (195) ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ಗೀತಾ ನಿಂಗರಾಜು (260) ಮುಂದಿನ ಐದು ಸಹಕಾರಿ ವರ್ಷಗಳಿಗೆ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿಗಳು ಹೀನಾಯ ಸೋಲು ಕಂಡಿದ್ದಾರೆ.

ಚುನಾವಣಾ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ನಿರ್ದೇಶಕರು ಮತ್ತು ಅಭಿಮಾನಿಗಳು ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಹೆಗಲ ಮೇಲೆ ಹೊತ್ತು ವಿಜಯೋತ್ಸವ ಆಚರಿಸಿದರು. ಇದೇ ವೇಳೆ ಪಟಾಕಿ ಸಿಡಿಸಿ, ಸಿಹಿ ಹಂಚಿ ಶುಭಾಶಯ ವಿನಿಮಯ ಮಾಡಿಕೊಂಡರಲ್ಲದೆ ಅದ್ದೂರಿ ಮೆರವಣಿಗೆ ನಡೆಸಿ ಸಂಭ್ರಮಿಸಿದರು.

ಫೆ.22 ರಂದು ಹುಣಸೂರು ಕಸಬಾ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಚುನಾವಣೆ ನಡೆದಿತ್ತು ಶನಿವಾರ ಬೆಳಿಗ್ಗೆ 11 ಗಂಟೆಗೆ ಮತ ಎಣಿಕೆ ಕಾರ್ಯ ಆರಂಭಗೊಂಡು ಮಧ್ಯಾಹ್ನದ ವೇಳೆಗೆ ಫಲಿತಾಂಶ ಹೊರಬಿತ್ತು. ಚುನಾವಣೆ ಚುನಾವಣಾಧಿಕಾರಿ ರಾಜು ನೇತೃತ್ವದಲ್ಲಿ ನಡೆಯಿತು.

ಈ ಫಲಿತಾಂಶ ಸರ್ಕಾರಕ್ಕೆ 'ಸಹಕಾರ ಕ್ಷೇತ್ರವನ್ನು ಉಳಿಸಿ, ಚುನಾವಣೆ ನಡೆಸಿ' ಸ್ಪಷ್ಟ ಸಂದೇಶ

- ರಾಜ್ಯ ಸರ್ಕಾರದ ವಿರುದ್ಧ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ವಾಗ್ದಾಳಿ
- ಇಲ್ಲ ಸಲ್ಲದ ನೆಪವೊಡ್ಡಿ ಸಹಕಾರ ಸಂಘಗಳ ಚುನಾವಣೆಗೆ ಸರ್ಕಾರದಿಂದಲೇ ತಡೆ
- ಅವಸಾನದತ್ತ ಸಿಎಂ ತವರಿನ ಎಂಸಿಡಿಸಿಸಿ ಬ್ಯಾಂಕ್; ಕೊಳ್ಳೆ ಹೊಡೆದ ಅಧಿಕಾರಿಗಳಿಗೆ ಆಯಕಟ್ಟಿನ ಜಾಗ
- ಇನ್ನು ಮುಂದೆ ಬೀದಿಗಿಳಿದು ಹೋರಾಟ; ಭ್ರಷ್ಟ ಅಧಿಕಾರಿಗಳ ಬಣ್ಣ ಬಯಲು

ಹುಣಸೂರು, ಮಾ.22– ಹುಣಸೂರು ಕಸಬಾ ಕೃಷಿಪತ್ತಿನ ಸಹಕಾರ ಸಂಘದ ಚುನಾವಣಾ ಫಲಿತಾಂಶವು ರಾಜ್ಯ ಸರ್ಕಾರಕ್ಕೆ 'ಸಹಕಾರ ಕ್ಷೇತ್ರವನ್ನು ಉಳಿಸಿ, ಚುನಾವಣೆ ನಡೆಸಿ' ಸ್ಪಷ್ಟ ಸಂದೇಶವಾಗಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಹೇಳಿದರು.

ಶನಿವಾರ ಕಸಬಾ ಕೃಷಿಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಎಲ್ಲಾ 12 ಕ್ಷೇತ್ರಗಳಲ್ಲೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಜಯಭೇರಿ ಬಾರಿಸಿದ ನಂತರ ಮಾಧ್ಯಮದೊಂದಿಗೆ ಮಾತನಾಡಿದ ಅವರು, ರಾಜ್ಯಾದ್ಯಂತ ಸಹಕಾರ ಸಂಘಗಳ ಚುನಾವಣೆ ನಡೆಯದಂತೆ ಇಲ್ಲಸಲ್ಲದ ನೆಪವೊಡ್ಡಿ ತಡೆಯಲಾಗುತ್ತಿದೆ. ಮೈಸೂರು ಜಿಲ್ಲೆಯ ಎಂಸಿಡಿಸಿಸಿ ಬ್ಯಾಂಕ್ ಚುನಾವಣಾ ಆಡಳಿತ ಮಂಡಳಿಯ ಅವಧಿ ಮುಗಿದು 13 ತಿಂಗಳಾದರೂ ಚುನಾವಣೆ ಮಾಡುತ್ತಿಲ್ಲ ಎಂದರು.

ಹುಣಸೂರು ತಾಲೂಕಿನಲ್ಲಿ 27 ಸೊಸೈಟಿಗಳ ಪೈಕಿ 12ಕ್ಕೂ ಹೆಚ್ಚು ಸೊಸೈಟಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಿದ್ದಾರೆ. ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಕೋಟ್ಯಾಂತರ ರೂ. ಭ್ರಷ್ಟಾಚಾರ ನಡೆಸಿ, ಕೊಳ್ಳೆ ಹೊಡೆದಿದ್ದ ಅಧಿಕಾರಿಗಳನ್ನೇ ಮತ್ತೆ ತಂದು ಆಯಕಟ್ಟಿನ ಜಾಗದಲ್ಲಿ ಕೂರಿಸಿದ್ದಾರೆ ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.



ಜೆಡಿಎಸ್ ಬೆಂಬಲಿಗರು ಶಾಸಕ ಹರೀಶ್‌ಗೌಡ ನೇತೃತ್ವದಲ್ಲಿ ವಿಜಯೋತ್ಸವ ಆಚರಿಸಿದರು.

> ಹುಣಸೂರಿನಲ್ಲಿ ಕಳೆದ 15 ವರ್ಷಗಳಿಂದ ಆಡಳಿತ ನಡೆಸಿದ ಪಕ್ಷದ ನಾಯಕರು ಇದೀಗ ಹುಣಸೂರು ಅಭಿವೃದ್ಧಿಗೆ ತಡೆಯೊಡ್ಡುತ್ತಿರುವುದು ವಿಷಾದನೀಯ ಸಂಗತಿ. ಅವರನ್ನು ಜನರು ಯಾವ ಸ್ಥಾನದಲ್ಲಿಟ್ಟಿದ್ದರು ಎನ್ನುವುದನ್ನು ಅರಿತುಕೊಳ್ಳಬೇಕು. ಕಾಲೇಜು ಅಭಿವೃದ್ಧಿ ಸಮಿತಿ ರಚನೆ ವಿಚಾರದಲ್ಲೂ ಸಣ್ಣತನದ ರಾಜಕಾರಣ ಮಾಡುತ್ತಾರೆ. ನಾನು ಕ್ಷೇತ್ರದ ಅಭಿವೃದ್ಧಿಗಾಗಿ ಸಚಿವರನ್ನು, ಅಧಿಕಾರಿಗಳನ್ನು ಭೇಟಿ ಮಾಡಿದರೆ, ಅವರೆಲ್ಲಾ 'ಸಾಕಪ್ಪಾ, ನಿಮ್ಮ ಹುಣಸೂರು ಸಹವಾಸ' ಎನ್ನುತ್ತಾರೆ. ಯಾಕೆಂದು ಕೇಳಿದರೆ ಯಾವುದೇ ಅಭಿವೃದ್ಧಿ ಕಾರ್ಯ ಹುಣಸೂರಿನಲ್ಲಿ ಆಗಬಾರದು ಎಂದು ತಡೆಯೊಡ್ಡುವ, ಒತ್ತಡ ಹೇರುವವರು ಇದ್ದಾರಪ್ಪಾ.. ಎಂದು ನಿಟ್ಟುಸಿರು ಬಿಡುತ್ತಾರೆ. ಇದು ಬಗ್ಗೆ ತಾಲೂಕಿನ ಜನತೆ ಚಿಂತನೆ ನಡೆಸಬೇಕು. ಇವರು ಮಾಡುತ್ತಿರುವುದು ಸರಿನಾ? ಎಂದು ಬೇಸರ ವ್ಯಕ್ತಪಡಿಸಿ, ಇದು ಹೀಗೆ ಮುಂದುವರೆದರೆ ಇಂದಿನ ಕಸಬಾ ಸೊಸೈಟಿ ಚುನಾವಣೆಯ ಫಲಿತಾಂಶವೇ ಮುಂದಿನ ದಿನಗಳಲ್ಲಿ ಅವರಿಗೂ ಗತಿಯಾಗಲಿದೆ ಎನ್ನುವುದನ್ನು ಅವರು ಅರಿತರೆ ಒಳ್ಳೆಯದು. –ಜಿ.ಡಿ.ಹರೀಶ್‌ಗೌಡ

300 ಕೋಟಿ ರೂ. ಇದ್ದ ಡಿಪಾಸಿಟ್ ಹಾವನ್ನು ನನ್ನ ಅವಧಿಯಲ್ಲಿ 1000 ಕೋಟಿಗೆ ಏರಿಸಿದ್ದೆ ಸಾಲ ಸೌಲಭ್ಯದ ಮೊತ್ತ 600 ಕೋಟಿ ರೂ.ಗಳಿದ್ದದ್ದನ್ನು 1600 ಕೋಟಿ ರೂ.ಗಳಿಗೆ ಏರಿಸಿದ್ದೆ. 40 ಸಾವಿರ ರೈತರಿಗೆ ದೊರಕುತ್ತಿದ್ದ ಸಾಲ ಸೌಲಭ್ಯವನ್ನು 1.50 ಲಕ್ಷರೈತರಿಗೆ ವಿಸ್ತರಿಸಿದ್ದೆ ಇದೀಗ ಎಂಸಿಡಿಸಿಸಿ ಅಧಃಪತನದತ್ತ ಸಾಗುತ್ತಿದೆ. ಡಿಪಾಸಿಟ್ 800 ಕೋಟಿ ರೂ.ಗಳಿಗೆ ಇಳಿದಿದೆ ನಬಾರ್ಡ್ ಕೇವಲ 125 ಕೋಟಿ ರೂ.ಗಳ ಸಾಲ ನೀಡುತ್ತಿದೆ. ಸಾಲ ಮರುಪಾವತಿ ಮಾಡಿದವರಿಗೆ ಮರು ಸಾಲ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಭ್ರಷ್ಟಾಚಾರ ಬಯಲಿಗೆ: ಹುಣಸೂರು ತಾಲೂಕಿನ ಸಹಕಾರಿ ಕ್ಷೇತ್ರದಲ್ಲಿ ಅಧಿಕಾರಿಗಳು ನಡೆಸಿರುವ ಭಾರಿ ಭ್ರಷ್ಟಾಚಾರದ ದಾಖಲೆಗಳು ನನ್ನಲ್ಲಿವೆ ಅವರ ಕರ್ಮಕಾಂಡವನ್ನು ಶೀಘ್ರದಲ್ಲೇ ದಾಖಲೆ ಸಮೇತ ಬಿಡುಗಡೆಗೊಳಿಸಲಿದ್ದೇನೆ. ಈ ಕುರಿತು ವಿಧಾನಸಭೆಯಲ್ಲೇ ಮಾತನಾಡಬೇಕೆಂದಿದ್ದೆ. ಆದರೆ ವಿಧಾನಸಭೆಯಲ್ಲಿ ಕೊನೆ ಕೊನೆಗೆ ಕೋಲಾಹಲ ಎದ್ದ ಕಾರಣ ಅವಕಾಶ ಸಿಗಲಿಲ್ಲ. ತಾಲೂಕಿನ ಅಭಿವೃದ್ಧಿಯೊಂದೇ ನನ್ನ ಗುರಿಯಾಗಿದ್ದು, ಇದಕ್ಕಾಗಿ ಯಾವ ಮಟ್ಟದ ಹೋರಾಟಕ್ಕೂ ಸಿದ್ಧನಿದ್ದೇನೆ ಎಂದು ವಿರೋಧಿಗಳಿಗೆ ಚಾಟಿ ಬೀಸಿದರು.

ಮಾ.25, ಕೋಟೆಯಲ್ಲಿ ಶೋಷಿತರ ಸಂಘರ್ಷ ದಿನಾಚರಣೆ

ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಚಿತ್ರನಟ ಚೇತನ್, ಜನ್ನಿ ಸೇರಿದಂತೆ ಹಲವರು ಭಾಗಿ

ಹೆಚ್.ಡಿ.ಕೋಟೆ: ಶೋಷಿತರ ಸಂಘರ್ಷ ದಿನಾಚರಣೆ ಕಾರ್ಯಕ್ರಮ ಮಾ.25ರಂದು ಹೆಚ್.ಡಿ.ಕೋಟೆ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಸಮಿತಿಯ ಜಿಲ್ಲಾ ಪ್ರಧಾನ ಸಂಚಾಲಕ ಮಲ್ಲಳ್ಳಿ ನಾರಾಯಣ ತಿಳಿಸಿದರು.

ಪಟ್ಟಣದ ಪತ್ರಕರ್ತರ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಮಹಾರಾಷ್ಟ್ರದ ರಾಯಗಡ ಜಿಲ್ಲೆಯ ಮಹಾಡ್‌ನಲ್ಲಿ 1927 ಮಾರ್ಚ್ 20ರಂದು ಸಾರ್ವಜನಿಕ ಕೆರೆಯ ನೀರನ್ನು ಮುಟ್ಟುವ ಮೂಲಕ ನೈಸರ್ಗಿಕ ಪದಾರ್ಥ ಎಲ್ಲರಿಗೂ ಸೇರಿದ್ದು ಎನ್ನುವುದನ್ನು ಸಾರಿ ಹೇಳಿದರು, ಆ ಮೂಲಕ ಮಾನವ ಹಕ್ಕುಗಳನ್ನು ಎತ್ತಿ ಹಿಡಿದು, ಇದು ನೆನಪಿಗಾಗಿ ಮಹಾಡ್ ಸತ್ಯಾಗ್ರಹ ಆಧುನಿಕ ಭಾರತ ಇತಿಹಾಸದಲ್ಲಿ ಅತ್ಯಂತ ಮಹತ್ವ ಘಟನೆಯಾಗಿದೆ ಎಂದರು.



ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಜಿಲ್ಲಾ ಸಮಿತಿಯ ಜಿಲ್ಲಾ ಪ್ರಧಾನ ಸಂಚಾಲಕ ಮಲ್ಲಳ್ಳಿ ನಾರಾಯಣ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಇದರ ಆಚರಣೆಗಾಗಿ ಮಾ.25ರಂದು ಹೆಚ್‌ಡಿ ಕೋಟೆ ಪಟ್ಟಣದ ಡಾ. ಬಿಆರ್ ಅಂಬೇಡ್ಕರ್ ಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ಶೋಷಿತರ ಸಂಘರ್ಷ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಜಿಲ್ಲಾ ಪ್ರಧಾನ ಸಂಚಾಲಕ ಮಲ್ಲಳ್ಳಿ ನಾರಾಯಣ್ ವಹಿಸಲಿದ್ದಾರೆ ಎಂದು ಹೇಳಿದರು.

ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಚಿತ್ರನಟ ಚೇತನ್, ಪ್ರಗತಿಪರ ಚಿಂತಕ ಜನ್ನಿ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲ್‌ಪುರ ನಾಗೇಂದ್ರ ಇನ್ನು ಹಲವು ಪ್ರಮುಖರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಎಂದು ಅವರು ಮನವಿ ಮಾಡಿದರು.

ಜಿಲ್ಲಾ ದಲಿತ ಮಹಿಳಾ ಒಕ್ಕೂಟದ ಅಧ್ಯಕ್ಷೆ ಮಾದೇವಮ್ಮ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ದಲಿತ ಮಹಿಳಾ ಒಕ್ಕೂಟದ ಅಧ್ಯಕ್ಷೆ ಮಾದೇವಮ್ಮ, ತಾಲೂಕು ಸಂಚಾಲಕ ಸಣ್ಣ ಕುಮಾರ್, ಜಿಲ್ಲಾ ಸಂಚಾಲಕಿ ಅನುಷಾ, ದಲಿತ ವಿದ್ಯಾರ್ಥಿ ಒಕ್ಕೂಟ ಅಶೋಕ ಇದ್ದರು.

ಜಾತ್ರಾ ಮಹೋತ್ಸವ

ಹಂಪಾಪುರ: ಹಂಪಾಪುರ ಹೋಬಳಿಯ ಹೊಮ್ಮರಗಳ್ಳಿ ಗ್ರಾಮದಲ್ಲಿ ನಾಳೆ(ಮಾ.25) ದುರ್ಗಾಪರಮೇಶ್ವರಿ ಅಮ್ಮನವರ ಚಂದ್ರ ಮಂಡಲ ವಾಹನೋತ್ಸವ ನಡೆಯಲಿದೆ.

ಮುಂಜಾನೆ ನಾಲ್ಕು ಗಂಟೆಗೆ ದೇವಸ್ಥಾನದ ಮುಂಭಾಗ ಬಾಣ ಬಿರುಸು ಕಾರ್ಯಕ್ರಮ ನಡೆಯಲಿದೆ. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ಮೆರವಣಿಗೆ, ತಮಟೆ,ವಾದ್ಯ, ಭಜನಾ ಮೇಳಗಳೊಡನೆ ನಡೆಯಲಿದೆ.

ಕೋರಂ ಅಭಾವ ಚುನಾವಣೆ ಮುಂದೂಡಿಕೆ

ಬೆಟ್ಟದಪುರ: ಸಮೀಪದ ಕೋಮಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆ ಕೋರಂ ಅಭಾವದಿಂದ ಮುಂದೂಡಲಾಯಿತು.

ಈ ಸಂಘಕ್ಕೆ ಮುಂದಿನ ಐದು ವರ್ಷಗಳ ಅಧಿಕಾರ ಅವಧಿಗೆ 12 ನಿರ್ದೇಶಕರ ಸ್ಥಾನಕ್ಕೆ ಎಲ್ಲಾ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದು, ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ಶುಕ್ರವಾರ ನಿಗದಿಯಾಗಿತ್ತು, ಅಧ್ಯಕ್ಷ ಸ್ಥಾನಕ್ಕೆ ಜೀವನ್ ಕುಮಾರ್ ಕೆ.ಪಿ ಹಾಗೂ ಜ್ಯೋತಿ, ಅರ್ಜಿ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಧರ್ಮಪಾಲ ಹಾಗೂ ಗೋವಿಂದೇಗೌಡ ಅರ್ಜಿ ಸಲ್ಲಿಸಿದರು, ಚುನಾವಣೆ ನಡೆಯುವ ಸಂದರ್ಭದಲ್ಲಿ ಕೇವಲ 6 ಜನ ಮಾತ್ರ ಹಾಜರಾಗಿದ್ದು, ಉಳಿದ 6 ನಿರ್ದೇಶಕರು ಗೈರಾದ ಹಿನ್ನೆಲೆಯಲ್ಲಿ ಚುನಾವಣೆಯನ್ನು ಮುಂದೂಡಲಾಗಿದೆ ಎಂದು ಚುನಾವಣೆ ಅಧಿಕಾರಿ ಸೈಯಾದ್ ಉಜ್ಮಾ ಶಮಾನಾ ತಿಳಿಸಿದರು. ಮುಂದಿನ ದಿನಾಂಕವನ್ನು ತಿಳಿಸಲಾಗುವುದು ಎಂದು ಹೇಳಿದರು.

ಕಾಡಿನಿಂದ ನಾಡಿಗೆ ಬಂದ ಜಿಂಕೆ ರಕ್ಷಣೆ



ಗ್ರಾಮಕ್ಕೆ ಆಗಮಿಸಿದ ಜಿಂಕೆಯನ್ನು ರಕ್ಷಿಸಿದ ಯುವಕರು, ಗ್ರಾಮಸ್ಥರು.

ಹೆಚ್.ಡಿ.ಕೋಟೆ: ತಾಲೂಕಿನ ಎನ್.ಬೇಗೂರು ಅರಣ್ಯದಿಂದ ಗಂಡು ಜಿಂಕೆಯೊಂದು ದಾರಿತಪ್ಪಿ ಬಸಾಪುರ ಗ್ರಾಮಕ್ಕೆ ಶನಿವಾರ ಆಗಮಿಸಿದ್ದು, ಗ್ರಾಮದ ಯುವಕರು ಮತ್ತು ಗ್ರಾಮಸ್ಥರು ಅದನ್ನು ರಕ್ಷಿಸಿ ಅರಣ್ಯ ಇಲಾಖೆಗೆ ಒಪ್ಪಿಸಿದ್ದಾರೆ.

ಬೆಳ್ಳಂಬೆಳಗ್ಗೆ ಗ್ರಾಮದಲ್ಲಿ ಓಡಾಡುತ್ತಿದ್ದ ಜಿಂಕೆಯನ್ನು ಬೀದಿನಾಯಿಗಳು ಅಟ್ಟಾಡಿಸುತ್ತಿದ್ದವು. ಅದನ್ನು ಗ್ರಾಮಸ್ಥರು, ಗ್ರಾಮದ ಯುವಕರುಗಳು ಕಂಡು ನಾಯಿಗಳನ್ನೋಡಿಸಿ ಜಿಂಕೆಯನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ವಿಚಾರವನ್ನು ತಕ್ಷಣ ಎನ್.ಬೇಗೂರು ಅರಣ್ಯ ಅಧಿಕಾರಿಗಳ ಗಮನಕ್ಕೆ ತಂದ ತಕ್ಷಣ ಅಧಿಕಾರಿಗಳು ಗ್ರಾಮಕ್ಕೆ ಆಗಮಿಸಿ ಸುರಕ್ಷಿತವಾಗಿ ಜಿಂಕೆಯನ್ನು ಎನ್.ಬೇಗೂರು ಅರಣ್ಯ ವ್ಯಾಪ್ತಿಗೆ ಬಿಡಲಾಯಿತು.

ದಾರಿ ತಪ್ಪಿ ಬಂದಿದ್ದ ಜಿಂಕೆಯನ್ನು ನಾಯಿಗಳಿಂದ ರಕ್ಷಿಸಿದ ಬಸಾಪುರ ಗ್ರಾಮಸ್ಥರು ಹಾಗೂ ಯುವಕ ತಂಡದವರಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಧನ್ಯವಾದಗಳು ತಿಳಿಸಿದ್ದಾರೆ.

ಹಲ್ಲರೆಯಲ್ಲಿ ಅಪ್ಪು ಹುಟ್ಟುಹಬ್ಬ ಆಚರಣೆ



ಅಭಿಮಾನಿಗಳು ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬವನ್ನು ಆಚರಿಸುತ್ತಿರುವುದು.

ಮಲ್ಕುಂಡಿ: ಸಮೀಪದ ಹಲ್ಲರೆ ಗ್ರಾಮದಲ್ಲಿ ಅಪ್ಪು ಅಭಿಮಾನಿ ಬಳಗದ ವತಿಯಿಂದ ಕರ್ನಾಟಕ ರತ್ನ ಪುನೀತ್ ರಾಜಕುಮಾರ್ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಅಭಿಮಾನಿಗಳು ಡಾ.ಪುನೀತ್ ರಾಜಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡುವ ಮೂಲಕ ಆಚರಣೆ ಮಾಡಿ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಮಾಡಲಾಯಿತು.

ವಾಲ್ಮೀಕಿ ಯುವಕ ಸಂಘದ ಅಧ್ಯಕ್ಷ ಮಾದನಾಯಕ ಮಾತನಾಡಿ, ಪುನೀತ್ ರಾಜಕುಮಾರ್ ಅವರು ದೊಡ್ಡ ನಟರ ಮಗನಾಗಿದ್ದರೂ ಎಂದಿಗೂ ಬೀಗಲಿಲ್ಲ. ಸ್ವಂತ ದುಡಿಮೆಯಿಂದ ಬದುಕಬೇಕೆಂಬ ಹಠದಿಂದ ಸಮಾಜದಲ್ಲಿ ಮಾದರಿಯಾಗಿ ಜೀವನ ನಡೆಸಿದರು. ಪುನೀತ್ ರಾಜಕುಮಾರ್ ಅವರು ಹತ್ತಾರು ಒಳ್ಳೆಯ ಕೆಲಸ ಮಾಡುವ ಮೂಲಕ ಮಾದ ರಿಯಾಗಿದ್ದಾರೆ. ಇಂದಿನ ಯುವಕರು ಪುನೀತ್ ರಾಜ್‌ಕುಮಾರ್ ಅವರನ್ನು ಮಾದರಿಯಾಗಿ ತೆಗೆದುಕೊಂಡು ಜೀವನ ನಡೆಸಬೇಕು ಎಂದು ತಿಳಿಸಿದರು.

ಅಪ್ಪು ಅಭಿಮಾನಿ ಬಳಗದ ಅಧ್ಯಕ್ಷ ಶಂಕರ್, ಗ್ರಾಪಂ ಮಾಜಿ ಅಧ್ಯಕ್ಷರಾದ ಚನ್ನನಾಯಕ, ಸ್ವಾಮಿನಾಯಕ, ಗ್ರಾಪಂ ಸದಸ್ಯ ಕೃಷ್ಣನಾಯಕ, ಮಂಜುನಾಯಕ, ಮಹೇಶ್ ನಾಯಕ, ಅಂಕನಾಯಕ,ರೇವಣ್ಣ,ಸೋಮಣ್ಣನಾಯಕ, ರಾಮಣ್ಣನಾಯಕ, ಮಹೇಶ್ ನಾಯಕ, ಬಸವರಾಜ್, ಮಹದೇವ, ಸಿದ್ದೇಶ ಮತ್ತು ಇತರರು ಹಾಜರಿದ್ದರು.

ಮನೆಗೆ ನುಗ್ಗಿ ದಂಪತಿ ಮೇಲೆ ಗುಂಪಿನಿಂದ ಹಲ್ಲೆ

ನಂಜನಗೂಡು: ಕ್ಷುಲ್ಲಕ ಕಾರಣಕ್ಕೆ ಗುಂಪೊಂದು ಮನೆಗೆ ನುಗ್ಗಿ ದಂಪತಿ ಮೇಲೆ ಹಲ್ಲೆ ನಡೆಸಿ ದೌರ್ಜನ್ಯವೆಸಗಿರುವ ಘಟನೆ ತಾಲೂಕಿನ ಕಗ್ಗಲೂರು ಗ್ರಾಮದಲ್ಲಿ ನಡೆದಿದ್ದು ಗಾಯಾಳುಗಳು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಗ್ರಾಮದ ನಿವಾಸಿ ಮಲ್ಲೇಶ್ ಹಾಗೂ ಸವಿತಾ ದಂಪತಿಗಳು ಹಲ್ಲೆಗೊಳಗಾದವರು. ಗಾಯಾಳುಗಳು ಪೊಲೀಸರಿಗೆ ದೂರು ನೀಡಿದ್ದು, ದೂರಿನಂತೆ ದಂಪತಿ ಪುತ್ರ ಮಲ್ಲಿಕಾರ್ಜುನ ಹಣ ಪಡೆಯಲೆಂದು ಪಕ್ಕದಲ್ಲೇ ಇರುವ ಬೀದಿಗೆ ತೆರಳಿದ್ದಾನೆ. ಈ ಸಂದರ್ಭ ಅಲ್ಲಿನ ಕೆಲವರು ನಮ್ಮ ಬಿದಿಗೆ ಬಂದಿದ್ದು ತಪ್ಪು ಎಂದು ಬೈದು ಕಳುಹಿಸಿದ್ದಾರೆ. ಈ ಬಗ್ಗೆ ಪ್ರಶ್ನಿಸಿದ್ದಕ್ಕೆ ನಮ್ಮ ಮೇಲೆ 20ಕ್ಕೂ ಹೆಚ್ಚು ಮಂದಿ ಮೇಲ್ವರ್ಗದವರು ದೊಣ್ಣೆಯಿಂದ ಗಂಭೀರ ಹಲ್ಲೆ ನಡೆಸಿದ್ದಾರೆ ಎಂದು ದೂರಿದ್ದಾರೆ. ಈ ಬಗ್ಗೆ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ಮುಂದಾಗಿದ್ದಾರೆ.

ಬಡತನ ಶಾಪವಲ್ಲ..., ಅದು ಸಾಧನೆಯ ಹಾದಿ...

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ

ನಂಜನಗೂಡು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಮುಂದಿನ ಶಿಕ್ಷಣ ಮತ್ತು ನಿಮ್ಮ ಭವಿಷ್ಯವನ್ನು ನಿರ್ಧರಿಸುವಂತಹ ಪ್ರಮುಖ ಘಟ್ಟವಾಗಿದ್ದು, ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯನ್ನು ಹೊಂದಿ, ಕಠಿಣ ಪರಿಶ್ರಮದಿಂದ ವ್ಯಾಸಂಗ ಮಾಡಿ ಸಾಧನೆಗೆ ಮುಂದಾಗಿ ಎಂದು ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್ ಸಲಹೆ ನೀಡಿದರು.

ನಗರದ ಜೆಎಸ್‌ಎಸ್ ಬಾಲಕಿಯರ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಬಡತನ ಶಾಪವಲ್ಲ, ಅದು ಸಾಧನೆಯ ಹಾದಿ ಎಂದು ತಿಳಿಯಬೇಕು, ನಾನು ಶಿಕ್ಷಣದಿಂದ ವಂಚಿತನಾಗಿದ್ದೆ, ಆದ್ದರಿಂದ ಯಾವ ಮಕ್ಕಳು ಸಹ ಬಡತನದ ಕಾರಣದಿಂದಾಗಿ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಸದುದ್ದೇಶದಿಂದ ನನ್ನ ದುಡಿಮೆಯ ಒಂದು ಭಾಗವನ್ನು ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಮೀಸಲಿಟ್ಟು ನೆರವು ನೀಡುತ್ತಿದ್ದೇನೆ. ವಿದ್ಯಾರ್ಥಿಗಳು ಯಾವುದೇ ಅಡ್ಡಿ ಆತಂಕಗಳನ್ನು ಬಿಟ್ಟು ಮೇಲು–ಕೀಳು, ಬಡತನ ಎಂಬ ಕೀಳರಿಮೆ ಭಾವನೆಯನ್ನು ಬಿಟ್ಟು ಏಕಾಗ್ರತೆಯಿಂದ ವ್ಯಾಸಂಗದಲ್ಲಿ ತೊಡಗಿಕೊಳ್ಳಬೇಕು ಎಂದರು.



ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರವೇಶಪತ್ರ ವಿತರಿಸುತ್ತಿರುವ ನಂದಕುಮಾರ್.

ಮುಖ್ಯವಾಗಿ ಜೀವನದಲ್ಲಿ ಸಮಯ ಮತ್ತು ಶಿಸ್ತನ್ನು ಮೈಗೂಡಿಸಿಕೊಂಡು, ಶಿಕ್ಷಣವನ್ನು ಪಡೆಯುವ ಜೊತೆಗೆ ತಂದೆ ತಾಯಿಗಳಿಗೆ ಗುರು ಹಿರಿಯರಿಗೆ ಗೌರವ ಕೊಡುವಂತಹ ಸಂಸ್ಕಾರ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಅಲ್ಲದೆ ಮೊಬೈಲ್ ಬಳಕೆಯನ್ನು ಬಿಟ್ಟು, ಪಾಶ್ಚಿಮಾತ್ಯ ಸಂಸ್ಕೃತಿಗಳ ಅನುಕರಣೆಯನ್ನು ಬಿಟ್ಟು ನಮ್ಮ ನೆಲದ ಸಂಸ್ಕೃತಿ ಮತ್ತು ಸಂಸ್ಕಾರ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ಶುಭವಾಗಲಿ. ನೀವು ಸಾಧನೆ ಮಾಡುವ ಮೂಲಕ ನಿಮ್ಮ ತಂದೆ ತಾಯಿಯ ಕನಸನ್ನು ನನಸು ಮಾಡಿ, ದೇಶಕ್ಕೆ ಸೇವೆ ಸಲ್ಲಿಸುವಂತಹ ನಿರ್ದಿಷ್ಟ ಗುರಿಯನ್ನು ಹೊಂದಿ ಯಶಸ್ವಿಯಾಗಿ ದೇಶಕ್ಕೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ವಿತರಿಸಲಾಯಿತು. ಹಾಗೂ ಕಳೆದ ವರ್ಷ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವಿಷಯ ಪರಿವೀಕ್ಷಕರಾದ ಹೆಚ್.ಎಸ್.ನಾಗರಾಜು, ದಳವಾಯಿ ಶಾಲೆಯ ಮುಖ್ಯೋಪಾಧ್ಯಾಯರಾದ ನಾಗೇಶ್ ನಾಯಕ, ಕೆ.ಎಂ.ಬಸವರಾಜು, ಶಾಲೆಯ ಮುಖ್ಯೋಪಾಧ್ಯಾಯರಾದ ಹಾಜಿರಾಬೇಗಂ, ಶಿಕ್ಷಕರಾದ ಗೌರವಾಂಬಿಕ, ಜಯಶೀಲ, ಸೇರಿದಂತೆ ಶಾಲೆಯ ಶಿಕ್ಷರು ಮತ್ತು ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

ವಿದ್ಯುತ್ ಗ್ರಾಮಕ್ಕೆ ಭೂಮಿ ಪೂಜೆ, ನಾಲಾ ಆಧುನೀಕರಣ ಕಾಮಗಾರಿ ಪರಿಶೀಲನೆ

ಆಯೋಗದ ವರದಿ ಬಂದ ಕೂಡಲೇ ಒಳ ಮೀಸಲಾತಿ ಜಾರಿ; ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ತಿ.ನರಸೀಪುರ, ಮಾ.22– ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿಯ ಮೀಸಲಾತಿ ವರ್ಗೀಕರಣಕ್ಕಾಗಿ ಸದಾಶಿವ ಆಯೋಗ ರಚನೆ ಮಾಡಿತ್ತು ನಂತರ ಬಂದ ಬಿಜೆಪಿ ಸರ್ಕಾರ ಸದಾಶಿವ ಆಯೋಗದ ವರದಿಯನ್ನು ಧಿಕ್ಕರಿಸಿ ಅವೈಜ್ಞಾನಿಕ ಮೀಸಲಾತಿ ವರ್ಗೀಕರಣಕ್ಕಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆರೋಪಿಸಿದರು.

ತಾಲೂಕಿನ ವ್ಯಾಸರಾಜಪುರ ಮತ್ತು ಬಿ.ಸೀಹಳ್ಳಿ ಗ್ರಾಮಗಳಲ್ಲಿ ಒಂದು ಕೋಟಿ ರೂ. ವೆಚ್ಚದ ವಿದ್ಯುತ್ ಗ್ರಾಮಕ್ಕೆ ಭೂಮಿ ಪೂಜೆ ಹಾಗೂ ತುರುಗನೂರು ಗ್ರಾಮದಲ್ಲಿ 90 ಕೋಟಿ ರೂ. ವೆಚ್ಚದಲ್ಲಿ ಬ್ರಾಂಚ್ ನಾಲಾ ಆಧುನೀಕರಣ ಕಾಮಗಾರಿ ಪರಿಶೀಲನೆ ಮತ್ತು ಯಾಚೇನಹಳ್ಳಿ ಗ್ರಾಮದಲ್ಲಿ ಸಾರ್ವಜನಿಕ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು.

ಪ.ಜಾತಿ ಮೀಸಲಾತಿ ಕುರಿತಂತೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಶಿಫಾರಸ್ಸನ್ನು ತಿರಸ್ಕರಿಸಿತು. ಈಗ ನಮ್ಮ ಸರ್ಕಾರ ಸದಾಶಿವ ಆಯೋಗದ ವರದಿಯನ್ನು ಅಂಗೀಕರಿಸುವ ಉದ್ದೇಶಕ್ಕಾಗಿ ದತ್ತಾಂಶ ಸಂಗ್ರಹಣೆಗಾಗಿ ನಾಗಮೋಹನ್ ದಾಸ್ ಅವರ ಆಯೋಗ ರಚನೆ ಮಾಡಿದೆ, ಆಯೋಗದ ವರದಿ ಬಂದ ತಕ್ಷಣ ಒಳ ಮೀಸಲಾತಿ ಜಾರಿಗೆ ತರಲು ನಮ್ಮ ಸರ್ಕಾರ ಸಿದ್ದವಿದೆ ಎಂದು ಭರವಸೆ ನೀಡಿದರು.

ಕ್ಷೇತ್ರದಲ್ಲಿ ದೇಗುಲ ಜೀರ್ಣೋದ್ಧಾರ, ರಸ್ತೆ ನಿರ್ಮಾಣ, ನಾಲಾ ಹೂಳು ತೆಗೆಯುವುದು, ನಾಲಾ ದುರಸ್ತಿ, ಕುಡಿಯುವ ನೀರು, ಚರಂಡಿ ನಿರ್ಮಾಣ, ಕಾಂಕ್ರೀಟ್ ಮತ್ತು ಸಿಮೆಂಟ್ ರಸ್ತೆ ನಿರ್ಮಾಣಕ್ಕೆ ಅನುದಾನಗಳನ್ನು ತಂದು ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಶ್ರಮಿಸಲಾಗಿದೆ ಎಂದರು.

ಕುಡಿಯುವ ನೀರಿಗಾಗಿ 5 ಸಾವಿರ ಕೋಟಿ: ರಾಜ್ಯದಲ್ಲಿರುವ ಎಲ್ಲಾ ಎಸ್‌ಸಿ ಮತ್ತು ಎಸ್‌ಟಿ ಮನೆಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸಮಾಜ ಕಲ್ಯಾಣ ಇಲಾಖೆ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ 5 ಸಾವಿರ ಕೋಟಿ ರೂ.ಗಳನ್ನು ನೀಡಿದ್ದು, ತ್ವರಿತವಾಗಿ ಪ್ರತಿಯೊಂದು ಮನೆಗಳಿಗೆ ನಲ್ಲಿ ನೀರು ಸಂಪರ್ಕ ಒದಗಿಸಲಾಗುತ್ತದೆ ಎಂದರು.

ಎಸ್‌ಸಿಪಿಟಿ,ಎಸ್‌ಪಿ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿದೆ.ಕ್ಷೇತ್ರದ ಜನತೆಯ ಹಿತದೃಷ್ಟಿಯನ್ನು ಗಮನಿಸಿ ಕ್ಷೇತ್ರಕ್ಕೆ ಬೇಕಾದ ಎಲ್ಲ ಅಗತ್ಯ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದೇನೆ.ಕಳೆದ ಬಾರಿ ಚುನಾವಣೆಯಲ್ಲಿ ನನ್ನ ಮೇಲೆ ಅಭಿಮಾನ ಇಟ್ಟು ಒಗ್ಗಟ್ಟಾಗಿ ಬೆಂಬಲಿಸಿದ್ದೀರಿ,ಇದಕ್ಕೆ ಪ್ರತಿಯಾಗಿ ಕೋಟ್ಯಾಂತರ ರೂ.ಗಳನ್ನು ಮಂಜೂರು ಮಾಡಿ ಅಭಿವೃದ್ಧಿ ಕಾರ್ಯಕ್ಕೆ ಒತ್ತು ನೀಡಿದ್ದೇನೆ ಎಂದರು.



ತಿ.ನರಸೀಪುರ ತಾಲೂಕು ಯಾಚೇನಹಳ್ಳಿ ಗ್ರಾಮದಲ್ಲಿ 90 ಕೋಟಿ ರೂ.ಗಳ ವೆಚ್ಚದಲ್ಲಿ ಆಧುನೀಕರಣಗೊಳ್ಳುತ್ತಿರುವ ತುರುಗನೂರು ಬ್ರಾಂಚ್ ಕಾಲುವೆ ಕಾಮಗಾರಿಯನ್ನು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪರಿಶೀಲಿಸಿದರು.

90 ಕೋಟಿ ವೆಚ್ಚದಲ್ಲಿ ನಾಲೆ ಆಧುನೀಕರಣ: ತುರುಗನೂರು ಬ್ರಾಂಚ್ ಕಾಲುವೆಯನ್ನು ಕಳೆದ 40 ವರ್ಷಗಳ ಹಿಂದೆ ಒಮ್ಮೆ ಮಾತ್ರವೇ ದುರಸ್ತಿ ಮಾಡಲಾಗಿತ್ತು. ಕಳೆದ ಬಾರಿ ಲೋಕೋಪಯೋಗಿ ಸಚಿವನಾಗಿದ್ದ ವೇಳೆ ನಾಲೆಯ ಆಯ್ದ ಭಾಗಗಳನ್ನು ದುರಸ್ತಿ ಮಾಡಲಾಗಿತ್ತು. ಈಗ 90 ಕೋಟಿ ರೂ.ಗಳ ಅನುದಾನದಲ್ಲಿ ಇಡೀ ನಾಲೆಯನ್ನು ಆಧುನೀಕರಣ ಮಾಡಬೇಕೆಂಬ ಉದ್ದೇಶದಿಂದ ಕಾಮಗಾರಿ ಆರಂಭಿಸಲಾಗಿದೆ. ಒಟ್ಟು 21 ಕಿ.ಮೀ ನಾಲೆ ಆಧುನೀಕರಣವಾಗಲಿದ್ದು, ಈಗಾಗಲೇ 7 ಕಿ.ಮೀ.ಕಾಮಗಾರಿ ಮುಗಿದಿದೆ. 2ನೇ ಹಂತದಲ್ಲಿ ಸಹ 90 ಕೋಟಿ ರೂ.ಗಳ ಅನುದಾನಕ್ಕೆ ಬೋರ್ಡ್‌ನಲ್ಲಿ ಅಪ್ರೂವ್ ಮಾಡಿದ್ದೇನೆ ಎಂದರು.

ಮುಂದಿನ ಮುಖ್ಯಮಂತ್ರಿ ನೀವೇ....!

ಮಾದರಿ ವಿದ್ಯುತ್ ಗ್ರಾಮಕ್ಕೆ ವ್ಯಾಸರಾಜಪುರ ಗ್ರಾಮದಲ್ಲಿ ಭೂಮಿ ಪೂಜೆ ನೆರವೇರಿಸಿ ಮಾತನಾಡುವ ವೇಳೆ ನನ್ನನ್ನು ಕ್ಷೇತ್ರದ ಜನತೆ ಅತಿ ಪ್ರೀತಿಯಿಂದ ನೋಡಿಕೊಂಡಿದ್ದಾರೆ.ಕಳೆದ 40 ವರ್ಷಗಳಿಂದ ರಾಜಕೀಯ ಅಧಿಕಾರ ಕೊಟ್ಟಿದ್ದಾರೆ.ನನಗೆ ಅಷ್ಟೇ ಸಾಕು,ಎನ್ನುತ್ತಿದ್ದಂತೆ ಇಲ್ಲ ಸರ್ ,ಇನ್ನೂ ನೀವು ರಾಜಕೀಯದಲ್ಲಿರಬೇಕು,ಮುಂದಿನ ಬಾರಿ ನೀವೇ ಮುಖ್ಯಮಂತ್ರಿಯಾಗಬೇಕು ಎಂದು ಘೋಷಣೆ ಕೂಗಿದರು.ಇದಕ್ಕೆ ಮಹದೇವಪ್ಪ ಮಂದಹಾಸ ಬೀರಿ ನಿಮ್ಮ ಪ್ರೀತಿಗೆ ಧನ್ಯವಾದಗಳು ಎಂದಷ್ಟೇ ಹೇಳಿದರು.

ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು, ಹಿರಿಯ ಸಹಕಾರಿ ಯಾಚೇನಹಳ್ಳಿ ವೈ.ಎನ್.ಶಂಕರೇಗೌಡ, ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಎ.ಎನ್.ಸ್ವಾಮಿ, ಮಾಜಿ ಜಿ.ಪಂ. ಸದಸ್ಯ ಸುಧೀರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಮ್.ಡಿ.ಬಸವರಾಜು, ಚನ್ನಕೇಶವ, ಆಪ್ತ ಸಹಾಯಕ ಬಸವರಾಜು, ಅಂಕನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷೆ ರಜನಿ ಮಹಾದೇವ್, ತಾ.ಪಂ. ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಮಹದೇವಪ್ಪ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕಗ್ಗಲಿಪುರ ಕೆಎಮ್.ಮಧುಕುಮಾರ್, ಸುನಿಲ್ ಬೋಸ್ ಯುವ ಬ್ರಿಗೇಡ್ ಕಾರ್ಯದರ್ಶಿ ಕನ್ನನಾಯಕನಹಳ್ಳಿ ಕುಮಾರ್, ಯಾಚೇನಹಳ್ಳಿ ಅಶೋಕ್, ವಾಟಾಳು ಗ್ರಾ.ಪಂ. ಮಾಜಿ ಅಧ್ಯಕ್ಷ ನಾಗೇಶ್, ಕಟ್ಟೇಕೊಪ್ಪಲು ಶಿವಸಿದ್ದು, ಹನುಮನಾಳು ಡೈರಿ ಅಧ್ಯಕ್ಷ ಮರಿಗೌಡ, ಅತ್ತಹಳ್ಳಿ ಗ್ರಾ.ಪಂ.ಅಧ್ಯಕ್ಷ ಮಹೇಶ್, ಚೌಹಳ್ಳಿ ಮಲ್ಲೇಶ್, ಪಿಕಾರ್ಡ್ ನಿರ್ದೇಶಕ ಸೋಮಣ್ಣ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಮೈಸೂರು ಅರಮನೆ ಮುಂದೆ ಪ್ರಿ ವೆಡ್ಡಿಂಗ್ ಶೂಟ್; ವಾಹನ ಚಾಲಕರು, ಸಾರ್ವಜನಿಕರಿಗೆ ಕಿರಿಕಿರಿ

ವಾಹನ, ಜನ ದಟ್ಟಣೆ ಇರುವ ರಸ್ತೆಯಲ್ಲಿ ಬೇಕಾದಂತೆ ಫೋಟೋ ಶೂಟ್ ಮಾಡಲು ಅವಕಾಶ ನೀಡಿದವರ್ಯಾರು, ಸಂಚಾರಿ ಪೊಲೀಸರ ಕರ್ತವ್ಯದ ಬಗ್ಗೆ ಜನರ ಬೇಸರ



ಮೈಸೂರು, ಮಾ.22(ಬಿಎಲ್‌ಯು)– ವಿಶ್ವವಿಖ್ಯಾತ ಮೈಸೂರು ಅರಮನೆ ಹಾಗೂ ಸುತ್ತಮುತ್ತಲ ಕಣ್ಮನ ಸೆಳೆಯುವ ಪಾರಂಪರಿಕ ಸೌಂದರ್ಯದ ಹಿನ್ನೆಲೆಯಲ್ಲಿ ಪ್ರಿ ವೆಡ್ಡಿಂಗ್ ಫೋಟೋ ಶೂಟ್ ಹಾಗೂ ಬೇಬಿ ಬಂಪ್ ಶೂಟ್ ಮಾಡಿಸುವುದು ಹೊಸ ಟ್ರೆಂಡ್ ಆಗಿದೆ ಸದಾ ವಾಹನ ದಟ್ಟಣೆ ಇರುವ ರಸ್ತೆ ಮಧ್ಯೆ ಈ ರೀತಿಯ ಫೋಟೋ ಶೂಟ್‌ಗೆ ಆಕ್ರೋಶ ವ್ಯಕ್ತವಾಗಿದೆ.

ವಿವಾಹ ನಿಶ್ಚಯವಾಗಿರುವ ಯುವ ಜೋಡಿ, ಮೈಸೂರು ಅರಮನೆ ಮುಂದಿನ ಚಾಮರಾಜ ಒಡೆಯರ್ ವೃತ್ತದಲ್ಲಿ ಫೋಟೋ ಶೂಟ್ ಮಾಡುತ್ತಿರುವುದು ದಿನೇ ದಿನೆ ಹೆಚ್ಚಾಗುತ್ತಿದೆ. ಇದೊಂದು ರೀತಿ ಕ್ರೇಜ್ ಆಗಿದೆ. ತುಂಬು ಗರ್ಭಿಣಿಯರು ಕೂಡ ಬೇಬಿ ಬಂಪ್ ಶೂಟ್‌ಗೆ ಇದೇ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ಪ್ರತಿದಿನ ಮುಂಜಾನೆ ಅರಮನೆ ಮುಂಭಾಗ ಹತ್ತಾರು ಯುವ ಜೋಡಿ, ಒಂದೊಂದು ಸ್ಥಳ ಕಾಯ್ದಿರಿಸಿದಂತೆ ನಿಂತಿರುತ್ತಾರೆ. ತರೇವಾರಿ ದೃಶ್ಯಗಳಿಗೆ ಪೋಸ್ ನೀಡುತ್ತಿರುತ್ತಾರೆ. ಇಲ್ಲಿ ಫೋಟೋ ಶೂಟ್ ಮಾಡಿಸಲು ಯಾರ ಅಭ್ಯಂತರವಿಲ್ಲ. ಆದರೆ ಬಸ್ಸು, ಕಾರು, ಲಾರಿ ಸೇರಿದಂತೆ ನಾನಾ ವಾಹನಗಳು ಸಂಚರಿಸುವಾಗ ಅದರ ಮಧ್ಯೆ ಯಾವುದೇ ಎಚ್ಚರಿಕಾ ಕ್ರಮವಿಲ್ಲದೇ ಫೋಟೋ ಶೂಟ್ ಮಾಡಿಸುತ್ತಿರುವುದಕ್ಕೆ ಸಾರ್ವಜನಿಕರು ಆಕ್ಷೇಪ ಎತ್ತಿದ್ದಾರೆ.

ಯುವ ಜೋಡಿಗಳು ಫೋಟೋಗೆ ಪೋಸ್ ಕೊಡುವುದರಲ್ಲಿ ತಲ್ಲೀನರಾಗಿದ್ದರೆ, ಒಳ್ಳೆಯ ದೃಶ್ಯ ಸೆರೆ ಹಿಡಿಯುವುದರಲ್ಲಿ ಫೋಟೋಗ್ರಾಫರ್ ಕಾರ್ಯೋನ್ಮುಖನಾಗಿರುತ್ತಾನೆ. ಯಾವ ಪರಿಜ್ಞಾನವೂ ಇಲ್ಲದೆ ಇವರು ರಸ್ತೆ ಮಧ್ಯೆ ನಿಂತಿರುತ್ತಾರೆ. ವಾಹನಗಳು ಸಾಮಾನ್ಯವಾಗಿ ವೇಗವಾಗಿ ಸಂಚರಿಸುತ್ತವೆ. ಫೋಟೋ ಶೂಟ್ ಮಾಡುವುದರಿಂದ ಅಪಘಾತವಾಗುವ ಸಾಧ್ಯತೆ ಇರುತ್ತದೆ.

ತುಂಬು ಗರ್ಭಿಣಿಯರು ರಸ್ತೆ ಮಧ್ಯೆ ನಿಂತು ಫೋಟೋಗೆ ಪೋಸು ನೀಡುತ್ತಿರುತ್ತಾರೆ. ಯಾವುದಾದರೂ ವಾಹನ ವೇಗವಾಗಿ ಬಂದ ಸಂದರ್ಭದಲ್ಲಿ ಪಾರಾಗಲು ಓಡುವ ಸ್ಥಿತಿಯಲ್ಲಿ ಅವರು ಇರುವುದಿಲ್ಲ. ಸುರಕ್ಷಿತ ಸ್ಥಳದಲ್ಲಿ ನಿಂತು ಫೋಟೋ ಶೂಟ್ ಮಾಡಿಸಿಕೊಳ್ಳಲಿ ಎಂಬುದು ಕೆಲವರು ಸಲಹೆ.

ಬೆಳಿಗ್ಗೆ 8 ಗಂಟೆ ಒಳಗೆ ಫೋಟೋ ಶೂಟ್ ಮುಗಿಸಬೇಕು ಎಂದು ಪೊಲೀಸರು ತಾಕೀತು ಮಾಡಿದ್ದಾರೆ. ಆ ನಂತರವೂ ಯಾರಾದರೂ ಫೋಟೋ ಶೂಟ್ ಮಾಡುತ್ತಿದ್ದರೆ ಅವರ ಕ್ಯಾಮರಾಗಳನ್ನು ವಶಕ್ಕೆ ಪಡೆಯುತ್ತಿದ್ದಾರೆ.

ಭವಿಷ್ಯದಲ್ಲಿ ಯಾವುದೇ ಅನಾಹುತ ಆಗದಂತೆ ಪೊಲೀಸರು ಮುತುವರ್ಜಿ ವಹಿಸಬೇಕು. ಫೋಟೋ ಶೂಟ್ ಮಾಡಲು ಕೆಲವು ಮಾರ್ಗಸೂಚಿ ಸಿದ್ಧಪಡಿಸುವುದು ಒಳಿತು ಎಂದು ಅಭಿಪ್ರಾಯಪಟ್ಟಿದ್ದಾರೆ.

ಎಚ್ಚರಿಕೆ ವಹಿಸಲು ತಿಳಿ ಹೇಳುತ್ತೇವೆ

ಪ್ರಿ ವೆಡ್ಡಿಂಗ್ ಫೋಟೋ ಶೂಟ್ ಮಾಡಿಸುವ ಸಂದರ್ಭದಲ್ಲಿ ಎಚ್ಚರಿಕೆ ವಹಿಸುವಂತೆ ತಿಳಿಹೇಳುತ್ತೇವೆ. ಈ ಸಂಬಂಧ ರಾಜ್ಯದ ಎಲ್ಲಾ ಫೋಟೋಗ್ರಾಫರ್‌ಗಳ ವಾಟ್ಸಾಪ್ ಗ್ರೂಪ್‌ನಲ್ಲಿ ಈ ವಿಚಾರವನ್ನು ಮನದಟ್ಟು ಮಾಡುತ್ತೇವೆ. ರಸ್ತೆ ಮಧ್ಯೆ ನಿಂತು ಫೋಟೋ ಶೂಟ್ ಮಾಡಿಸಬಾರದು. ವಾಹನ ಸಂಚಾರದ ಬಗ್ಗೆ ಎಚ್ಚರಿಕೆ ವಹಿಸುವಂತೆ ಹೇಳುತ್ತೇವೆ.

- ಮಹೇಶ್, ಅಧ್ಯಕ್ಷ, ಮೈಸೂರು ಫೋಟೋಗ್ರಾಫರ್,ಅಸೋಸಿಯೇಷನ್.

ಮೈಸೂರು ಪಾಲಿಕೆ ಬಜೆಟ್ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದೆ!

ನಿಖರ-ನಿರ್ದಿಷ್ಟವಾಗಿ ಯಾವುದೇ ಸಮಸ್ಯೆ, ಅಭಿವೃದ್ಧಿಗೆ ಆದ್ಯತೆಯೂ ಇಲ್ಲ; ಭರವಸೆಯೂ ಇಲ್ಲ



ಮೈಸೂರು, ಮಾ.22– ಮೈಸೂರು ಮಹಾನಗರ ಪಾಲಿಕೆ ಬಜೆಟ್‌ನಲ್ಲಿ ನಾಗರಿಕರ ಮೂಲ ಸೌಕರ್ಯಗಳ ನಿರ್ವಹಣೆಗೆ ಆದ್ಯತೆ ನೀಡಿಲ್ಲ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರಾದೇಶಿಕ ಆಯುಕ್ತರೂ ಆದ ಪಾಲಿಕೆ ಆಡಳಿತಾಧಿಕಾರಿಗಳು ಮಂಡಿಸಿದ 2025–26ನೇ ಸಾಲಿನ ಆಯವ್ಯಯದ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಚುನಾಯಿತ ಸದಸ್ಯರಿದ್ದಾಗ ಬಜೆಟ್ ಕುರಿತು ಮೂರು ದಿನಗಳ ಕಾಲ ಚರ್ಚೆ ನಡೆಯುತ್ತಿತ್ತು. ಆದರೆ ಸತತ ಎರಡನೇ ಬಾರಿ ಯಾವುದೇ ಚರ್ಚೆ ಇಲ್ಲದೆ ಕೇವಲ ಹದಿನೈದು ನಿಮಿಷದಲ್ಲಿ ಬಜೆಟ್ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಉತ್ತಮ ರಸ್ತೆ, ಸಮರ್ಪಕ ಒಳಚರಂಡಿ, ಶುದ್ಧ ಕುಡಿಯುವ ನೀರು, ಬೀದಿ ದೀಪ ಇನ್ನಿತರ ಮೂಲ ಸೌಕರ್ಯ ನಿರ್ವಹಣೆಗೆ ಬಜೆಟ್‌ನಲ್ಲಿ ಆದ್ಯತೆ ನೀಡಬೇಕಿತ್ತು. ಆದರೆ ಈ ಸಾಲಿನ ಬಜೆಟ್‌ನಲ್ಲಿ ಅತ್ಯಗತ್ಯವಾದ ಕಸ ವಿಂಗಡಣೆ ಹಾಗೂ ನೀರಿನ ಪುನರ್ ಬಳಕೆ ಯೋಜನೆ ಬಗ್ಗೆ ಪ್ರಸ್ತಾಪಿಸಿಲ್ಲ. ಬದಲಾಗಿ ಕಾಮಗಾರಿಗಳಿಗೇ ಹೆಚ್ಚು ಗಮನ ಹರಿಸಲಾಗಿದೆ. ಈಗಾಗಲೇ ಆರ್.ಕೆ.ನಾರಾಯಣ್ ಅವರ ನಿವಾಸವನ್ನು ಸ್ಮಾರಕವಾಗಿಸಲು ಪಾಲಿಕೆ ಕೋಟ್ಯಾಂತರ ರೂ. ವೆಚ್ಚ ಮಾಡಿದೆ. ಇದೀಗ ಅಲ್ಲಿನ ವಸ್ತು ಸಂಗ್ರಹಾಲಯವನ್ನು ಮೇಲ್ದರ್ಜೆಗೇರಿಸಲು ಯೋಜನೆ ಕೈಗೊಳ್ಳಲು ನಿರ್ಧರಿಸಿದ್ದಾರೆ. ಹೀಗೆ ವಸ್ತು ಸಂಗ್ರಹಾಲಯ, ಸ್ಮಾರಕ ಹಾಗೂ ಪ್ರತಿಮೆ ನಿರ್ಮಿಸುವುದಷ್ಟೇ ಪಾಲಿಕೆಯ ಕೆಲಸವಾಗಬಾರದು ಎಂದಿದ್ದಾರೆ.

ಅಧಿಕಾರಿಗಳು ಕಂದಾಯ ವಸೂಲಿಯಲ್ಲೂ ಹಿಂದೆ ಬಿದ್ದಿರುವುದರಿಂದ ಪಾಲಿಕೆಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಹಲವು ಗುತ್ತಿಗೆದಾರರ ಬಿಲ್ ಬಾಕಿಯಿದೆ. ಪೌರ ಕಾರ್ಮಿಕರಿಗೆ ಸರಿಯಾಗಿ ವೇತನ ಪಾವತಿಸುತ್ತಿಲ್ಲ. ವಾರ್ಷಿಕ 500 ಕೋಟಿಗೂ ಅಧಿಕ ತೆರಿಗೆ ಸಂಗ್ರಹಿಸುವ ಅವಕಾಶವಿದ್ದರೂ 200–220 ಕೋಟಿ ರೂ. ಮೀರಿಲ್ಲ. ಸರ್ಕಾರದ ಕಟ್ಟಡಗಳಿಂದ ಸಮರ್ಪಕವಾಗಿ ಕಂದಾಯ ವಸೂಲಿ ಮಾಡುತ್ತಿಲ್ಲ. ನೀರಿನ ಕರವನ್ನು ಸಮರ್ಪಕವಾಗಿ ಸಂಗ್ರಹಿಸುತ್ತಿಲ್ಲ. ಈ ಬಗ್ಗೆ ಹಿಂದಿನ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದರೂ ಪ್ರಯೋಜನವಾಗಲಿಲ್ಲ. ಹಿಂದಿನ ಕೆಲವು ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಪಾಲಿಕೆಗೆ ಈ ಸ್ಥಿತಿ ಬಂದಿದೆ. ತೆರಿಗೆ ಮತ್ತು ಸರ್ಕಾರದ ಅನುದಾನದ ಹೊರತಾಗಿ ಸ್ವಂತ ಆದಾಯ ಮೂಲವನ್ನು ಸೃಷ್ಟಿಸಿಕೊಳ್ಳುವತ್ತ ಅಧಿಕಾರಿಗಳು ಚಿಂತಿಸುತ್ತಿಲ್ಲ. ಪಾಲಿಕೆ ಮಳಿಗೆಗಳಿಗೆ 20–30 ವರ್ಷದ ಹಿಂದಿನ ಬಾಡಿಗೆ ಪರಿಷ್ಕರಿಸಿಲ್ಲ. ಹಲವು ವಾಣಿಜ್ಯ ಕಟ್ಟಡಗಳು ಶಿಥಿಲವಾಗಿದ್ದರೂ ತಲೆ ಕೆಡಿಸಿಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕಂದಾಯ ಪಾವತಿಗೆ ಅನ್‌ಲೈನ್ ವ್ಯವಸ್ಥೆಯಾಗಬೇಕು. ಇ–ಖಾತಾ ಪ್ರಕ್ರಿಯೆ ಸರಳೀಕರಣಗೊಳಿಸಬೇಕು. ಪಾಲಿಕೆಯ ವಲಯ ಕಚೇರಿಗಳಲ್ಲಿನ ಆರ್‌ಐ, ಎಆರ್‌ಓ, ಆರ್‌ಓ ಮುಂತಾದ ಅಧಿಕಾರಿಗಳಿಗೆ ತೆರಿಗೆ ನಿಗದಿಪಡಿಸಿ, ವಸೂಲಿ ಮಾಡುವ ಅಧಿಕಾರ ನೀಡಬೇಕು. ಸರ್ಕಾರದ ಆದೇಶವಿಲ್ಲದೆ ನಿಯಮಬಾಹಿರವಾಗಿ ವಿಧಿಸುವ ತೆರಿಗೆಗಳಿಗೆ ಕಡಿವಾಣ ಹಾಕಬೇಕು. ನಗರದ ಅಭಿವೃದ್ಧಿಗೆ ಅಧಿಕಾರಿಗಳ ಇಚ್ಛಾಶಕ್ತಿ ತುಂಬಾ ಅವಶ್ಯಕ. ಪ್ರಾಮಾಣಿಕ ಅಧಿಕಾರಿಗಳನ್ನು ನಿಯೋಜಿಸಿ 2–3 ವರ್ಷ ವರ್ಗಾವಣೆ ಮಾಡದೆ ಕಾರ್ಯ ನಿರ್ವಹಿಸಲು ಅವಕಾಶ ನೀಡಬೇಕು ಎಂದು ಸಲಹೆ ನೀಡಿದ್ದಾರೆ.

ಅಂಬೇಡ್ಕರ್ ಭವನ ಕಾಮಗಾರಿ ವಿಚಾರ

ಸಚಿವ ಮಹದೇವಪ್ಪರ ಮನೆ ಮುತ್ತಿಗೆ ನಿರ್ಧಾರ ಕೈಬಿಡಲು ಆಗ್ರಹ



ಸುದ್ದಿಗೋಷ್ಠಿಯಲ್ಲಿ ಎನ್.ಭಾಸ್ಕರ್ ಮಾತನಾಡಿದರು.

ಮೈಸೂರು, ಮಾ.22(ಎಂಕೆ)– ಮೈಸೂರಿನ ಅಂಬೇಡ್ಕರ್ ಭವನದ ಕಾಮಗಾರಿ ಪುನರಾರಂಭಿಸುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ಮುಖಂಡ ಬೆಟ್ಟಯ್ಯ ಕೋಟೆ ನೇತೃತ್ವದಲ್ಲಿ ಮಾ.24 ರಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಮನೆ ಮುತ್ತಿಗೆ ಹಾಕುವ ನಿರ್ಧಾರವನ್ನು ಕೂಡಲೇ ಕೈಬಿಡುವಂತೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಆಗ್ರಹಿಸಿದರು.

ಜನದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದ ಅವರು, 2018ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್–ಜೆಡಿಎಸ್ ಸರ್ಕಾರ ಮತ್ತು 2019 ರಲ್ಲಿ ಬಂದ ಬಿಜೆಪಿ ಸರ್ಕಾರ ಈ ಕಾಮಗಾರಿ ಪೂರ್ಣಗೊಳಿಸಲು ಮುತುವರ್ಜಿ ವಹಿಸಲಿಲ್ಲ. ಈಗ ಸಚಿವ ಮಹದೇವಪ್ಪ ಅವರ ಕಾಳಜಿಯಿಂದ ಮತ್ತು ಸುಸಜ್ಜಿತ ಆಸನ, ಹವಾನಿಯಂತ್ರಿತವಾಗಿ ಮಾಡಬೇಕು ಎಂಬ ಉದ್ದೇಶದಿಂದ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಹೆಚ್ಚುವರಿ 23 ಕೋಟಿ ರೂ. ಹಣ ಬಿಡುಗಡೆ ಮಾಡಿಸಿದ್ದಾರೆ. ಮಾ.27 ರಂದು ನಡೆಯುವ ಕ್ಯಾಬಿನೆಟ್ ಸಭೆಯಲ್ಲಿ ಅನುಮೋದನೆ ದೊರೆಯಲಿದ್ದು, ಇನ್ನು 15 ದಿನಗಳಲ್ಲಿ ಕಾಮಗಾರಿ ಪುನರಾರಂಭವಾಗಿ ಒಂದು ವರ್ಷದಲ್ಲಿ ಪೂರ್ಣಗೊಂಡು ಸಾರ್ವಜನಿಕರ ಅನುಕೂಲಕ್ಕೆ ಅವಕಾಶ ದೊರೆಯಲಿದೆ.

> **ಮೈಸೂರಿನ ಹೃದಯ ಭಾಗದಲ್ಲಿ ಅಂಬೇಡ್ಕರ್ ಭವನ ರಾಜ್ಯದಲ್ಲಿಯೇ ಮಾದರಿಯಾಗಿ ನಿರ್ಮಾಣ ಮಾಡಬೇಕು ಎಂಬ ಸದುದ್ದೇಶ ಸಚಿವ ಮಹದೇವಪ್ಪ ಅವರಿಗೂ ಇದೆ. ಇಲ್ಲಿ ಅಂಬೇಡ್ಕರ್ ಭವನ ಆಗಬೇಕು ಎಂದು 1994ರಲ್ಲಿಯೇ ಆರೋಗ್ಯ ಸಚಿವರಾಗಿದ್ದಾಗ ಮಹದೇವಪ್ಪ ಅವರು, ಅಂದಿನ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸಿದ್ಧರಾಮಯ್ಯ ಅವರ ಗಮನಕ್ಕೆ ತಂದಿದ್ದರು. ಅದರ ಪ್ರತಿಫಲವಾಗಿ 2013ರಲ್ಲಿ ಸಿದ್ಧರಾಮಯ್ಯ ಅವರು ಮುಖ್ಯಮಂತ್ರಿಯಾದ ಮೇಲೆ 19 ಕೋಟಿ ರೂ. ಹಣ ನೀಡಿ, ಅಂಬೇಡ್ಕರ್ ಭವನದ ಕಾಮಗಾರಿ ಆರಂಭವಾಗಿ ಕಾರಣಾಂತರಗಳಿಂದ ಅರ್ಧಕ್ಕೆ ನಿಂತು ಹೋಗಿದ್ದು, ಮತ್ತೆ ಮಹದೇವಪ್ಪ ಅವರ ನೇತೃತ್ವದಲ್ಲೇ ಕಾಮಗಾರಿ ಪೂರ್ಣಗೊಳ್ಳಲಿದೆ.**
>
> **- ಎನ್.ಭಾಸ್ಕರ್, ರಾಜ್ಯಾಧ್ಯಕ್ಷ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ**

ಹಾಗಾಗಿ ಸಚಿವರ ಮನಗೆ ಮುತ್ತಿಗೆ ಹಾಕುವ ನಿರ್ಧಾರ ಮಾಡಿರುವ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ತಮ್ಮ ನಿರ್ಧಾರವನ್ನು ಬದಲಿಸಿ ತಾಳ್ಮೆಯಿಂದ ಇರಬೇಕು. ನಿಮ್ಮ ಹೋರಾಟದ ಬಗ್ಗೆ ನಮಗೆ ಗೌರವವಿದೆ. ಆದರೆ, ಸಮುದಾಯಗಳಲ್ಲಿ ಗೊಂದಲ ಉಂಟಾಗಲು ಅವಕಾಶ ನೀಡಬಾರದು ಎಂದು ಹೇಳಿದರು.

ಕುಂಠಿತವಾಗಬಹುದು: ಕಾಂಗ್ರೆಸ್ ಸರ್ಕಾರ ದಲಿತರ ಪರವಾಗಿದ್ದು, ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗುವ ಹಂತದಲ್ಲಿರುವಾಗ ಈ ರೀತಿ ಸಚಿವರ ಮನೆ ಮುತ್ತಿಗೆ ಹಾಕುವುದು ಸರಿಯಲ್ಲ. ಇದರಿಂದ ಅವರಿಗೆ ಆಸಕ್ತಿ ಕಡಿಮೆಯಾಗಿ ಅಂಬೇಡ್ಕರ್ ಭವನದ ಕೆಲಸ ಕುಂಠಿತವಾಗಬಹುದು. ಆದ್ದರಿಂದ ದಲಿತ ಬಾಂಧವರು ಮುತ್ತಿಗೆ ಯತ್ನದಿಂದ ಹಿಂದೆ ಸರಿಯಬೇಕು ಎಂದರು.

ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಈಶ್ವರ್ ಚಕ್ಕಡಿ, ಕಾಂಗ್ರೆಸ್ ಕಾನೂನು ಘಟಕದ ರಾಜ್ಯ ಕಾರ್ಯದರ್ಶಿ ಪುಟ್ಟರಸ ಉಪಸ್ಥಿತರಿದ್ದರು.

ಧರೆಗುರುಳಿದ ಮದ್ದೂರಮ್ಮ ಜಾತ್ರೆಯ 150 ಅಡಿ ತೇರು: ಓರ್ವ ಸಾವು

ಆನೇಕಲ್, ಮಾ.22– ಮದ್ದೂರಮ್ಮ ಜಾತ್ರೆಯಲ್ಲಿ ಕುರ್ಜುಗಳು (ತೇರು) ಧರೆಗುರುಳಿದ ಘಟನೆ ಆನೇಕಲ್ ತಾಲೂಕಿನಲ್ಲಿ ನಡೆದಿದೆ. ಕುರ್ಜು ಕೆಳಗೆ ಸಿಲುಕಿ ಓರ್ವ ದಾರುಣ ಸಾವನ್ನಪ್ಪಿದ್ದಾರೆ.

ಆನೇಕಲ್ ತಾಲೂಕಿನ ಹುಸ್ಕೂರು ಮದ್ದೂರಮ್ಮ ದೇವಿ ಜಾತ್ರೆಯಲ್ಲಿ ಈ ದುರ್ಘಟನೆ ನಡೆದಿದೆ. ಜಾತ್ರೆಗೆ ಗ್ರಾಮಗಳಿಂದ 150 ಕ್ಕೂ ಹೆಚ್ಚು ಅಡಿ ಎತ್ತರದ ಕುರ್ಜುಗಳು ಆಗಮಿಸಿದ್ದವು. ತೇರು ಎಳೆದು ತರುವ ಸಂದರ್ಭದಲ್ಲಿ ಅವಘಡ ಸಂಭವಿಸಿದೆ.

ಮದ್ದೂರಮ್ಮ ಜಾತ್ರೆಗೆ ನೂರಾರು ವರ್ಷಗಳ ಇತಿಹಾಸವಿದೆ. ಟ್ರ್ಯಾಕ್ಟರ್ ಹಾಗೂ ನೂರಾರು ಎತ್ತುಗಳ ಮೂಲಕ ಎಳೆದು ತರುವ ಹೆಸರಾಂತ ಜಾತ್ರೆ ಇದು. ಪ್ರತಿಷ್ಟೆಗೆ ಅತೀ ಎತ್ತರ ತೇರು ಕಟ್ಟಿ ಎಳೆದು ತರುವ ಜಾತ್ರೆ ನೋಡಲು ಲಕ್ಷಾಂತರ ಜನ ಆಗಮಿಸುತ್ತಿದ್ದರು. ಗಾಳಿ ಸಹಿತ ಮಳೆಯಿಂದಾಗಿ ಆಯತಪ್ಪಿ ತೇರು ಬಿದ್ದಿದೆ.

ಘಟನೆಯಲ್ಲಿ ಹಲವರಿಗೆ ಗಾಯಗಳಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕುರ್ಜು ನಿಧಾನವಾಗಿ ಉರುಳಿದ್ದರಿಂದ ಅಪಾಯವನ್ನರಿತ ಭಕ್ತರು ಅವಘಡದಿಂದ ತಪ್ಪಿಸಿಕೊಂಡಿದ್ದಾರೆ. ಈ ಹಿಂದೆ ರಾಯಸಂದ್ರದ ಕುರ್ಜು ಉರುಳಿ ಬಿದ್ದಿತ್ತು, ಕಳೆದ ವರ್ಷ ಮತ್ತೊಂದು ಕುರುಜು ಉರುಳಿದ್ದನ್ನು ನೆನಪಿಸಬಹುದಾದರೂ ಆಗಲೂ ಯಾರಿಗೂ ಏನೂ ಆಗದಂತೆ ದೇವಿ ಕಾಪಾಡಿದ್ದಳು ಎನ್ನುವುದೇ ಎಲ್ಲರ ನಂಬಿಕೆಯಾಗಿದೆ

ಮೈಸೂರಲ್ಲಿ ವಿಶ್ವಜಲ ದಿನ ಆಚರಣೆ

ಕೆರೆ ಸಂರಕ್ಷಣೆ; ಮರ, ಪಕ್ಷಿಗಳ ಮಹತ್ವದ ನಡಿಗೆ



ವಿಶ್ವ ಜಲ ದಿನದ ಅಂಗವಾಗಿ ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ನಡೆದ ಪರಿಸರ ನಡಿಗೆಯಲ್ಲಿ ಜಲತಜ್ಞ ಪ್ರೊ.ಯು.ಎನ್.ರವಿಕುಮಾರ್ ಪರಿಸರ ಪ್ರೇಮಿಗಳಿಗೆ ಮಾಹಿತಿ ನೀಡುತ್ತಿರುವುದು.

ಮೈಸೂರು, ಮಾ.22(ಎಂಟಿವೈ)– ವಿಶ್ವ ಜಲ ದಿನದ ಅಂಗವಾಗಿ ಮೈಸೂರಿನ ಕುಕ್ಕರಹಳ್ಳಿ ಆವರಣದಲ್ಲಿ ಶನಿವಾರ ಬೆಳಗ್ಗೆ ಆಯೋಜಿಸಿದ್ದ ಪ್ರಕೃತಿ ನಡಿಗೆ ಹಾಗೂ ಪಕ್ಷಿ ವೀಕ್ಷಣೆಯಲ್ಲಿ 80ಕ್ಕೂ ಹೆಚ್ಚು ಪರಿಸರ ಪ್ರೇಮಿಗಳು, ಕುಕ್ಕರಹಳ್ಳಿ ಕೆರೆ ವೈವಿಧ್ಯತೆಯ ಬಗ್ಗೆ ಮಾಹಿತಿ ಪಡೆದರು.

ವಾಟರ್ ಫೋರಂ ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಹಾಗೂ ಮೈಸೂರು ಗ್ರಾಹಕರ ಪರಿಷತ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಜಲ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ 80ಕ್ಕೂ ಹೆಚ್ಚು ಮಂದಿ ಪರಿಸರ ಪ್ರೇಮಿಗಳು ಮೂರು ತಂಡಗಳಾಗಿ ವಿಂಗಡಣೆ ಮಾಡಿ, ಕುಕ್ಕರಹಳ್ಳಿ ಕೆರೆಯ ಗಿಡ–ಮರಗಳು ಹಾಗೂ ಪಕ್ಷಿ ವೀಕ್ಷಣೆಯಲ್ಲಿ ಪಾಲ್ಗೊಂಡರು.

ಪ್ರಕೃತಿ ನಡಿಗೆ: ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ನಡೆದ ಪ್ರಕೃತಿ ನಡಿಗೆಯಲ್ಲಿ ಜಲತಜ್ಞ ಪ್ರೊ.ಯು.ಎನ್.ರವಿಕುಮಾರ್ ಪರಿಸರ ಪ್ರೇಮಿಗಳಿಗೆ ಕೆರೆಯ ಮಹತ್ವ ವಿವರಿಸಿದರು. ಮುಂದಿನ ಪೀಳಿಗೆಗೆ ಕೆರೆಗಳನ್ನು ಉಳಿಸಬೇಕು. ಎಲ್ಲಿ ಕೆರೆಗಳಿರುತ್ತವೆಯೋ ಅಲ್ಲಿ ಜೀವವೈವಿಧ್ಯತೆ ನೆಲೆಸಿರುತ್ತದೆ. ಕೆರೆಗಳಿಂದಲೇ ಅಂತರ್ಜಲ ಮರುಪೂರಣಗೊಳ್ಳುತ್ತದೆ. ಅಲ್ಲದೆ, ನದಿ ನೀರಿಗೆ ಆಸರೆಯಾಗುತ್ತದೆ. ಹಾಗಾಗಿ ಕೆರೆಗಳ ಸಂರಕ್ಷಣೆ ಅನಿವಾರ್ಯ ಎಂದರು.

ವಿಶ್ವ ಜಲ ದಿನವನ್ನು ಒಂದೊಂದು ಧ್ಯೇಯ ವಾಕ್ಯದೊಂದಿಗೆ ವಿಶ್ವ ಸಂಸ್ಥೆ ಆಚರಿಸುತ್ತಿದೆ. ಈ ವರ್ಷ ಹಿಮ ನದಿಗಳ ಸಂರಕ್ಷಣೆಯ ಧ್ಯೇಯ ಹೊಂದಲಾಗಿದೆ. ದಕ್ಷಿಣ ಭಾರತದಲ್ಲಿ ದೊಡ್ಡಮಟ್ಟದ ಪರ್ವತಗಳಿಲ್ಲ. ಆ ಕಾರಣದಿಂದ ನಮ್ಮ ಜಲಮೂಲಗಳಾದ ನದಿ, ಕೆರೆ ಸಂರಕ್ಷಣೆ ಮಾಡಬೇಕು. ಜಲಮೂಲಗಳ ರಕ್ಷಣೆ ಮಾಡಿದರೆ ಸಸ್ಯ, ಪ್ರಾಣಿ, ಪಕ್ಷಿ ಸಂಪತ್ತು ಸಂರಕ್ಷಣೆ ಮಾಡಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪಕ್ಷಿ ವೀಕ್ಷಣಾ ನಡಿಗೆ: ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ನಡೆದ ಪಕ್ಷಿ ವೀಕ್ಷಣಾ ನಡಿಗೆಯಲ್ಲಿ ಪಾಲ್ಗೊಂಡಿದ್ದ ಪಕ್ಷಿ ಪ್ರಿಯರಿಗೆ ಪಕ್ಷಿ ತಜ್ಞ ಸಪ್ತಗಿರೀಶ್ ಮಾಹಿತಿ ನೀಡಿ, ಇಲ್ಲಿಗೆ ವಲಸೆ ಪಕ್ಷಿಗಳು ಹೆಚ್ಚಾಗಿ ಬರುತ್ತವೆ. ಕೆರೆ ಪರಿಸರ ಉತ್ತಮವಾಗಿದ್ದ ಸಂದರ್ಭದಲ್ಲಿ ದ್ವೀಪ ಸೇರಿದಂತೆ ಕೆರೆ ಆವರಣ ನಾನಾ ಬಗೆಯ ಪಕ್ಷಿಗಳ ಆವಾಸ ಸ್ಥಾನವೂ ಆಗಿತ್ತು ಎಂದರು.

ಪಕ್ಷಿ ನಡಿಗೆಯಲ್ಲಿ ವಲಸೆ ಪಕ್ಷಿಗಳಾದ ಗೋಲ್ಡನ್ ಓರಿಯಲ್, ಕಾಮನ್ ಸ್ಯಾಂಡ್‌ಪಿಪ್ಪರ್ ಸೇರಿದಂತೆ 43 ಬಗೆಯ ಪಕ್ಷಿಗಳನ್ನು ಗುರುತಿಸಿ, ಪಕ್ಷಿ ವೀಕ್ಷಣಾ ನಡಿಗೆಯಲ್ಲಿ ಪಾಲ್ಗೊಂಡಿದ್ದ ಪಕ್ಷಿ ಪ್ರೇಮಿಗಳಿಗೆ ಮಾಹಿತಿ ನೀಡಿದರು. ಕಂಡ ಪಕ್ಷಿಗಳ ಬಗ್ಗೆ ಮಾಹಿತಿಯನ್ನು ದಾಖಲೀಕರಿಸಿಕೊಂಡರು.

ಮರ ನಡಿಗೆ: ಮರ ನಡಿಗೆಯಲ್ಲಿ ಪರಿಸರ ತಜ್ಞ ಗುರು ಪ್ರಸಾದ್ ಮರಗಳ ಬಗ್ಗೆ ಮಾಹಿತಿ ಒದಗಿಸಿದರು. ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಬೆಳೆದಿರುವ ಪ್ರಮುಖ ಮರಗಳೂ ಸೇರಿದಂತೆ ಸಸ್ಯ ಹಾಗೂ ಮರಗಳ ಸಂಪತ್ತಿನ ವಿವರಣೆ ನೀಡಿದರು. ಪರಿಸರ ಸಂರಕ್ಷಣೆಯಲ್ಲಿ ಗಿಡ–ಮರಗಳ ಪಾತ್ರದ ಬಗ್ಗೆ ವಿವರಿಸಿದರು.

ಸಂವಾದ: ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ನಡೆದ ಮೂರು ನಡಿಗೆ ಕಾರ್ಯಕ್ರಮ ಮುಗಿದ ಬಳಿಕ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪರಿಸರ ಪ್ರೇಮಿಗಳು ಹಲವು ಪ್ರಶ್ನೆಗಳು ಮುಂದಿಟ್ಟು ಕೆರೆಗಳ ಸಂರಕ್ಷಣೆಯ ಮಹತ್ವ, ಅನಿವಾರ್ಯತೆ ಹಾಗೂ ಪ್ರಸ್ತುತ ಕೆರೆಗಳ ಸ್ಥಿತಿಗತಿ ಬಗ್ಗೆ ಮಾಹಿತಿ ಪಡೆದರು.

ಈ ವೇಳೆ ಜಲತಜ್ಞ ಪ್ರೊ.ಯು.ಎನ್.ರವಿಕುಮಾರ್ ಮಾತನಾಡಿ, ಕೆರೆಗಳು ನಮ್ಮ ಜಲಮೂಲಗಳಾಗಿವೆ. ಅವುಗಳ ಸಂರಕ್ಷಣೆ ಅನಿವಾರ್ಯ. ಮೈಸೂರಿನ ಕೆರೆಗಳ ಸಂರಕ್ಷಣೆ ಮಾಡಲೇಬೇಕಾಗಿದೆ. ಪ್ರಮುಖವಾಗಿ ಕೆರೆ ಜಾಲದ ಸಂರಕ್ಷಣೆ ಮಾಡಬೇಕು. ಇಲ್ಲದಿದ್ದರೆ ನಗರ ಪ್ರದೇಶದಲ್ಲಿ ಪ್ರವಾಹ(ಅರ್ಬನ್ ಫ್ಲಡ್)ದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕೆರೆಯಿಂದ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆ ರಕ್ಷಣೆ ಅಗತ್ಯ. ಕೆರೆ ಜಾಲದಲ್ಲಿ ಒಂದು ಲಿಂಕ್ ತಪ್ಪಿದರೆ ನೀರು ಬೇರೆ ಕಡೆ ಹರಿದು ಹೋಗುತ್ತದೆ. ಕಳೆದ 3–4 ವರ್ಷದ ಹಿಂದೆ ಬೋಗಾದಿ ಭಾಗದಲ್ಲಿ ಪ್ರವಾಹ ಉಂಟಾಗಿತ್ತು. ಈ ಕಾರಣದಿಂದ ಕೆರೆ ಜಾಲ ಸಂರಕ್ಷಣೆ ಮಾಡಿಕೊಳ್ಳಬೇಕು. ಮೈಸೂರಲ್ಲಿ 73 ಕೆರೆಗಳಿವೆ. ಅವುಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಕೆರೆ ಒತ್ತುವರಿ, ರಾಜಕಾಲುವೆ ಒತ್ತುವರಿ ಮಾಡಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಪರಿಸರ ಪ್ರೇಮಿ ಶೈಲಜೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಖಡ್ಗಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಸಲಾರ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮಯೂರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಅಸ್ತ್ರಂ ದಿ ಸೀಕ್ರೆಟ್ (ತ)	4 ಪ್ರದರ್ಶನಗಳು
ಸಂಗಂ	
ಬರ್ಗೆಟ್ ಬಸ್ಯಾ (ಕ)	4 ಪ್ರದರ್ಶನಗಳು
ಲಿಡೋ	
ಫಾರೆಸ್ಟ್(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಫಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ10.20ಕ್ಕೆ, ಅಪ್ಪು (ಕ): ಮ1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪ್ಯಾಲೆಸ್ಟಿನ್ ಮೇಲಿನ ಇಸ್ರೇಲ್ ದಾಳಿ ಖಂಡಿಸಿ ಮೈಸೂರಲ್ಲಿ ಎಸ್‌ಡಿಪಿಐ ಪ್ರತಿಭಟನೆ



ಪ್ಯಾಲೆಸ್ಟಿನ್ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿ ಖಂಡಿಸಿ ಎಸ್‌ಡಿಪಿಐ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮಾ.22(ಎಂಕೆ)– ಪ್ಯಾಲೆಸ್ಟಿನ್ ಗುರಿಯಾಗಿಸಿ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಖಂಡಿಸಿ ಎಸ್‌ಡಿಪಿಐ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಂತ ಫಿಲೋಮಿನಾ ಚರ್ಚ್ ಎದುರು ಶನಿವಾರ ಮಧ್ಯಾಹ್ನ ಜಮಾಯಿಸಿದ ಎಸ್‌ಡಿಪಿಐ ಕಾರ್ಯಕರ್ತರು ಇಸ್ರೇಲ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ಇಸ್ರೇಲ್ ಕದನ ವಿರಾಮ ಘೋಷಿಸಿದ ನಂತರ ಏಕಾಏಕಿ ಪ್ಯಾಲೆಸ್ಟಿನ್ ಮೇಲೆ ವೈಮಾನಿಕ ದಾಳಿ ನಡೆಸಿ ಸುಮಾರು 500ಕ್ಕೂ ಹೆಚ್ಚು ಜನರನ್ನು ಕೊಂದು ಹಾಕಿದೆ. ಇದರಲ್ಲಿ 200ಕ್ಕೂ ಹೆಚ್ಚು ಮಕ್ಕಳು ಮೃತರಾಗಿದ್ದಾರೆ. ಅಮೆರಿಕಾ ಪರೋಕ್ಷವಾಗಿ ಇಸ್ರೇಲ್ ಜನಾಂಗೀಯ ಹತ್ಯೆಗೆ ಕುಮ್ಮಕ್ಕು ನೀಡಿದರೆ, ವಿಶ್ವಸಂಸ್ಥೆ ಕಣ್ಣಿದ್ದು ಕುರುಡಾಗಿದೆ ಎಂದು ಕಿಡಿ ಕಾರಿದರು.

ಮುಸ್ಲಿಂ ರಾಷ್ಟ್ರಗಳ ಒಕ್ಕೂಟ ಸೇರಿದಂತೆ ಇಡೀ ಜಗತ್ತು ಇಸ್ರೇಲ್‌ನ ಈ ಅಮಾನವೀಯ ಹತ್ಯಾಕಾಂಡವನ್ನು ವಿರೋಧಿಸುತ್ತಿಲ್ಲದಿರುವುದು ಆಘಾತಕಾರಿ ವಿಷಯ. ಇದುವರೆಗೂ ಇಸ್ರೆಲ್ ದಾಳಿಯಿಂದ ಸುಮಾರು 50 ಸಾವಿರ ಪ್ಯಾಲೆಸ್ಟಿನರು ಹತರಾಗಿದ್ದಾರೆ. ಇದರಲ್ಲಿ ಅರ್ಧದಷ್ಟು ಮಕ್ಕಳು ಸಾವನ್ನಪ್ಪಿರುವುದು ಅತ್ಯಂತ ದಾರುಣ ಘಟನೆಯಾಗಿದೆ. ನಾವು ಪ್ಯಾಲೆಸ್ಟಿನ್ ಜನತೆಗೆ ಮಾನವೀಯ ದೃಷ್ಟಿಯಿಂದ ಬೆಂಬಲ ನೀಡಬೇಕಿದೆ ಎಂದು ಹೇಳಿದರು.

ಮಹಾತ್ಮ ಗಾಂಧಿ ಅವರ ಕಾಲದಿಂದಲೂ ಪ್ಯಾಲೆಸ್ಟಿನ್ ಸ್ವಾತಂತ್ರ್ಯ ಹೋರಾಟವನ್ನು ಭಾರತ ಬೆಂಬಲಿಸಿದೆ. ಪ್ರಸ್ತುತ ಭಾರತ ಸರ್ಕಾರವು ಇಸ್ರೇಲ್‌ನ ವಿರುದ್ಧ ತಕ್ಷಣವೇ ಗಂಭೀರ ನಿಲುವು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಜಿಲ್ಲಾಧ್ಯಕ್ಷ ರಫತ್ ಖಾನ್, ರಾಜ್ಯ ಕಾರ್ಯದರ್ಶಿ ಮೌಲಾನಾ ಅಕ್ರಮ್, ಜಿಲ್ಲಾ ಕಾರ್ಯದರ್ಶಿ ಆಯೇಶಾ ಜಬಿ, ರಾಜ್ಯ ಖಜಾಂಚಿ ಅಮ್ಜದ್ ಖಾನ್, ಜಿಲ್ಲಾ ಮುಖಂಡರಾದ ಸಫಿಯುಲ್ಲಾ, ಫಿರ್ದೋಸ್, ಫರ್ಧೀನ್, ಮೌಲಾನಾ ನೂರುದ್ದೀನ್, ಅಲ್ತಾಫ್, ತಬ್ರೇಜ್ ಸೇಠ್, ಮನ್‌ಸೂರ್ ಖಾನ್, ಸುಹೇಲ್ ಆತಿಫ್, ಫೈರೋಜ್ ಮತ್ತಿತರರಿದ್ದರು.

11ನೇ ವರ್ಷದ ಚಿರಸ್ಮರಣೆ



ಶ್ರೀ ಹೆಚ್.ಎಸ್. ಪ್ರೇಮಕುಮಾರ್
(ಮಹದೇವ) AEE, PWD, Mysuru
ಜನನ: 22.07.1958 ಮರಣ: 23.03.2014
ನೀವು ನಮ್ಮನ್ನಗಲಿ ಇಂದಿಗೆ
11 ವರ್ಷ ಕಳೆದರೂ
ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ ರೇಖಾ ಕೆ.ಎಸ್.,
ಸುಷ್ಮಾ ಎಸ್. & ಶರತ್ ಹೆಚ್.ಪಿ,
ರೇಷ್ಮ ಎಂ.ಎಸ್. & ಭರತ್ ಹೆಚ್.ಪಿ
ಮೊಮ್ಮಕ್ಕಳು
Ph: 9886542614 / 9164309130

